ಸಂಪುಟ: 04 ಸಂಚಿಕೆ: 93 ಪುಟಗಳು: 08 ಭಾನುವಾರ 16 ಜೂನ್ 2024
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

ಮುಂಜಾನೆ ಮಾತು
ಇತರರಿಗಾಗಿ ನಿಮ್ಮ ಸ್ವಂತಿಕೆಯನ್ನು ಎಂದಿಗೂ ಬಿಟ್ಟುಕೊಡಬೇಡಿ. ಏಕೆಂದರೆ ಈ ಪ್ರಪಂಚದಲ್ಲಿ ನಿಮ್ಮ ಪಾತ್ರವನ್ನು ನಿಮಗಿಂತ ಚೆನ್ನಾಗಿ ಯಾರೂ ನಿಭಾಯಿಸಲು ಸಾಧ್ಯವಿಲ್ಲ.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಜೂ.17 ಪೋಕ್ಸೋ ಪ್ರಕರಣ ಸಂಬಂಧ ವಿಚಾರಣೆಗೆ ಹಾಜರು

• ಉದಯವಾಹಿನಿ, ಬೆಂಗಳೂರು

ಜೂನ್.17ರಂದು ಪೋಕ್ಸೋ ಪ್ರಕರಣ ಸಂಬಂಧ ಸಿಐಡಿ ನೀಡಿರುವ ನೋಟಿಸ್ ಹಿನ್ನಲೆಯಲ್ಲಿ ವಿಚಾರಣೆಗೆ ಪೊಲೀಸರ ಮುಂದೆ ಹಾಜರಾಗುವುದಾಗಿ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ತಿಳಿಸಿದ್ದಾರೆ. ನಾನು ಪೋಕ್ಸೋ ಕೇಸ್ ಸಂಬಂಧ ಸೋಮವಾರ ವಿಚಾರಣೆ ಹೋಗುತ್ತೇನೆ.ನಿಗದಿತ ಕಾರ್ಯಕ್ರಮದ ನಿಮಿತ್ತ ದೆಹಲಿಗೆ ಹೋಗಿದ್ದೆ. ಹೀಗಾಗಿ ಈ ಹಿಂದೆ ವಿಚಾರಣೆಗೆ ಹಾಜರಾಗಿರಲಿಲ್ಲ ಎಂದರು. ಜೂನ್.17ರ ಸೋಮವಾರದಂದು ವಿಚಾರಣೆಗೆ ಬರುವುದಾಗಿ ನಾನು ಮೊದಲೇ ತಿಳಿಸಿದ್ದೆ. ಹೈಕೋರ್ಟ್ ಸಹ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ. ಅಲ್ಲದೇ ಬಂಧಿಸದಂತೆ ತಡೆಯಾಜ್ಞೆ ನೀಡಿದೆ. ಈ ಹಿನ್ನಲೆಯಲ್ಲಿ ನಾನು ಜೂನ್.17ರ ಸೋಮವಾರದಂದು ಸೋಮವಾರ ನಾನು ವಿಚಾರಣೆಗೆ ಹೋಗುತ್ತಿದ್ದೇನೆ ಎಂದರು.

ಯಾರೋ ದೂರು ಕೊಟ್ಟ ಮಾತ್ರಕ್ಕೆ ಬಂಧನ ಅಂದರೆ ಹೇಗೆ: ಶಾಮನೂರು

• ಉದಯವಾಹಿನಿ,ದಾವಣಗೆರೆ

'ಆರೋಪ ಸಾಬೀತಾದ ಮೇಲೆ ಬಂಧನ ಅಂದರೆ ಸರಿ. ಯಾರೋ ಹೆಣ್ಣುಮಗಳು ದೂರು ಕೊಟ್ಟ ಮಾತ್ರಕ್ಕೆ ಬಂಧನ ಅಂದರೆ ಹೇಗೆ ಅದಕ್ಕೆ ಅರ್ಥ ಇದೆಯೇ' ಎಂದು ಕಾಂಗ್ರೇಸ್ ಶಾಸಕ ಶಾಮನೂರು ಶಿವಶಂಕರಪ್ಪ ಪ್ರಶ್ನಿಸಿದರು. 'ಯಾರೋ ದಾರಿಯಲ್ಲಿ ಹೋಗೋರು ಕಂಪ್ಲೆಂಟ್ ಕೊಟ್ರೆ ಅರೆಸ್ಟ್ ಎಂದರೆ ಏನ್ ಅರ್ಥ. ಆಕೆ 55 ಜನರ ವಿರುದ್ಧವೂ ದೂರು ನೀಡಿದ್ದಾಳೆ. ಇಂತಹದಕ್ಕೆ ಬೆಲೆ ಇದೇಯೇ' ಎಂದು ಪ್ರಶ್ನಿಸಿದರು. 'ನಟ ದರ್ಶನ್ ಮಾಡಿದ್ದು ತಪ್ಪು, ಯಾರೂ ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದು. ಬುದ್ಧಿ ಹೇಳಿ ಕಳಿಸಬೇಕಿತ್ತು. ಅದನ್ನು ಬಿಟ್ಟು ಸಾಯುವ ಹಾಗೆ ಹೊಡೆಯಬಾರದಿತ್ತು' ಎಂದು ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯಿಸಿದರು. 'ದರ್ಶನ್ ಮೇಲೆ ಕ್ರಮ ಕೈಗೊಳ್ಳುವಂತೆ ಅಖಿಲ ಭಾರತ ವೀರಶೈವ ಮಹಾಸಭಾದಿಂದ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ' ಎಂದು ಹೇಳಿದರು.

ಖಾದರ್ ಸಾಮ್ರಾಜ್ಯದಲ್ಲಿ ಪಾಕ್ ಕುನ್ನಿಗಳು ಇನ್ನೂ ಇದ್ದಾರೆ:

• ಉದಯವಾಹಿನಿ, ಮಂಗಳೂರು

'ಪಾಕಿಸ್ತಾನದ ಕುನ್ನಿಗಳೆ... ಎಂದು ಘೋಷಣೆ ಕೂಗಿದರೆ ಪಾಕ್ ಕುನ್ನಿಗಳು ಪ್ರಚೋದನೆಗೆ ಒಳಗಾಗಬೇಕು. ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಸಾಮ್ರಾಜ್ಯ ಉಳ್ಳಾಲದಲ್ಲಿ ಪಾಕ್ ಕುನ್ನಿಗಳು ಇನ್ನೂ ಇದ್ದಾರೆ ಅಂದ ಹಾಗಾಯಿತು ಎಂದು ವಿಧಾನ ಪರಿಷತರ ಸದಸ್ಯರಾಗಿ ಆಯ್ಕೆಯಾಗಿರುವ ಸಿ.ಟಿ.ರವಿ ಹೇಳಿದರು.
ಉಳ್ಳಾಲ ತಾಲ್ಲೂಕಿನ ಬೋಳಿಯಾರ್ ಈಚೆಗೆ ಬಿಜೆಪಿ ಕಾರ್ಯಕರ್ತರಿಬ್ಬರಿಗೆ ಚೂರಿ ಇರಿದ ಘಟನೆಗೆ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಪ್ರತಿಕ್ರಿಯಿಸಿದ ಅವರು, 'ಮಂಗಳೂರು ಪೊಲೀಸ್ ಕಮಿಷನರ್ ಅವರು ಪಾಕಿಸ್ತಾನದ ಕುನ್ನಿಗಳನ್ನು ಗುರುತಿಸಿ, ಅವರ ಮೇಲೆ ಪ್ರಕರಣ ಹಾಕಿ ಅವರನ್ನ ಗಡೀಪಾರು ಮಾಡಬೇಕು. ಅಥವಾ ಖಾದರ್ ಅವರೇ ಗುರುತಿಸಿ ಅವರನ್ನು ಪಾಕಿಸ್ತಾನಕ್ಕೆ ಕಳುಹಿಸಬೇಕು' ಎಂದರು. 'ಭಾರತ್ ಮಾತಾಕೀ ಜೈ ಎಂದಾಗ ಹಾಗೂ ಪಾಕಿಸ್ತಾನಕ್ಕೆ ಬೈದಾಗ ನಮಕ್ ಹರಾಮ್‌ಗಳು ಮಾತ್ರ ಪ್ರಚೋದನೆಗೆ ಒಳಗಾಗುತ್ತಾರೆ. ಆದರೆ, 'ಪಾಕಿಸ್ತಾನದ ಕುನ್ನಿಗಳೇ ಎಂದಿದ್ದಕ್ಕೆ ಮಸೀದಿಯ ಎರಡೂ ಬದಿ ನಿಂತಿದ್ದವರು ಪ್ರಚೋದನೆಗೊಳಗಾಗಿ ಚೂರಿಯಿಂದ ಇರಿದಿದ್ದಾರೆ' ಎಂದು ಮಂಗಳೂರಿನ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ಹೇಳಿಕೆ ನೀಡಿದ್ದಾರೆ. ಅವರು ಏಕೆ ಪಾಕಿಸ್ತಾನದ ಕಮಿಷನರ್ ಥರ ವರ್ತಿಸುತ್ತಾರೋ ತಿಳಿಯದು. ಅವರು ಪಾಕಿಸ್ತಾನದ ಅಧಿಕಾರಿಯಲ್ಲ, ಭಾರತದ ಪೊಲೀಸ್ ಅಧಿಕಾರಿ. ಅವರ ಹೇಳಿಕೆ ಸಮರ್ಥನೀಯವಲ್ಲ. ಅದನ್ನು ವಾಪಸ್ ಪಡೆಯಬೇಕು ಎಂದರು.

ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ 'ಕೋಟಾ ಪೂಜಾರಿ' ರಾಜೀನಾಮೆ

• ಉದಯವಾಹಿನಿ, ಬೆಂಗಳೂರು

ಸಂಸದರಾಗಿ ಆಯ್ಕೆಯಾದ ನಂತ್ರ, ಕೋಟಾ ಶ್ರೀನಿವಾಸ ಪೂಜಾರಿಯವರು ವಿಧಾನಪರಿಷತ್ ಸದಸ್ಯಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಮೂಲಕ ವಿಧಾನ ಪರಿಷತ್ ವಿಪಕ್ಷ ಸ್ಥಾನಕ್ಕೂ ರಾಜೀನಾಮೆ ನೀಡಿದಂತೆ ಆಗಿದೆ.ಇಂದು ಸಭಾಪತಿ ಬಸವರಾಜ ಹೊರಟ್ಟಿಯವರನ್ನು ಭೇಟಿಯಾದಂತ ನೂತನ ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಅವರು, ತಮ್ಮ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿದರು. ಅಂದಹಾಗೇ ಕೋಟಾ ಶ್ರೀನಿವಾಸ ಪೂಜಾರಿ ಅವರು ಲೋಕಸಭಾ ಚುನಾವಣೆಯಲ್ಲಿ ಉಡುಪಿ-ಚಿಕ್ಕಮಗಳೂರು ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದರು. ಬಿಜೆಪಿ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದರು. ಈ ಹಿನ್ನಲೆಯಲ್ಲಿ ವಿಧಾನಪರಿಷತ್ ಸದಸ್ಯ ಸ್ಥಾನ, ವಿಪಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಗ್ಯಾರಂಟಿ ಸರ್ಕಾರದ ಕಾರ್ಯ ವೈಖರಿ ಪೆಟ್ರೋಲ್, ಡೀಸೆಲ್ ದರ ದುಬಾರಿ

ರಾಜ್ಯದ ಜನತೆಗೆ ಪೆಟ್ರೋಲ್, ಡೀಸೆಲ್ ದರ ಏರಿಕೆ ಶಾಕ್, ಶೇ.4ರಷ್ಟು ತೆರಿಗೆ ಹೆಚ್ಚಿಸಿದ ರಾಜ್ಯ ಸರಕಾರ!

ಗ್ಯಾರಂಟಿ ಬರೆ...! ಪೆಟ್ರೋಲ್, ಡೀಸೆಲ್ ದರ ಹೊರೆ, ದರ ಏರಿಸಿದ ಸಿದ್ದು ಸರ್ಕಾರ

• ಉದಯವಾಹಿನಿ, ಬೆಂಗಳೂರು

ಲೋಕಸಭೆ ಚುನಾವಣೆ ಮುಗಿದ ಬೆನ್ನಲ್ಲೇ ರಾಜ್ಯ ಸರ್ಕಾರ ವಾಹನ ಸವಾರರ ಜೇಬಿಗೆ ಕತ್ತರಿ ಪ್ರಯೋಗ ಮಾಡಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದ ಮೇಲಿನ ತೆರಿಗೆ ಹೆಚ್ಚಳ ಮಾಡಿದೆ. ಶನಿವಾರದಿಂದಲೇ ಅನ್ವಯವಾಗುವಂತೆ ರಾಜ್ಯಾಧ್ಯಂತ ಪ್ರತಿ ಲೀಟರ್ ಪ್ರೆಟೋಲ್ ದರವನ್ನು 3 ರೂ. ಡೀಸೆಲ್ ದರನ್ನು 3 ರೂ. 50 ಪೈಸೆಗೆ ಹೆಚ್ಚಿಸಿ ಆದೇಶ ಹೊರಡಿಸಿದೆ. ಇದರಿಂದ ಇನ್ನು ಮುಂದೆ ಪೆಟ್ರೋಲ್ ದರ ಲೀಟರ್‌ಗೆ 103 ರೂ.ಗೆ ಹಾಗೂ ಡೀಸೆಲ್ 91 ರೂ. 50 ಪೈಸೆ ಏರಿಕೆಯಾಗಿದೆ. ಈ ಹಿಂದೆಯೇ ಡೀಸೆಲ್ ಮತ್ತು ಪೆಟ್ರೋಲ್ ಮಾರಾಟ ತೆರಿಗೆ ದರವನ್ನು ಏರಿಸಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದಿತ್ತಾದರೂ ಲೋಕಸಭೆ ಚುನಾವಣೆ ಹಿನ್ನಲೆ ತಡೆಹಿಡಿಯಲಾಗಿತ್ತು.
ವಿರೋಧ ಪಕ್ಷಗಳು ಇದನ್ನೇ ಅಸ್ತ್ರಮಾಡಿಕೊಂಡರೆ ಫಲಿತಾಂಶ ದಲ್ಲಿ ಹಿನ್ನಡೆಯಾಗಬಹುದೆಂಬ ಕಾರಣಕ್ಕೆ ಸರ್ಕಾರ ದರ ಹೆಚ್ಚಿಸುವ ದುಸ್ಸಾಹಸಕ್ಕೆ ಮುಂದಾಗಿರಲಿಲ್ಲ.ಲೋಕಸಭೆ ಚುನಾವಣೆ ಮುಗಿದ ಬೆನ್ನಲ್ಲೇ ದರ ಹೆಚ್ಚಿಸುವ ಮೂಲಕ ವಾಹನ ಸವಾರರ ಜೇಬಿಗೆ ಕತ್ತರಿ ಬಿದ್ದಂತಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಬೇಕಾದ ಅಗತ್ಯ ಇರುವ ಕಾರಣ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ ಎಂದು ತಿಳಿದು ಬಂದಿದೆ.

ಇದರಿಂದಾಗಿ ಪೆಟ್ರೋಲ್ ದರ 100 ರಿಂದ 103 ರೂ ಡೀಸೆಲ್ ಬೆಲೆ 88 ರೂ.ಗಳಿಂದ 91.50 ರೂ. ಏರಿಕೆಯಾಗಿದೆ. ಮಾರಾಟ ತೆರಿಗೆ ಏರಿಕೆ ಮೂಲಕ ಗ್ರಾಹಕರ ಜೇಬಿಗೆ ರಾಜ್ಯ ಸರ್ಕಾರ ಹೆಚ್ಚುವರಿ ಭಾರ ಹೊರಿಸಿದೆ. ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ 52 ಸಾವಿರ ಕೋಟಿ ರೂ. ಹೊಂದಿಸಲು ಸರ್ಕಾರ ತೀವ್ರ ಹೆಣಗಾಟ ನಡೆಸಿದೆ. ಗ್ಯಾರಂಟಿಗಳ ಜತೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಒತ್ತಡವೂ ಸ್ವಪಕ್ಷದ ಶಾಸಕರಿಂದಲೇ ಹೆಚ್ಚತೊಡಗಿದೆ. ದೀರ್ಘಾವಧಿ ಅನುಕೂಲ ಉದ್ದೇಶಿತ ಯೋಜನೆಗಳನ್ನು ವರ್ಷಾನುಗಟ್ಟಲೆ ನಿಲ್ಲಿಸಿದರೆ ಬೊಕ್ಕಸಕ್ಕೂ ಭಾರ, ರಾಜ್ಯದ ಅಭಿವೃದ್ಧಿ ಚಕ್ರ ಹಿಂದೆ ಸಾಗಲಿದೆ ಎಂಬ ಆತಂಕವೂ ಸರ್ಕಾರವನ್ನು ಬಾಧಿಸುತ್ತಿದೆ. ವಿದ್ಯುತ್, ಆಸ್ತಿ ಮಾರ್ಗಸೂಚಿ ದರ, ಮುದ್ರಾಂಕ ಶುಲ್ಕ ಏರಿಸಿದೆ. ಅಬಕಾರಿ, ವಾಣಿಜ್ಯ, ನೋಂದಣಿ ಮತ್ತು ಮುದ್ರಾಂಕ, ಗಣಿ ಇಲಾಖೆ ತೆರಿಗೆ ಸಂಗ್ರಹ ಗುರಿ ಹೆಚ್ಚಿಸಿದ್ದರೂ ನಿರೀಕ್ಷಿತ ಫಲ ನೀಡಿಲ್ಲ. ಇದೀಗ ಆರ್ಥಿಕ ಸಂಪನ್ಮೂಲ ಕ್ರೋಡೀಕರಣ ಭಾಗವಾಗಿ ಪೆಟ್ರೋಲ್, ಡೀಸೆಲ್ ಮೇಲಿನ ಮಾರಾಟ ತೆರಿಗೆ ಹೆಚ್ಚಳಕ್ಕೆ ಸರ್ಕಾರ ಮೊರೆ ಹೋಗಿದೆ ಎಂದು ಮೂಲಗಳು ತಿಳಿಸಿವೆ.

ತೀವ್ರ ವಿರೋಧ

ಲೋಕಸಭೆ ಚುನಾವಣೆ ಪೂರ್ವದಲ್ಲಿ ಪೆಟ್ರೋಲ್, ಡೀಸೆಲ್ ಮೇಲಿನ ಮಾರಾಟ ತೆರಿಗೆ ಏರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿತ್ತು. ಆದರೆ ಲೋಕಸಭೆ ಚುನಾವಣೆ ಹೊತ್ತಲ್ಲಿ ಏರಿಸಿದರೆ ಜನರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ. ಪ್ರತಿಪಕ್ಷಗಳು ಇದನ್ನೇ ಅಸ್ತ್ರ ಮಾಡಿಕೊಂಡು ಮುಗಿಬೀಳಲಿವೆ ಎಂಬ ಕಾರಣಕ್ಕೆ ಮುಂದೂಡಿತ್ತು ಎಂದು ಹೇಳಲಾಗಿದೆ. ಲೋಕಸಭೆ ಚುನಾವಣೆ ಮುಗಿದು, ಫಲಿತಾಂಶ ಪ್ರಕಟವಾಗಿ, ಕೇಂದ್ರದಲ್ಲಿ ಎನ್‌ಡಿಎ ಆಡಳಿತ ಚುಕ್ಕಾಣಿ ಹಿಡಿದಾಗಿದೆ. ಈ ಹಿನ್ನೆಲೆಯಲ್ಲಿ ಪೆಟ್ರೋಲ್, ಡೀಸೆಲ್ ಮಾರಾಟ ತೆರಿಗೆ ಏರಿಕೆ ಮಾಡಿದೆ. ಬೊಕ್ಕಸಕ್ಕೆ ಒಂದಿಷ್ಟು ಆದಾಯ ಹರಿದುಬರುವ ನಿರೀಕ್ಷೆಯಿಟ್ಟುಕೊಂಡಿದೆ. ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

1. ತಕ್ಷಣದಿಂದ ಜಾರಿಗೆ ಬರುವಂತೆ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಹೆಚ್ಚಿಸಿದ ಕರ್ನಾಟಕ ರಾಜ್ಯ ಸರಕಾರ
2. ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಕರ್ನಾಟಕ ಮಾರಾಟ ತೆರಿಗೆ ಸುಮಾರು ಶೇಕಡಾ 4ರಷ್ಟು ಏರಿಕೆ
3. ಇದರಿಂದ ಲೀಟರ್‌ಗೆ 3 ರೂ.ಗಿಂತ ಹೆಚ್ಚು ಏರಿಕೆ ಕಾಣಲಿದೆ ಪೆಟ್ರೋಲ್ , ಡೀಸೆಲ್ ದರ
4. ಬೆಂಗಳೂರಿನಲ್ಲಿ 102.87 ರೂ.ಗೆ ತಲುಪಲಿದ ಪೆಟ್ರೋಲ್ ದರ, 88.95 ರೂ.ಗೆ ಮುಟ್ಟಲಿದೆ ಲೀಟರ್ ಡೀಸೆಲ್ ಬೆಲೆ

ಲೀಟರ್‌ಗೆ 3 ರೂ.ಗಿಂತ ಹೆಚ್ಚು ಏರಿಕೆ

ಬೆಂಗಳೂರಲ್ಲಿ ಇಂದಿನ ಪೆಟ್ರೋಲ್ ಬೆಲೆ ಪ್ರತಿ ಲೀಟರ್‌ಗೆ 99.84 ರೂ. ಇತ್ತು. ಬೆಲೆ ಏರಿಕೆಯಿಂದ ದರ 102.84 ರೂ. ತಲುಪಿದೆ. ಡೀಸೆಲ್ ಹಳೆಯ ದರ ಬೆಂಗಳೂರಲ್ಲಿ ಪ್ರತಿ ಲೀಟರ್‌ಗೆ 85.93 ರೂ. ಇತ್ತು. ಇಂದಿನಿಂದ ಡೀಸೆಲ್ ಬೆಲೆ 89.43ರೂ. ತಲುಪಿದೆ. ಮೈಸೂರು ನಗರದಲ್ಲಿ ಪ್ರತಿ ಲೀಟರ್ ಪೆಟ್ರೋಲ್‌ಗೆ 99.84 ರೂ ಇತ್ತು. ಈಗ ನೂತನ ದರದಂತೆ 102.84 ಆಗಿದೆ. ಡಿಸೇಲ್ ದರ 85.93 ರೂ ಇತ್ತು ಈಗ ಹೊಸ ದರ 89.43 ರೂಗೆ ತಲುಪಿದೆ.

ಹೊಸ ತೆರಿಗೆಗಳು ತಕ್ಷಣದಿಂದಲೇ ಜಾರಿಗೆ

ಈ ಕ್ಷಣದಿಂದಲೇ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಏರಿಕೆ ಮಾಡಿ ರಾಜ್ಯ ಸರ್ಕಾರ ಆದೇಶ ನೀಡಿದೆ. ಸರಕಾರ ಪೆಟ್ರೋಲ್ ,ಡೀಸೆಲ್ ಮೇಲಿನ ತೆರಿಗೆಯನ್ನು ಹೆಚ್ಚಿಸಿದೆ. ಹಣಕಾಸು ಇಲಾಖೆ ಹೊರಡಿಸಿದ ಅಧಿಸೂಚನೆ ಪ್ರಕಾರ, ಪೆಟ್ರೋಲ್ ಮೇಲಿನ ಕರ್ನಾಟಕ ಮಾರಾಟ ತೆರಿಗೆ (ಕೆಎಸ್‌ಟಿ)ಸರಕಾರ ಶೇ. 25.92ರಿಂದ ಶೇ. 29.84ಕ್ಕೆ ಹೆಚ್ಚಿಸಿದೆ. ಇದೇ ರೀತಿ ಡೀಸೆಲ್ ಮೇಲಿನ ತೆರಿಗೆಯನ್ನು ಶೇ. 14.34ರಿಂದ ಶೇ. 18.44ಕ್ಕೆ ಏರಿಕೆ ಮಾಡಿದೆ. ಈ ಹೊಸ ತೆರಿಗೆಗಳು ತಕ್ಷಣದಿಂದಲೇ ಜಾರಿಗೆ ಬರಲಿವೆ ಎಂದು ಶನಿವಾರ ಹೊರಡಿಸಲಾದ ಕರ್ನಾಟಕ ರಾಜ್ಯ ಪತ್ರದಲ್ಲಿ ತಿಳಿಸಿದೆ.

ನ.4, 2021ರಂದು ಕೇಂದ್ರ ಸರಕಾರ ಪೆಟ್ರೋಲ್ , ಡೀಸೆಲ್ ದರವನ್ನು ಕ್ರಮವಾಗಿ 5 ರೂ. ಮತ್ತು 10 ರೂ. ಇಳಿಕೆ ಮಾಡಿತ್ತು. ಇದಾದ ಬೆನ್ನಲ್ಲೇ ಆಗಿನ ಬಸವರಾಜ ಬೊಮ್ಮಾಯಿ ಸರಕಾರ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರನ್ನು ಲೀಟರ್‌ಗೆ ತಲಾ 7 ರೂ. ಇಳಿಸಿತ್ತು.ಇದರಿಂದ ಒಟ್ಟಾರೆ ಪೆಟ್ರೋಲ್ ದರ ಲೀಟರ್‌ಗೆ 12 ರೂ. ಹಾಗೂ ಡೀಸೆಲ್ ದರ ಲೀಟರ್‌ಗೆ 17 ರೂ. ಇಳಿಕೆಯಾಗಿತ್ತು. ಇದರಿಂದ ರಾಜ್ಯದಲ್ಲಿ ಲೀಟರ್ ಪೆಟ್ರೋಲ್ ದರ 113.93 ರೂ.ನಿಂದ ಲೀಟರ್‌ಗೆ 100.63 ರೂ.ಗೆ ಹಾಗೂ ಡೀಸೆಲ್ ದರ ಲೀಟರ್‌ಗೆ 104.50 ರೂ.ನಿಂದ 85.03 ರೂ.ಗೆ ಇಳಿದಿತ್ತು. ಅಲ್ಲಿಂದ ಇಲ್ಲಿಯವರೆಗೆ ಕಳೆದ ಎರಡೂವರೆ ವರ್ಷಗಳಲ್ಲಿ ದರದಲ್ಲಿ ಹೆಚ್ಚಿನ ಬದಲಾವಣೆ ಆಗಿರಲಿಲ್ಲ. ಆದರೆ, ಇದೀಗ ಏಕಾಏಕಿ ಪೆಟ್ರೋಲ್ ಮತ್ತು ಡೀಸೆಲ್ ದರ 3 ರೂ.ಗಿಂತ ಹೆಚ್ಚು ಏರಿಕೆ ಕಂಡಿದೆ.

ಮೊದಲ ಬಾರಿಗೆ ಭಾರೀ ಏರಿಕೆ

ವಿಪಕ್ಷಗಳ ಆರೋಪಕ್ಕೆ ತಿರುಗೇಟು ನೀಡಿದ ಸಿಎಂ

• ಉದಯವಾಹಿನಿ, ಮೈಸೂರು

ಮಾಜಿ ಸಿಎಂ ಯಡಿಯೂರಪ್ಪ ವಿರುದ್ಧ ಪೋಕ್ಸೋ ಕೇಸ್‌ಗೆ ಸಂಬಂಧಿಸಿದಂತೆ ವಾರಂಟ್ ಜಾರಿ ವಿಚಾರವಾಗಿ ಕಾಂಗ್ರೇಸ್ ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದ್ದ ವಿಪಕ್ಷ ನಾಯಕರಿಗೆ ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ. ದೇವೇಗೌಡರ ಕುಟುಂಬದ ನಂತರ ಯಡಿಯೂರಪ್ಪ ಅವರ ಕುಟುಂಬವನ್ನು ಗುರಿಮಾಡಲಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಮೈಸೂರಿನಲ್ಲಿ ಪ್ರತಿಕ್ರಿಯೆ ನೀಡಿದ ಸಿಎಂ ಸಿದ್ದಾಮಯ್ಯ, ನಮ್ಮ ಮೇಲೆ, ಡಿ.ಕೆ. ಶಿವಕುಮಾರ್, ರಾಹುಲ್ ಗಾಂಧಿ ಅವರ ಮೇಲೆ ಕೇಸು ಹಾಕಿರುವುದನ್ನು ಏನೆಂದು ಕರೆಯಬೇಕು ರಾಹುಲ್ ಗಾಂಧಿ ಅವರ ಸಂಸದ ಸ್ಥಾನವನ್ನೇ ರದ್ದುಗೊಳಿಸಿದ್ದನ್ನು ಏನೆಂದು ಕರೆಯುವುದು ಎಂದು ಪ್ರಶ್ನಿಸಿದರು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜೈಲಿಗೆ ಕಳಿಸಿದ್ದನ್ನು ಏನೆಂದು ಕರೆಯಬೇಕು ಇದು ದ್ವೇಷದ ರಾಜಕಾರಣವೋ ಇಲ್ಲ ಪ್ರೀತಿಯ ರಾಜಕಾರಣ ಎಂದು ಕರೆಯಬೇಕೋ ಸೇಡಿನ ರಾಜಕಾರಣ ಮಾಡುವುದು ಅವರು ನಾವು ಯಾವತ್ತೂ ಸೇಡಿನ ರಾಜಕಾರಣ ಮಾಡುವುದಿಲ್ಲ ಎಂದರು.ನಾನು ನಿನ್ನೆ ಮೊನ್ನೆ ರಾಜಕೀಯಕ್ಕೆ ಬಂದಿಲ್ಲ. ದ್ವೇಷದ ರಾಜಕಾರಣವನ್ನು ನಾನು ಇಂದಿನವರೆಗೆ ಯಾರ ಮೇಲೂ ಮಾಡಿಲ್ಲ. ಅದು ಬಿಜೆಪಿಯವರ ಕೆಲಸ ಎಂದು ಹೇಳಿದರು.

ಶೀಘ್ರವೇ ಜಿಲ್ಲಾ, ತಾಲ್ಲೂಕು ಪಂಚಾಯತಿ ಚುನಾವಣೆ

ಶೀಘ್ರದಲ್ಲೇ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಚುನಾವಣೆ ನಡೆಸಲಾಗುವುದು.ನೀಟ್ ಪರೀಕ್ಷೆ ಬರೆದವರಿಗೆ ಗ್ರೇಸ್ ಮಾರ್ಕ್ಸ್ ಕೊಟ್ಟು ಪಾಸ್ ಮಾಡಿರುವುದು ಸರಿಯಲ್ಲ. ಇದರಿಂದ ಅರ್ಹ ಅಭ್ಯರ್ಥಿಗಳಿಗೆ ಇದರಿಂದ ಮೋಸವಾಗಲಿದೆ. ಹೀಗಾಗಿ ನೀಟ್ ಮರುಪರೀಕ್ಷೆ ನಡೆಸಬೇಕು. ನೀಟ್ ಅಕ್ರಮದ ಬಗ್ಗೆ ತನಿಖೆ ನಡೆಸುವಂತೆ ಪತ್ರ ಬರೆಯುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಮಾಹಿತಿ ನೀಡಿದ್ದಾರೆ ಎಂದು ಹೇಳಿದ್ದಾರೆ. ದರ್ಶನ್ ಮೇಲಿನ ಕೊಲೆ ಆರೋಪ ಪ್ರಕರಣದಲ್ಲಿ ಯಾವ ಪ್ರಭಾವಿಗಳೂ ನನ್ನನ್ನು ಭೇಟಿಯಾಗಲು ಬಂದಿಲ್ಲ. ಬಿಜೆಪಿಯವರು ಬೇಕೆಂದೇ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ನಾವು ಈ ನೆಲದ ಕಾನೂನಿನ ಪ್ರಕಾರ ನಡೆದುಕೊಳ್ಳುತ್ತೇವೆ. ಎಂದು ಹೇಳಿದ್ದಾರೆ.

ದರ್ಶನ್ &ಗ್ಯಾಂಗ್ ಮತ್ತೆ 5 ದಿನ ಪೊಲೀಸ್ ವಶಕ್ಕೆ

• ಉದಯವಾಹಿನಿ, ಬೆಂಗಳೂರು

ಚಿತ್ರದುರ್ಗದ ನಿವಾಸಿ 33 ವರ್ಷದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಬಂಧಿತರಾಗಿರುವ ನ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ಪ್ರಾರಬ್ಧ ಕರ್ಮವಾಸನೆಯೊಂದೇ ನಾಲ್ಕು ಪ್ರಕಾರ

ಸಜಗುಣರ ಕೈವಲ್ಯಪದ್ಧತಿಯ ಜ್ಞಾನಪ್ರತಿಪಾದನಸ್ಥಲದ ಮಾತು. ಕರ್ಮ ಕ್ರಿಯೆ ಫಲ ಪ್ರತಿಕ್ರಿಯೆ ನೀಡುತ್ತದೆ. ಫಲ ನೀಡಲಾರಂಭಿಸಿದ ಕರ್ಮ ಪ್ರಾರಬ್ಧ ಕರ್ಮ. ಈರುಳ್ಳಿ ಬೆಳ್ಳುಳ್ಳಿ ತಿಂದರೆ, ಅದಿದನ್ನು ಕುಡಿದರೆ ಅದರದರ ವಾಸನೆ! ನಾವು ಮಾಡುವ ಕರ್ಮ, ತಿನ್ನುವ ಆಹಾರ, ಮಾಡುವ ಸಹವಾಸ, ಇರುವ ಸ್ಥಳ ಪರಿಸರ ನಮ್ಮ ಸಂಸ್ಕಾರವನ್ನು ರೂಪಿಸುತ್ತದೆ. ಅಂತೆಯೇ ಸ್ವಸ್ವರೂಪ ತಿಳಿದ ಜೀವನ್ಮುಕ್ತರ ಸಂಸ್ಕಾರ ಮೂಲತಃ ಒಂದೇ ಆಗಿದ್ದರೂ ಕಾರ್ಯರೂಪದಲ್ಲಿ ನಾಲ್ಕು ವಿಧ. ಆತ್ಮಸ್ವರೂಪ ತಿಳಿದ ಬಳಿಕವೂ ವ್ಯವಹಾರ ಪ್ರವೃತ್ತಿ ತೀವ್ರ ಪ್ರಾರಬ್ಧ. ಘಟನಿರ್ಮಾಣದ ಬಳಿಕವೂ ಚಕ್ರ ತಿರುಗುವಂತೆ, ಫ್ಯಾನ್ ಬಂದ್ ಮಾಡಿದ ಬಳಿಕವೂ ತಿರುಗುವಂತೆ! ವ್ಯವಹಾರದಲ್ಲಿದ್ದರೂ ಗಮನ ಆತ್ಮನೆಡೆಗೆ. ಹಸು ಹೊರಗೆ ಮೇಯುವಾಗಲೂ ಕೊಟ್ಟಿಗೆಯ ಕರುವ ನೆನೆವಂತೆ. ಜ್ಞಾನವಾದ ಬಳಿಕ ಅನಿವಾರ್ಯ ವ್ಯವಹಾರ ಮಾತ್ರ ಮಾಡುತ್ತಾ ಬಾಕಿ ತತ್ತ್ವಶಾಸ್ತ್ರ ಚಿಂತನೆ,

ಪಠನ-ಉಪನ್ಯಾಸ ಮುಂತಾದವುಗಳ ಮೂಲಕ ಕಾಲಕಳೆಯುವವನದು ಮಧ್ಯಮ ಪ್ರಾರಬ್ಧ. ಜ್ಞಾನವಾದ ಬಳಿಕ ಪ್ರಾಪಂಚಿಕ ಕರ್ಮ ವಿಮುಖನಾಗಿ ಆತ್ಮಾನಂದ ದಲ್ಲಿಯೇ ಮುಳುಗುವವನದು ಮಂದ ಪ್ರಾರಬ್ಧ. ನಿರುಪಮ ಪರಿಪೂರ್ಣ ಸುಖರೂಪ ಪರಮಾತ್ಮನೇ ತಾನಾಗಿ ಕೇವಲ ತನ್ನಲ್ಲಿ ತಾನು ನೆಲೆನಿಂತವನದು ಸುಪ್ತ ಪ್ರಾರಬ್ಧ! ಇವರು ಭಿನ್ನವಾಗಿ ತೋರಿದರೂ ಇವರೆಲ್ಲರ ಮುಕ್ತಸ್ಥಿತಿ ಒಂದೇ!!!

ಮಹಾಭಾರತ - ಪಾಂಡವೋತ್ಪತ್ತಿ

• ಉದಯವಾಹಿನಿ, ಬೆಂಗಳೂರು

ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಜೂನ್ 17 ರಿಂದ 21ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಡಾ. ಜಗನ್ನಾಥಾಚಾರ್ಯರಿಂದ ಮಹಾಭಾರತ - ಪಾಂಡವೋತ್ಪತ್ತಿ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಬೆಂಗಳೂರು-560003 ಸರ್ವರಿಗೂ ಆದರದ ಸುಸ್ವಾಗತ.

ಪರಿಸರ ಉಳಿವಿಗೆ ವಿದ್ಯಾರ್ಥಿಗಳ ಸಹಭಾಗಿತ್ವ ಅತಿಮುಖ್ಯ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರಂ

ಪರಿಸರ ಉಳಿವಿಗೆ ವಿದ್ಯಾರ್ಥಿಗಳ ಸಹಭಾಗಿತ್ವ ಅತಿಮುಖ್ಯ ಎಂದು ಹೂಡಿ ಮಂಜುನಾಥ ಅವರು ತಿಳಿಸಿದರು. ಕ್ಷೇತ್ರದ ಹೂಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಸಸಿ ನೆಟ್ಟು, ವಿವಿಧ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದರು. ವಿದ್ಯಾರ್ಥಿಗಳು ಓದುವುದರ ಜೊತೆಗೆ ಪರಿಸರದ ಪರಿಪಾಠವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ ಎಂದರು. ವಿದ್ಯಾರ್ಥಿ ಜೀವನದಲ್ಲಿ ಪರಿಸರ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಪ್ರತಿಯೊಬ್ಬರು ಮುಂದಾಗಿ ಎಂದು ಮಿಡಿತ ಅಧ್ಯಕ್ಷ ಪರಿಸರ ಮಂಜು ನುಡಿದರು.

ಕಾರ್ಯಕ್ರಮದಲ್ಲಿ ಸುಮಾರು 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ಚಿತ್ರಕಲೆ, ಪ್ರಬಂಧ ಹಾಗೂ ಕವಿತೆ ಬರೆಯುವ ಸ್ಪರ್ಧೆಯಲ್ಲಿ ಭಾಗಿಯಾಗಿದ್ದರು. ಪ್ರಾಂಶುಪಾಲರಾದ ರಾಧ ಕಡೂರು, ಡಾ. ಅಜಿತ್ ಕುಮಾರ್, ಭಾಗ್ಯಮ್ಮ ಸರ್ವನ್, ಉಪೇಂದ್ರ, ಕೇಶವಮೂರ್ತಿ, ಕಿರಣ್, ವೆಂಕಟೇಶ್, ಲಕ್ಷ್ಮೀನಾರಾಯಣ, ಸೌಮ್ಯ, ಶಿವಪ್ಪ ಈ ಸಂದರ್ಭದಲ್ಲಿ ಇದ್ದರೂ.

ಬಿಜೆಪಿಗೆ ಮತ ಹಾಕಿದ್ದಕ್ಕೆ ಕಾಂಗ್ರೇಸ್ ಸರ್ಕಾರ ಸೇಡು: ಆರ್.ಅಶೋಕ್ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಲೋಕಸಭೆ ಚುನಾವಣೆಯಲ್ಲಿ ಕನ್ನಡಿಗರು ಬಿಜೆಪಿಗೆ ಮತ ಹಾಕಿದ್ದಕ್ಕೆ ಸೇಡು ತೀರಿಸಿಕೊಳ್ಳಲು ಹೊರಟಿದೆ ಈ ಜನವಿರೋಧಿ ಕಾಂಗ್ರೇಸ್ ಸರ್ಕಾರ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಜಾಲತಾಣದ ತಮ್ಮ ಖಾತೆಯಲ್ಲಿ ಈ ಕುರಿತು ಸಂದೇಶ ಹಂಚಿಕೊಂಡಿರುವ ಅವರು, ಅವೈಜ್ಞಾನಿಕ ಗ್ಯಾರಂಟಿಗಳಿಂದ ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಿರುವ ಕರ್ನಾಟಕ ಕಾಂಗ್ರೇಸ್ ಸರ್ಕಾರ ಕನ್ನಡಿಗರ ಮೇಲೆ ತೆರಿಗೆ ಭಾರ ಹೊರಿಸಿ ಖಜಾನೆ ತುಂಬಿಸಲು ಹೊರಟಿದೆ ಎಂದು ಕಿಡಿಕಾರಿದ್ದಾರೆ. ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ಹೆಚ್ಚಳ ಮಾಡಿ ಆದೇಶ ಹೊರಡಿಸಿರುವ ಸಿಎಂ ಸಿದ್ದರಾಮಯ್ಯ ಸರ್ಕಾರ ರಾಜ್ಯದಲ್ಲಿ ಪೆಟ್ರೋಲ್ ಬೆಲೆ 3 ರೂ. ಮತ್ತು ಡೀಸೆಲ್ ಬೆಲೆ 3.50 ರೂ. ಹೆಚ್ಚಳ ಮಾಡಿ ಸಾರ್ವಜನಿಕರ ಜೇಬಿಗೆ ಕತ್ತರಿ ಹಾಕಿದೆ ಎಂದು ಆರ್.ಅಶೋಕ್ ವಾಗ್ದಾಳಿ ಮಾಡಿದ್ದಾರೆ.

ಸೆಮಿಕಂಡಕ್ಟರ್ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತೇನೆ : ಹೆಚ್‌ಡಿಕೆ ಭರವಸೆ

• ಉದಯವಾಹಿನಿ, ಬೆಂಗಳೂರು

ಸೆಮಿಕಂಡಕ್ಟರ್ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಕೈ ಜೋಡಿಸಿ ಕೆಲಸ ಮಾಡುವುದಾಗಿ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದ್ದಾರೆ.

ಕೇಂದ್ರ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ನಿನ್ನೆ ಬೆಂಗಳೂರಿಗೆ ಆಗಮಿಸಿದ ಕುಮಾರಸ್ವಾಮಿ ಅವರು, ಜೆಪಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡುವ ವೇಳೆ ಸೆಮಿಕಂಡಕ್ಟರ್ ತಯಾರಿಸಲು ಬಂಡವಾಳ ಹೂಡಿಕೆಗೆ ಆಗಮಿಸಿರುವ ಅಮೇರಿಕಾದ ಕಂಪನಿಯೊಂದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೀಡಲಾಗುವ ಬೃಹತ್ ಪ್ರಮಾಣದ ಸಬ್ಸಿಡಿಯ ಬಗ್ಗೆ ಪ್ರಸ್ತಾಪಿಸಿದ್ದರು. ಇದು ನಾನಾ ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗಿತ್ತು.

ಈ ಹಿನ್ನೆಲೆಯಲ್ಲಿ ಶನಿವಾರ ಬೆಳಿಗ್ಗೆ ತಮ ಸಾಮಾಜಿಕ ಜಾಲತಾಣದಲ್ಲಿ ಸ್ಪಷ್ಟನೆ ನೀಡಿರುವ ಕುಮಾರಸ್ವಾಮಿ ಅವರು, ಸೆಮಿಕಂಡಕ್ಟರ್ ಕೈಗಾರಿಕೆಯು ಕಾರ್ಯತಂತ್ರದ ವಲಯವಾಗಿದೆ. ಎಲೆಕ್ಟ್ರಾನಿಕ್ಸ್, ಆಟೋಮೊಬೈಲ್ ಉತ್ಪಾದನೆಗೆ ಮೂಲಭೂತಸೌಲಭ್ಯಗಳು ಅಗತ್ಯ. ಇವೆರಡೂ ಕ್ಷೇತ್ರಗಳು ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿಸಿವೆ ಎಂದಿದ್ದಾರೆ. ಸೆಮಿಕಂಡಕ್ಟರ್ ಕ್ಷೇತ್ರದ ಅಭಿವೃದ್ಧಿಯ ಸಲುವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ತೆಗೆದುಕೊಂಡಿರುವ ಕ್ರಮಗಳನ್ನು ನಾನು ಪ್ರಶಂಸಿಸುತ್ತೇನೆ. ಭವಿಷ್ಯದಲ್ಲಿ ಈ ವಲಯದ ಅಭಿವೃದ್ಧಿಗೆ ತಮ ಇಲಾಖೆಯಿಂದ ಸಹಭಾಗಿಯಾಗಿ ಕೆಲಸ ಮಾಡುವುದಾಗಿ ಅವರು ಭರವಸೆ ನೀಡಿದ್ದಾರೆ.

ನಾವು ಯಾವತ್ತೂ ಸೇಡಿನ ರಾಜಕಾರಣ ಮಾಡುವುದಿಲ್ಲ

ದೇವೇಗೌಡರ ಕುಟುಂಬದ ನಂತರ ಯಡಿಯೂರಪ್ಪ ಮುಗಿಸಲು ಕಾಂಗ್ರೇಸ್ ಸಂಚು ಎಂದ ಹೆಚ್.ಡಿ.ಕುಮಾರಸ್ವಾಮಿ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಕೃಪಾಂಕ ಕೊಟ್ಟು ಉತ್ತೀರ್ಣ ಮಾಡುವುದು ಕೆಟ್ಟ ಅಭ್ಯಾಸ

ದೇವೇಗೌಡರ ಕುಟುಂಬದ ನಂತರ ಯಡಿಯೂರಪ್ಪ ಅವರ ಕುಟುಂಬವನ್ನು ಗುರಿಮಾಡಲಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ನಮ್ಮ ಮೇಲೆ, ಡಿ.ಕೆ. ಶಿವಕುಮಾರ್, ರಾಹುಲ್ ಗಾಂಧಿ ಅವರ ಮೇಲೆ ಕೇಸು ಹಾಕಿರುವುದನ್ನು ಏನೆಂದು ಕರೆಯಬೇಕು.

ರಾಹುಲ್ ಗಾಂಧಿ ಅವರ ಸಂಸದ ಸ್ಥಾನವನ್ನೇ ರದ್ದುಗೊಳಿಸಿದ್ದನ್ನು ಏನೆಂದು ಕರೆಯುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜೈಲಿಗೆ ಕಲಿಸಿದ್ದನ್ನು ಏನೆಂದು ಕರೆಯಬೇಕು. ದ್ವೇಷದ ರಾಜಕಾರಣವೂ ಇಲ್ಲ ಪ್ರೀತಿಯ ರಾಜಕ್ಕಾರಣ ಎಂದು ಕರೆಯಬೇಕೋ. ಸೇಡಿನ ರಾಜಕಾರಣ ಮಾಡುವುದು ಅವರು ನಾವು ಯಾವತ್ತೂ ಸೇಡಿನ ರಾಜಕಾರಣ ಮಾಡುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ದ್ವೇಷದ ರಾಜಕಾರಣವನ್ನು ನಾನು ಇಂದಿನವರೆಗೆ ಯಾರ ಮೇಲೂ ಮಾಡಿಲ್ಲ. ನಾನು ನಿನ್ನೆ ಮೊನ್ನೆ ರಾಜಕೀಯಕ್ಕೆ ಬಂದಿಲ್ಲ. ದ್ವೇಷದ ರಾಜಕಾರಣವನ್ನು ನಾನು ಇಂದಿನವರೆಗೆ ಯಾರ ಮೇಲೂ ಮಾಡಿಲ್ಲ. ಅದು ಬಿಜೆಪಿಯವರ ಕೆಲಸ ಎಂದು ತಿಳಿಸಿದರು. ನೀಟ್ ಪರೀಕ್ಷೆಯಲ್ಲಿ ಕೆಲವು ರ್‍ಯಾಂಕ್ ನೀಡುವುದರಲ್ಲಿ, ಅಭ್ಯಾಸ ಮಾಡಿ ಬರೆದ ವಿದ್ಯಾರ್ಥಿಗಳಿಗೆ ದೊಡ್ಡ ಅನ್ಯಾಯವಾಗಿದೆ ಅನ್ಯಾಯವಾಗಿದೆ. ಈ ಬಗ್ಗೆ ತನಿಖೆಯಾಗಬೇಕು, ಮರುಪರೀಕ್ಷೆಯಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಎನ್.ಟಿ.ಎ ಪರೀಕ್ಷೆಯನ್ನು ಸರಿಯಾಗಿ ಮಾಡದೇ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಕೃಪಾಂಕ ಕೊಟ್ಟು ಉತ್ತೀರ್ಣ ಮಾಡುವುದು ಕೆಟ್ಟ ಅಭ್ಯಾಸ ಎಂದು ಹಿರಿಯ ನಾಯಕರು, ಜನಪ್ರಿಯ ಜನನಾಯಕರು, ಮಾಜಿ ಸಿಎಂ ಯಡಿಯೂರಪ್ಪ ಅವರ ಮೇಲೆ ದುರುದ್ದೇಶದಿಂದ ಹಾಕಿದ ಪ್ರಕರಣದಲ್ಲಿ ಪೋಕ್ಸೊ ಸೆಕ್ಷನ್‌ಗಳನ್ನು ಸೇರಿಸಿ ಅವರನ್ನು ಮಾನಸಿಕವಾಗಿ ಕುಗ್ಗಿಸುವ ಕೆಲಸವನ್ನು ರಾಜಕೀಯ ವಿರೋಧಿಗಳು ಮಾಡಿ, ಷಡ್ಯಂತ್ರದ ಕೇಸು ದಾಖಲಿಸಿದ್ದರು. ಈ ಕೇಸಿಗೆ ಸಂಬಂಧಿಸಿ ಹೈಕೋರ್ಟ್ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡಿದೆ. ಇದನ್ನು ಬಿಜೆಪಿ ಸ್ವಾಗತ ಮಾಡುತ್ತದೆ ಎಂದರು.

ಎಂದರು. ದಕ್ಷಿಣ ಭಾರತದ ಏಳು ಜನರು ಕೇಂದ್ರದಲ್ಲಿ ಸಚಿವರಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಏನು ಮಾಡಿದರೂ ದಕ್ಷಿಣ ಭಾರತ ದಲ್ಲಿ ಏನು ಮಾಡಿದರು ಬಿಜೆಪಿಯನ್ನು ಜನ ಬೆಂಬಲಿಸುವುದಿಲ್ಲ. ಏಕೆಂದರೆ ಆರ್.ಎಸ್.ಎಸ್ ನಾರಾಜಕೀಯ ಮುಖವಾಡ ಅದು ಹಾಗಾಗಿ ಉತ್ತರ ಭಾರತದಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆ. ಆರ್.ಎಸ್.ಎಸ್ ನ ಮುಖ್ಯಸ್ಥರು ಅಹಂಕಾರಕ್ಕೆ ಜನ ಸರಿಯಾದ ಪಾಠ ಕಲಿಸಿದ್ದಾರೆ ಎಂದು ಹೇಳಿದ್ದಾರೆ ಎಂದರು. ರಾಯ್ ಎಂಬುವರಿಗೆ 2010 ರ್‍ಯಾಲಿ ನೀಡಿರುವ ಹೇಳಿಕೆಗೆ ಸಂಬಂಧಿಸಿದಂತೆ ಬಂಧಿಸಲು ಆದೇಶ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಬಿಜೆಪಿಯದ್ದು ದ್ವೇಷದ ರಾಜಕಾರಣ. ಹೆದರಿಸುವುದು ಬೆದರಿಸುವುದು, ಇಡಿ, ಸಿಬಿಐ ಬಳಕೆ ಮಾಡುವುದನ್ನು ಮೊದಲಿನಿಂದಲೂ ಮಾಡಿಕೊಂಡು ಬರುತ್ತಿದ್ದಾರೆ. ಅದಕ್ಕಾಗಿ ಜನ ಈ ಬಾರಿ ಅವರಿಗೆ ಬಹುಮತ ಕೊಡಲಿಲ್ಲ ಎಂದರು.

ರಾಜ್ಯದ ಜನರು ಯಡಿಯೂರಪ್ಪನವರ ಮೇಲೆ ಇಟ್ಟಿರುವ ನಂಬಿಕೆ, ವಿಶ್ವಾಸಕ್ಕೆ ಪೂರಕವಾಗಿ ಹೈಕೋರ್ಟ್ ತೀರ್ಪು ಬಂದಿದೆ ಎಂದು ಬಿಜೆಪಿ ರಾಜ್ಯ ರೈತ ಮೋರ್ಚಾದ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಅವರು ತಿಳಿಸಿದರು. ತಮ್ಮ ವಿರುದ್ಧ ಕೇಸು ದಾಖಲಿಸಿದ ಬಳಿಕ ಯಡಿಯೂರಪ್ಪನವರು ವಿಚಾರಣೆ ಎದುರಿಸಿದ್ದರು. ಹೇಳಿಕೆ, ಧ್ವನಿ ಸ್ಯಾಂಪಲ್ ಕೊಟ್ಟಿದ್ದರು. ದೆಹಲಿಗೆ ಹೋಗಿರುವ ಕಾರಣ 17 ರಂದು ವಿಚಾರಣೆ ಹಾಜರಾಗುವುದಾಗಿ ಪತ್ರದ ಮೂಲಕ ಸಿಐಡಿಗೆ ತಿಳಿಸಿದ್ದರೂ ಕೂಡ ಅವರನ್ನು ಬಂಧಿಸಬೇಕೆಂಬ ದುರುದ್ದೇಶ ಸರಕಾರಕ್ಕೆ ಇತ್ತು. ಆ ದುರುದ್ದೇಶ ವಿಫಲವಾಗಿದೆ. ಕಾಂಗ್ರೇಸ್ ನಾಯಕರ ಷಡ್ಯಂತ್ರಕ್ಕೆ ಹೈಕೋರ್ಟ್ ಪೂರ್ಣವಿರಾಮ (ಫುಲ್ ಸ್ಟಾಪ್) ಹಾಕಿದೆ ಎಂದು ಅಭಿಪ್ರಾಯಪಟ್ಟರು.

ವಾರಂಟ್‌ಗೆ ಹೈಕೋರ್ಟ್ ತಡೆ

ರಾಜ್ಯದಲ್ಲಿ ಕಳೆದ ಕೆಲವು ತಿಂಗಳುಗಳಿಂದ ನಿರಂತರವಾಗಿ ಕೊಲೆ, ದರೋಡೆ, ದ್ವೇಷದ ರಾಜಕಾರಣ ನಡೆದಿದೆ. ಸರಕಾರದ ಬಗ್ಗೆ ಜನರು ಬೇಸತ್ತು ಹೋಗಿದ್ದಾರೆ ಎಂದು ತಿಳಿಸಿದರು. ಆ ಮುಜುಗರದಿಂದ ತಪ್ಪಿಸಲು ಯಡಿಯೂರಪ್ಪ ಅವರನ್ನು ಬಂಧಿಸಲು, ಕಾಂಗ್ರೇಸ್ ನಾಯಕರ ರಾಜಕೀಯ ಒತ್ತಡದ ಹಿನ್ನೆಲೆಯಲ್ಲಿ ತರಾತುರಿಯಲ್ಲಿ ಸಿಐಡಿ ಅಧಿಕಾರಿಗಳು ನಿನ್ನೆ ಬಂಧನ ವಾರಂಟ್ ಪಡೆದಿದ್ದರು. ಇವತ್ತು ಆ ವಾರಂಟ್‌ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಡೌಟೇ ಬೇಡ, ರಾಜ್ಯದಲ್ಲಿ 5 ಗ್ಯಾರಂಟಿಗಳೂ ಮುಂದುವರೆಯಲಿವೆ

• ಉದಯವಾಹಿನಿ, ಬೆಂಗಳೂರು

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ದಾಖಲಾಗಿರುವ ಫೋಕ್ಸೋ ಪ್ರಕರಣದಲ್ಲಿ ದೂರು ನೀಡಿರುವವರು ಯಾರು? ಸರ್ಕಾರ ಅಲ್ಲ, ಖಾಸಗಿ ವ್ಯಕ್ತಿ ದೂರು ನೀಡಿದ್ದು ಹೌದಲ್ವಾ? ಹೀಗಿರುವಾಗ ದ್ವೇಷದ ರಾಜಕಾರಣ ಎಲ್ಲಿದೆ? ಕಾನೂನು ರೀತಿ ಕೆಲಸ ಮಾಡುವ ಪೋಲೀಸರ ಕೆಲಸದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ನ್ಯಾಯಾಲಯದ ಆದೇಶವನ್ನು ಎಲ್ಲರೂ ಒಪ್ಪಿ ಅದರಂತೆ ನಡೆದುಕೊಳ್ಳಬೇಕಾಗುತ್ತದೆ

- ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯದಲ್ಲಿ ಐದು ಗ್ಯಾರಂಟಿಗಳೂ ಕೂಡ ಮುಂದುವರೆಯಲಿವೆ, ಈ ಬಗ್ಗೆ ಯಾವುದೇ ಅನುಮಾನಗಳು ಬೇಡ. ಅವು ಬಡವರಿಗೆ ಶಕ್ತಿ ತುಂಬುವ ಕಾರ್ಯಕ್ರಮವಾಗಿರುವುದರಿಂದ ಈ ಕಾರ್ಯಕ್ರಮಗಳನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ರಾಜ್ಯದಲ್ಲಿ ಐದು ಗ್ಯಾರಂಟಿಗಳೂ ಕೂಡ ಮುಂದುವರೆಯಲಿವೆ, ಈ ಬಗ್ಗೆ ಯಾವುದೇ ಅನುಮಾನಗಳು ಬೇಡ. ಅವು ಬಡವರಿಗೆ ಶಕ್ತಿ ತುಂಬುವ ಕಾರ್ಯಕ್ರಮವಾಗಿರುವುದರಿಂದ ಈ ಕಾರ್ಯಕ್ರಮಗಳನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದರು. ಈ ಬಾರಿ ಲೋಕಸಭೆಯಲ್ಲಿ ಒಂದು ಸ್ಥಾನದಿಂದ 9 ಸ್ಥಾನಗಳನ್ನು ಪಡೆದಿದ್ದೇವೆ. ನಮ್ಮ ನಿರೀಕ್ಷೆಯಷ್ಟು ಫಲಿತಾಂಶ ಬಂದಿಲ್ಲ. ಒಂದರಿಂದ 9 ಸ್ಥಾನಕ್ಕೇರಿದ್ದು, ಕಳೆದ ಬಾರಿಗಿಂತ 13% ಹೆಚ್ಚು ಮತಗಳ ಹಂಚಿಕೆ ನಮ್ಮ ಪರವಾಗಿದೆ. ಹಾಗೆಂದು ನಮ್ಮ ಬೆನ್ನು ತಟ್ಟಿಕೊಳ್ಳುತ್ತಿಲ್ಲ. ನಮ್ಮ ಫಲಿತಾಂಶ ಕಳೆದ ಬಾರಿಗಿಂತ ಉತ್ತಮವಾಗಿದೆ ಆದರೆ ನಿರೀಕ್ಷೆಯಂತೆ ಆಗಿಲ್ಲ.

ಎನ್‌ಡಿಎ ಸರ್ಕಾರ ತಪ್ಪಾಗಿ ರಚನೆಯಾಗಿದ್ದು ಶೀಘ್ರದಲ್ಲೇ ಅಧಃಪತನವಾಗಲಿದೆ: ಖರ್ಗೆ ಭವಿಷ್ಯ

• ಉದಯವಾಹಿನಿ, ಬೆಂಗಳೂರು

3ನೇ ಬಾರಿ ಪ್ರಧಾನಿಯಾಗಿ ಆಯ್ಕೆಯಾದ ನರೇಂದ್ರ ಮೋದಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ ಸರ್ಕಾರವು ತಪ್ಪಾಗಿ ರಚನೆಯಾಗಿದ್ದು, ಶೀಘ್ರದಲ್ಲೇ ಅದು ಪತನವಾಗಲಿದೆ ಎಂದು ಕಾಂಗ್ರೇಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭವಿಷ್ಯ ನುಡಿದರು. ಈ ಕುರಿತಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಪ್ಪಾಗಿ ಎನ್‌ಡಿಎ ಸರ್ಕಾರ ರಚನೆ ಯಾಗಿದೆ. ಮೋದಿಜಿಗೆ ಜನಾದೇಶವಿಲ್ಲ.

ಇದು ಅಲ್ಪಸಂಖ್ಯಾತ ಸರ್ಕಾರ. ಈ ಸರ್ಕಾರ ಯಾ ವಾಗ ಬೇಕಾದರೂ ಬೀಳಬಹುದು.

ಪ್ರಮಾದದಿಂದ ಎನ್‌ಡಿಎ ಸರಕಾರ ರಚನೆಯಾಗಿದ್ದು, ಅದು ಯಾವಾಗ ಬೇಕಾದರೂ ಪತನವಾಗಬಹುದು ಎಂದು ಖರ್ಗೆ ಹೇಳಿದ್ದಾರೆ. ಬಿಜೆಪಿ ತನ್ನ ಮೈತ್ರಿ ಪಕ್ಷಗಳನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದೆ ಎಂಬ ಊಹಾಪೋಹದ ಕೆಲವು ದಿನಗಳ ನಂತರ ಅವರ ಈ ಹೇಳಿಕೆ ಹೊರಬಿದ್ದಿದೆ.

ಹಾಗಾಗಿ ನರೇಂದ್ರ ಮೋದಿಯವರ ಬಹುಮತವಿಲ್ಲದ ಸರ್ಕಾರ ಯಾವಾಗ ಬೇಕಾದರೂ ಬೀಳಬಹುದು ಎಂದು ಖರ್ಗೆ ಭವಿಷ್ಯ ನುಡಿದಿದ್ದಾರೆ.

ರಾಜ್ಯಾಧ್ಯಂತ ಪ್ರತಿಭಟನೆಗೆ ಬಿಜೆಪಿ

ಸರ್ಕಾರಿ ಶಾಲೆ ಯಾವುದೇ ಖಾಸಗಿ ಶಾಲೆಗಳಿಗಿಂತ ಕಡಿಮೆ ಇಲ್ಲ

ಗುಡಿ ಗೋಪುರಗಳ ಜೀರ್ಣೋದ್ಧಾರಕ್ಕಿಂತ ಸರ್ಕಾರಿ ಶಾಲೆಗಳ ಜೀರ್ಣೋದ್ಧಾರ ಮಾಡಿದರೆ ಸರ್ಕಾರಿ ಶಾಲೆಗಳ ಉನ್ನತೀಕರಣ

• ಉದಯವಾಹಿನಿ, ಶಿಡ್ಲಘಟ್ಟ

ಗುಡಿ ಗೋಪುರಗಳ ಜೀರ್ಣೋದ್ಧಾರಕ್ಕಿಂತ ಸರ್ಕಾರಿ ಶಾಲೆಗಳ ಜೀರ್ಣೋದ್ಧಾರ ಮಾಡಿದರೆ ಬಡವರ ಮಕ್ಕಳ ಅಭಿವೃದ್ಧಿ ಹಾಗೂ ಸರ್ಕಾರಿ ಶಾಲೆಗಳು ಉನ್ನತೀಕರಣವಾಗುತ್ತವೆ ಎಂದು ಕಾಂಗ್ರೇಸ್ ಮುಖಂಡ ಆಂಜಿನಪ್ಪ ಅಭಿಪ್ರಾಯ ಪಟ್ಟರು. ಶಿಡ್ಲಘಟ್ಟ ತಾಲ್ಲೂಕಿನ ಬಶೆಟ್ಟಹಳ್ಳಿ ಹೋಬಳಿಯ ಗೌಡನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಎಲ್‌ಕೆಜಿ ಮತ್ತು ಯುಕೆಜಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ಶೂ ವಿತರಣೆ ಮಾಡಿ ಮಾತನಾಡಿದರು.

ಸಮವಸ್ತ್ರ ಶೂ ವಿತರಣೆ

ಉದಯವಾಹಿನಿ ಚಿತ್ರ

ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಮಾಡಲು ಮುಂದಾದಾಗ, ಸಮಾಜ ಸೇವಕರು ಹಾಗೂ ದಾನಿಗಳು, ಪೋಷಕರು ಸಹಕರಿಸಿದರೆ ಮತ್ತಷ್ಟು ಅಭಿವೃದ್ಧಿಯಾಗುತ್ತವೆ. ಸರ್ಕಾರಿ ಶಾಲೆಗಳು ಯಾವುದೇ ಖಾಸಗಿ ಶಾಲೆಗಳಿಗಿಂತ ಕಡಿಮೆ ಇಲ್ಲ ಎಂಬಂತೆ ಉತ್ತಮ ವಿದ್ಯಾಭ್ಯಾಸವನ್ನು ನೀಡುತ್ತಿವೆ. ಹಾಗೆಯೇ ಅವುಗಳನ್ನು ಪ್ರೋತ್ಸಾಹಿಸದಲ್ಲಿ ಮುಂದಿನ ದಿನಗಳಲ್ಲಿ ಖಾಸಗಿ ಶಾಲೆಗಳಿಗಿಂತ ಹೆಚ್ಚು ಸರ್ಕಾರಿ ಶಾಲೆಗಳು ಉಳಿಯುತ್ತವೆ ಮತ್ತು ಬೆಳೆಯುತ್ತವೆ ಹಾಗೆಯೇ ಮಕ್ಕಳು ಸಹ ಅಭಿವೃದ್ಧಿ ಹೊಂದಿ ಉನ್ನತ ಶಿಕ್ಷಣ, ಜ್ಞಾನವನ್ನು ಪಡೆದು ಉತ್ತಮ ಸಮಾಜ ನಿರ್ಮಾಣ ಮಾಡಲು ಸಹಕಾರಿಯಾಗುತ್ತದೆ. ಇನ್ನು ಸರ್ಕಾರಿ ಶಾಲೆಗಳಲ್ಲಿ ಉನ್ನತೀಕರಿಸುತ್ತಿರುವ ಶಾಲೆಗಳಲ್ಲಿ ಒಂದಾದ ತಾಲ್ಲೂಕಿನ ಗೌಡನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಕಳೆದ ಬಾರಿಗಿಂತ ಈ ಬಾರಿ ಹೆಚ್ಚು ವಿದ್ಯಾರ್ಥಿಗಳು ದಾಖಲಾಗಿದ್ದಾರೆ.

ಈ ಸಂದರ್ಭದಲ್ಲಿ ಗೌಡನಹಳ್ಳಿ ಮಂಜುನಾಥ್, ಗೌಡನಹಳ್ಳಿ ಶಾಲೆಯ ಮುಖ್ಯೋಪಾಧ್ಯಾಯರಾದ ದೇವರಾಜ್, ಕುಂಬಾರಹಳ್ಳಿ ರವಿ, ಶಿವಣ್ಣ, ಮುನಿರೆಡ್ಡಿ, ಚೌಡಪ್ಪ, ಅಶ್ವತ್ ರೆಡ್ಡಿ, ನಾರಾಯಣರೆಡ್ಡಿ, ಲಕ್ಷ್ಮಿನಾರಾಯಣ, ಮಂಜುನಾಥ್, ವಂಟೂರು ಶಿವಣ್ಣ, ದಾ ಮೋಧರ್, ಮುರಳಿ, ಅಂಬರೀಶ್, ಮಧು, ದೇವರಾಜ್, ದ್ಯಾವಪ್ಪ ಮುನಿರಾಜ್, ವೆಂಕಟೇಶ್, ದ್ಯಾವಕೃಷ್ಣ, ಶ್ರೀನಿವಾಸ, ಕೆಂಪ್ಲಣ್ಣ, ಕೇಶವಣ್ಣ, ಚಂದ್ರು, ಪ್ರಮೋದ್, ರಮೇಶ್, ಮದನ್, ದರ್ಶನ್, ಮತ್ತಿತರರು ಇದ್ದರು.

> ಈ ಹಿಂದೆ ಶಾಲೆಗೆ ವಿದ್ಯಾರ್ಥಿಗಳನ್ನು ಕರೆತರಲು ಬಸ್ ವ್ಯವಸ್ಥೆ ಮಾಡಲಾಗಿತ್ತು ಆದರೆ ಈಗ ದಾಖಲಾತಿ ಹೆಚ್ಚಾಗಿರುವುದರಿಂದ ದೊಡ್ಡ ಬಸ್ ವ್ಯವಸ್ಥೆ ಮಾಡಿಕೊಡಿ ಎಂದು ಶಾಲಾ ಆಡಳಿತ ವ್ಯವಸ್ಥೆ ಮನವಿ ಮಾಡಿದ್ದಾರೆ. ಅದರಂತೆ ಅವರಿಗೆ ದೊಡ್ಡ ಬಸ್ ವ್ಯವಸ್ಥೆಯನ್ನು ಮಾಡಿಸುತ್ತೇವೆ ಈ ಬಸ್ ಅನ್ನು ಕಾಳನಾಯಕನಹಳ್ಳಿ ಶಾಲೆಗೆ ವರ್ಗಾಯಿಸಿಕೊಡುತ್ತೇವೆ
-ಆಂಜಿನಪ್ಪ ಪುಟ್ಟು

> ಇಂಗ್ಲಿಷ್‌ನಲ್ಲಿ ಓದಿದರೆ ಮಕ್ಕಳು ಬುದ್ಧಿವಂತರಾಗುತ್ತಾರೆ ಎಂಬ ಆಲೋಚನೆಯಿಂದ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಿಗೆ ಹೆಚ್ಚು ಹೆಚ್ಚು ಸೇರಿಸುತ್ತಾರೆ ಆದರೆ ಅಲ್ಲಿ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಜ್ಞಾನವನ್ನು ಹೊಂದಿರುವುದಿಲ್ಲ. ಕೇವಲ ಪುಸ್ತಕಕ್ಕೆ ಮಾತ್ರ ಸೀಮಿತರಾಗಿರುತ್ತಾರೆ. ಸರ್ಕಾರಿ ಶಾಲೆಗಳನ್ನ ಅಭಿವೃದ್ಧಿಗೊಳಿಸಲು ಕರ್ನಾಟಕ ಸರ್ಕಾರ ಈಗಾಗಲೇ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಿ, ಇತರೆ ಸವಲತ್ತುಗಳನ್ನು ಸಹ ನಾನು ನೀಡಲು ಸಹಕರಿಸುತ್ತೇನೆ
-ಕೆ.ವಿ ಗೌತಮ್

ಸರ್ವರಿಗೂ ನ್ಯಾಯ ಎಂಬುದು ಭಾರತ ಕಾನೂನು ಸೇವೆಗಳ ಧ್ಯೇಯ

• ಉದಯವಾಹಿನಿ, ತುಮಕೂರು

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ದಿನಾಂಕ: 13-07-2024 ರಂದು ಜಿಲ್ಲೆಯಾದ್ಯಂತ ಎಲ್ಲಾ ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಜನತಾ ನ್ಯಾಯಾಲಯ ಹಮ್ಮಿಕೊಂಡಿರುವುದಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಜಯಂತಕುಮಾರ್ ತಿಳಿಸಿದರು.

ಉದಯವಾಹಿನಿ ಚಿತ್ರ

ನ್ಯಾಯಾಲಯದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ಮಾ.16 ರಂದು ಆಯೋಜಿಸಲಾಗಿದ್ದ ಜನತಾ ನ್ಯಾಯಾಲಯದಲ್ಲಿ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇದ್ದ 94564 ಪ್ರಕರಣಗಳಲ್ಲಿ 9923 ಪ್ರಕರಣಗಳು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳು 129386 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು ಒಟ್ಟು 139309 ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ ಎಂದರು. ಸರ್ವರಿಗೂ ನ್ಯಾಯ ಎಂಬುದು ಭಾರತ ಕಾನೂನು ಸೇವೆಗಳ ಧ್ಯೇಯವಾಗಿದ್ದು, ಯಾವುದೇ ಪ್ರಜೆಯೂ ತನ್ನ ಆರ್ಥಿಕ ಅಥವಾ ಇತರೆ ದೌರ್ಬಲ್ಯಗಳ ಕಾರಣಗಳಿಂದಾಗಿ ನ್ಯಾಯದಿಂದ ವಂಚಿತವಾಗಬಾರದೆಂಬ ಉದ್ದೇಶದಿಂದ ಉಚಿತ ಮತ್ತು ಸಕ್ಷಮ ಕಾನೂನು ಸೇವೆಗಳನ್ನು ಸಮಾಜದ ದುರ್ಬಲ ವರ್ಗಗಳಿಗೆ ಒದಗಿಸುವ ಸಲುವಾಗಿ ಜನತಾ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ ಎಂದರು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಎಲ್ಲಾ ತಾಲ್ಲೂಕು ಕಾನೂನು ಸೇವಾ ಸಮಿತಿಗಳಲ್ಲಿ ವಿಡಿಯೋ ಕಾಫರೆನ್ಸ್ ಸ್ಥಾಪಿಸಲಾಗಿದ್ದು, ಎಲ್ಲಾ ಪಕ್ಷಗಾರರು ಇದರ ಮೂಲಕ ಸರ್ವೋಚ್ಚ ನ್ಯಾಯಾಲಯವು ನಡೆಸುವ ಲೋಕ್ ಅದಾಲತ್‌ನಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗಿದೆ ಎಂದರು. ಭಾರತ ಸರ್ವೋಚ್ಚ ನ್ಯಾಯಾಲಯ ನಡೆಸುವ ವಿಶೇಷ ಅದಾಲತ್‌ನಲ್ಲಿ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ 18 ಪ್ರಕರಣಗಳನ್ನು ರಾಜೀ ಸಂಧಾನದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಇತ್ಯರ್ಥಪಡಿಸಲು ಅವಕಾಶ ಮಾಡಿರುವುದಾಗಿ ತಿಳಿಸಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ನೂರುನ್ನೀಸ ಮಾತನಾಡುತ್ತಾ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ತಮ್ಮ ತಮ್ಮ ವಕೀಲರನ್ನು ಸಂಪರ್ಕಿಸಿ ರಾಜಿ ಮಾಡಿಕೊಳ್ಳಬಹುದು ಮಾಹಿತಿಗಾಗಿ ಕಚೇರಿಯ ದೂರವಾಣಿ ಸಂಖ್ಯೆ 0816-2255133, 9141193959ನ್ನು ಸಂಪರ್ಕಿಸಿ ಎಂದು ಮನವಿ ಮಾಡಿದರು.

> ಸುಪ್ರೀಮ್ ವಿಶೇಷ ಲೋಕಅದಾಲತ್ ಭಾರತದ ಸರ್ವೋಚ್ಚ ನ್ಯಾಯಾಲಯವು ಜು.29 ರಿಂದ ಆ.3ರವರೆಗೆ ವಿಶೇಷ ಲೋಕ್ ಅದಾಲತ್ ನಡೆಸಲು ಉದ್ದೇಶಿಸಿದ್ದು, ಈ ಹಿನ್ನೆಲೆಯಲ್ಲಿ ಪಕ್ಷಗಾರರಿಗೆ, ಎದುರುದಾರರ ಜೊತೆ ಪೂರ್ವಭಾವಿ ಲೋಕ ಅದಾಲತ್ ನಡೆಸಲು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ವಿಡಿಯೋ ಕಾಫರೆನ್ಸ್ ಮಾಡಲಾಗಿರುತ್ತದೆ ಎಂದರು.

ಮಂಚನಾಯಕನಹಳ್ಳಿ ಪಿಡಿಒ ಯತೀಶ್ ಅಮಾನತು

• ಉದಯವಾಹಿನಿ, ರಾಮನಗರ

ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದನೆ ಆರೋಪದಡಿ ಮೂರು ತಿಂಗಳ ಹಿಂದೆ ಲೋಕಾಯುಕ್ತ ದಾಳಿಗೆ ಒಳಗಾಗಿದ್ದ ತಾಲ್ಲೂಕಿನ ಬಿಡದಿ ಹೋಬಳಿಯ ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಯತೀಶ್ ಅವರನ್ನು, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ದಿಗ್ವಿಜಯ್ ಬೋಡ್ಕೆ ಅವರು ಶುಕ್ರವಾರ ಅಮಾನತು ಮಾಡಿದ್ದಾರೆ. ಯತೀಶ್ ಅವರ ಮೇಲೆ ಲೋಕಾಯುಕ್ತ ಪೊಲಿಸರು ಮಾರ್ಚ್ 27ರಂದು ದಾಳಿ ನಡೆಸಿದಾಗ, ಅವರು ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವುದು ಗೊತ್ತಾಗಿದೆ. ಅದರ ಮೌಲ್ಯ 3.57 ಕೋಟಿ (ಶೇ 140.01) ಇದೆ.

ಅಕ್ರಮವಾಗಿ ಗಳಿಸಿರುವ ಸ್ಥಿರ ಮತ್ತು ಚರಾಸ್ತಿಯು ಯತೀಶ್ ಅವರ ನಿಗದಿತ ವರಮಾನಕ್ಕಿಂತ ಹೆಚ್ಚಿನದಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ. ಆರೋಪಿ ಅಧಿಕಾರಿಯು ವಿವಿಧ ಬಾಬ್ತುಗಳಿಗಾಗಿ ಮಾಡಿರುವ ಖರ್ಚು-ವೆಚ್ಚಗಳು ಇನ್ನು ಕೆಲವು ಮೂಲಗಳಿಂದ ಬರಬೇಕಾಗಿದೆ. ಪ್ರಕರಣದ ತನಿಖೆ ಮುಂದುವರಿದಂತೆ ಅವರು ಸಂಪಾದಿಸಿರುವ ಸ್ಥಿರ ಮತ್ತು ಚರಾಸ್ತಿಯ ಮೌಲ್ಯ ಇನ್ನೂ ಹೆಚ್ಚಳವಾಗುವ ಸಾಧ್ಯತೆ ಇದೆ. ಗೊತ್ತಾದ ಆದಾಯದ ಮೂಲಗಳಿಗಿಂತ ಹೆಚ್ಚು ಸಂಪಾದನೆ ಮಾಡಿರುವುದು ಪ್ರಾಥಮಿಕ ತನಿಖಾ ವರದಿಯಲ್ಲಿ ಮೇಲ್ನೋಟಕ್ಕೆ ಸಾಬೀತಾಗಿದೆ. ಹಾಗಾಗಿ, ಅವರನ್ನು ಅಮಾನತು ಮಾಡಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಯತೀಶ್ ಅವರು ಆರ್ಥಿಕವಾಗಿ ಹಾಗೂ ಸ್ಥಳೀಯವಾಗಿಯೂ ಪ್ರಭಾವಿಯಾಗಿದ್ದಾರೆ. ಪ್ರಕರಣದ ತನಿಖೆಯು ಸುಗಮವಾಗಿ ನಡೆಯದಂತೆ ಅಡ್ಡಿಯುಂಟು ಮಾಡುವ ಅಥವಾ ಸಾಕ್ಷ್ಯಾಧಾರಗಳನ್ನು ನಾಶ ಮಾಡುವ ಸಾಧ್ಯತೆಗಳಿವೆ. ಹಾಗಾಗಿ, ಕೂಡಲೇ ಅವರನ್ನು ಅಮಾನತು ಮಾಡಬೇಕು ಎಂದು ಲೋಕಾಯುಕ್ತ ಪೊಲೀಸ್ ಮಹಾನಿರೀಕ್ಷಕರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಅಲ್ಲದೆ, ರಾಮನಗರ ತಾಲ್ಲೂಕು ಪಂಚಾಯಿತಿ ಇಒ ಅನುಮತಿ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡುವಂತಿಲ್ಲ. ಅವರಿಂದ ತೆರವಾಗಿರುವ ಮಂಚನಾಯಕನಹಳ್ಳಿಯ ಪಂಚಾಯಿತಿಯ ಪ್ರಭಾರ ಪಿಡಿಒ ಆಗಿ ಕಂಚುಗಾರನಹಳ್ಳಿ ಪಿಡಿಒ ಅವರನ್ನು ನಿಯುಕ್ತಿಗೊಳಿಸುವಂತೆ ತಾ.ಪಂ. ಇಒಗೆ ತಮ್ಮ ಆದೇಶದಲ್ಲಿ ಸಿಇಒ ಸೂಚಿಸಿದ್ದಾರೆ.

ಟಗರು, ಕುರಿ ವ್ಯಾಪಾರ ಜೋರು

• ಉದಯವಾಹಿನಿ, ಬಂಗಾರಪೇಟೆ

ಬಕ್ರೀದ್ ಹಬ್ಬಕ್ಕೆ ದಿನಗಣನೆ ಶುರುವಾಗಿದ್ದು, ಬಂಗಾರಪೇಟೆ ಸಂತೆಯಲ್ಲಿ ಟಗರು ಹಾಗೂ ಕುರಿಗಳ ವ್ಯಾಪಾರ ಶುಕ್ರವಾರ ಜೋರಾಗಿತ್ತು.ಪಟ್ಟಣದ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ಶುಕ್ರವಾರ ಸಂತೆ ಜರುಗಿತು.ಕಳೆದ ವಾರಕ್ಕಿಂತ ಈ ಬಾರಿ, ಕುರಿ, ಟಗರು ಹಾಗೂ ಮೇಕೆಗಳ ಸಂಖ್ಯೆ ಹೆಚ್ಚಿತ್ತು. ಮಾರಾಟಗಾರರು ಹಾಗೂ ಖರೀದಿದಾರರು ಎಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು.

ಉದಯವಾಹಿನಿ ಚಿತ್ರ

ಜೂನ್ 18ರಂದು ಬಕ್ರೀದ್ ಹಬ್ಬವಿದ್ದು, ಹಬ್ಬಕ್ಕೆ ಅಗತ್ಯವಿರುವ ಟಗರು-ಕುರಿಗಳನ್ನು ಖರೀದಿಸಲು ಮುಸ್ಲಿಂ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಮಾರುಕಟ್ಟೆಗೆ ಬಂದಿದ್ದರು. ಕುರಿಗಾರರು ಹಾಗೂ ವ್ಯಾಪಾರಿಗಳ ಜೊತೆ ಮಾತುಕತೆ ನಡೆಸಿ, ತಮ್ಮಿಷ್ಟದ ಕುರಿ- ಟಗರು ಖರೀದಿಸಿ ವಾಹನಗಳಲ್ಲಿ ಕೊಂಡೊಯ್ದರು. ಆರು ತಿಂಗಳ ಮರಿಯಿಂದ ಹಿಡಿದು ಎರಡು-ಮೂರು ವರ್ಷಗಳ ಕುರಿಗಳು ಹಾಗೂ ಟಗರುಗಳು ಸಂತೆಯಲ್ಲಿದ್ದವು.

ಕನಿಷ್ಠ 5 ಸಾವಿರದಿಂದ ಗರಿಷ್ಠ 70 ಸಾವಿರವರೆಗೂ ಬೆಲೆ ನಿಗದಿಪಡಿಸಲಾಗಿತ್ತು. ಖರೀದಿದಾರರು, ಚೌಕಾಶಿ ವ್ಯಾಪಾರ ಮಾಡುತ್ತಿದ್ದ ದೃಶ್ಯಗಳು ಕಂಡು ಬಂದವು.ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ ಹಾಗೂ ಇತರೆ ಜಿಲ್ಲೆಗಳಿಂದ ಗ್ರಾಹಕರು ಮಾರುಕಟ್ಟೆಗೆ ಬಂದಿದ್ದರು. ತಮಿಳುನಾಡು, ಆಂಧ್ರಪ್ರದೇಶದ ಗ್ರಾಹಕರೂ ಹೆಚ್ಚಿನ ಸಂಖ್ಯೆಯಲ್ಲಿದ್ದರು.ಬೂದಿಕೋಟೆ ಹೋಬಳಿಯ ಗುಲ್ಲಹಳ್ಳಿ ಗ್ರಾಮ ಸಿದ್ದಪ್ಪ ಎಂಬುವವರು ತಮ್ಮ ಟಗರನ್ನು 70 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿದರು. ಸಣ್ಣ ಮರಿ ತಂದು ಸಾಕಿದ್ದೆವು. ಈಗ, ಮಾರುಕಟ್ಟೆಗೆ ತಂದು ಮಾರಿದ್ದೇವೆ. ವಾಹನದಿಂದ ಇಳಿಸುತ್ತಿದ್ದಂತೆ ಟಗರು ಖರೀದಿಸಲು ಗ್ರಾಹಕರು ಮುಗಿಬಿದ್ದರು. ಎರಡು ವರ್ಷದ ಟಗರು, ಸುಮಾರು 60 ಕೆ.ಜಿ. ತೂಕವಿತ್ತು' ಎಂದು ಅವರು ತಿಳಿಸಿದರು.

ಈ ಬಾರಿ ಕುರಿ, ಟಗರು ಹಾಗೂ ಮೇಕೆಗಳ ಸಂಖ್ಯೆ ಹೆಚ್ಚಿತ್ತು. ಅಂದುಕೊಂಡಷ್ಟು ಬೆಲೆ ಸಿಗಲಿಲ್ಲವೆಂದು ಕುರಿಗಾರರು ಬೇಸರ ವ್ಯಕ್ತಪಡಿಸಿದರು.

ಗಡಿಭಾಗದ ಶಿಡ್ಲಘಟ್ಟಕ್ಕೆ ನಿರುದ್ಯೋಗ ಸಮಸ್ಯೆ ಪರಿಹರಿಸಿ

• ಉದಯವಾಹಿನಿ,ಶಿಡ್ಲಘಟ್ಟ

ಕೇಂದ್ರದ ಎನ್‌ಡಿಎ ಮೈತ್ರಿಕೂಟ ಸರ್ಕಾರದಲ್ಲಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಕರ್ನಾಟಕ ಮೂಲದವರನ್ನು ಭೇಟಿ ಮಾಡಿರುವ ಶಿಡ್ಲಘಟ್ಟದ ಬಿಜೆಪಿ ಮುಖಂಡ, ಉದ್ಯಮಿ ಸೀಕಲ್ ರಾಮಚಂದ್ರಗೌಡ ಅವರು ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವಂತೆ ಅವರಲ್ಲಿ ಮನವಿ ಮಾಡಿದ್ದಾರೆ.

ಉದಯವಾಹಿನಿ ಚಿತ್ರ

ದೆಹಲಿಯ ಕರ್ನಾಟಕ ಭವನದಲ್ಲಿ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಪ್ರಲ್ಹಾದ್ ಜೋಶಿ, ಸೋಮಣ್ಣ ಅವರನ್ನು ಭೇಟಿ ಮಾಡಿ ಅಭಿನಂದಿಸಿದ ಸೀಕಲ್ ರಾಮಚಂದ್ರಗೌಡ. ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರವು ಗಡಿಭಾಗಕ್ಕೆ ಹೊಂದಿಕೊಂಡಿದ್ದು ತೀರಾ ಹಿಂದುಳಿದ ಪ್ರದೇಶವಾಗಿದೆ. ರೇಷ್ಮೆ ಮತ್ತು ಹೈನುಗಾರಿಕೆಯಲ್ಲಿ ಸಾವಿರಾರು ಕುಟುಂಬಗಳು ತೊಡಗಿಸಿಕೊಂಡಿದ್ದು, ಇತ್ತೀಚಿನ ವರ್ಷಗಳಲ್ಲಿ ರೇಷ್ಮೆ ಕೃಷಿ, ರೇಷ್ಮೆ ಉದ್ದಿಮೆ ಮತ್ತು ಹೈನುಗಾರಿಕೆಯು ಸಂಕಷ್ಟದಲ್ಲಿದ್ದು ಈ ಸಂಕಷ್ಟದಿಂದ ರೈತರನ್ನು, ರೀಲರುಗಳನ್ನು ಪಾರು ಮಾಡಬೇಕಿದೆ ಎಂದು ಮನವಿ ಮಾಡಿದರು. ಇದಕ್ಕಿಂತ ಮುಖ್ಯವಾಗಿ ಈ ಭಾಗದಲ್ಲಿ ಉದ್ಯೋಗ ಸೃಷ್ಟಿಸುವ ಕೆಲಸ ಆಗಬೇಕಿದೆ. ಇದರಿಂದ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಿ ಉದ್ಯೋಗಕ್ಕಾಗಿ ಯುವಕ ಯುವತಿಯರು, ಗೃಹಣಿಯರು, ಕಾರ್ಮಿಕರು ವಲಸೆ ಹೋಗುವುದನ್ನು ತಪ್ಪಿಸಬಹುದು ಎಂದು ಕೋರಿದರು. ಚಿಂತಾಮಣಿ ತಾಲ್ಲೂಕು ಮಸ್ತೇನಹಳ್ಳಿ ಬಳಿ ಕೈಗಾರಿಕಾ ಪ್ರದೇಶಕ್ಕಾಗಿ ಈಗಾಗಲೆ ಜಮೀನು ಸ್ವಾಧೀನ ಪ್ರಕ್ರಿಯೆ ನಡೆದಿದೆ. ಆದರೆ ಶಿಡ್ಲಘಟ್ಟದಲ್ಲಿ ಎಲ್ಲೂ ಕೈಗಾರಿಕಾ ಪ್ರದೇಶ ಇಲ್ಲ. ಇಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪಿಸುವುದರಿಂದ ಸಾಕಷ್ಟು ನಿರುದ್ಯೋಗಸ್ಥರಿಗೆ ಸ್ಥಳೀಯವಾಗಿ ಉದ್ಯೋಗ ಸಿಗಲಿದೆ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಕೋಲಾರ ಲೋಕಸಭಾಕ್ಷೇತ್ರದ ನೂತನ ಸಂಸದ ಮಲ್ಲೇಶ್‌ಬಾಬು, ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್, ಸೀಕಲ್ ರಾಮಚಂದ್ರಗೌಡ ಅವರು ಸಚಿವರೊಂದಿಗೆ ಕೆಲಕಾಲ ಮಾತುಕತೆ ನಡೆಸಿದರು.

ನಿವೇಶನ ಇಲ್ಲದ ಮತ್ತು ವಸತಿರಹಿತರಿಗೆ ಅನುಕೂಲ ಕಲ್ಪಿಸಿ

ಗಡಿಭಾಗ ತಾಲ್ಲೂಕು ಎಂದು ಪರಿಗಣಿಸಿ ವಿಶೇಷವಾಗಿ ವಸತಿ ಯೋಜನೆಯಡಿ ಹೆಚ್ಚಿನ ಸಂಖ್ಯೆಯ ಮನೆಗಳ ಮಂಜೂರು ಮಾಡಿ ನಿವೇಶನ ಇಲ್ಲದ ಮತ್ತು ವಸತಿರಹಿತರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಮನವಿ ಮಾಡಿದರು. ಇದೆಲ್ಲದಕ್ಕೂ ಮುಖ್ಯವಾಗಿ ಶಾಶ್ವತ ನೀರಾವರಿ ಯೋಜನೆ ಜಾರಿಗೆ ಇದೊಂದು ಉತ್ತಮ ಅವಕಾಶ ದೊರೆತಿದ್ದು ಎಲ್ಲಾ ಸಚಿವರು ಸೇರಿ ಬಯಲು ಸೀಮೆಯ ಈ ಭಾಗಕ್ಕೆ ಶಾಶ್ವತ ನೀರಾವರಿ ಯೋಜನೆಯನ್ನು ಜಾರಿ ಮಾಡಬೇಕೆಂದು ಕ್ಷೇತ್ರದ ಜನತೆ ಪರವಾಗಿ ಕೋರಿದರು.

ರಾಜ್ಯಮಟ್ಟದ ಟೆನಿಸ್ ಟೂರ್ನಿ: ಬೆಂಗಳೂರು, ಮಂಡ್ಯ ಚಾಂಪಿಯನ್

• ಉದಯವಾಹಿನಿ, ಮಂಡ್ಯ

ಇಲ್ಲಿ ನಡೆದ ರ

ಅಂತರಾಳದಿಂದ... EDITORIAL

ಮೂರು ಪ್ರಕರಣಗಳು ಮತ್ತು 'ಮಾನವಂತ' ಮಾಧ್ಯಮಗಳು

ಈ ಮೂರೂ ಪ್ರಕರಣಗಳಲ್ಲಿ ಪಾಲ್ಗೊಂಡಿರುವವರು ಆರ್ಥಿಕವಾಗಿ ಬಲಿಷ್ಠರು. ಬಹುಸಂಖ್ಯಾತ ಜಾತಿಗೆ ಸೇರಿದವರು. ರಾಜಕೀಯವಾಗಿ ಪ್ರಭಾವಿಗಳು. ಜನಪ್ರಿಯ ವ್ಯಕ್ತಿಗಳು. ಮೂವರಿಗೂ ಅವರದೇ ಆದ ಅಭಿಮಾನಿ ಬಳಗಗಳಿವೆ. ಸ್ಥಾನ-ಮಾನಗಳಿವೆ. ಆ ಕಾರಣದಿಂದ ಸುದ್ದಿ ಮಾಧ್ಯಮಗಳು ಸಹಜವಾಗಿಯೇ ಪ್ರಮುಖ ಸುದ್ದಿಯನ್ನಾಗಿ ಪರಿಗಣಿಸಿ ಪ್ರಕಟಿಸುತ್ತವೆ. ಪ್ರಕರಣದ ಗಂಭೀರತೆಯನ್ನು ಅರಿತು, ಪೊಲೀಸು-ಕಾನೂನಿನ ಮಾಹಿತಿ ಕಲೆಹಾಕಿ ಸಮಾಜದ ಮುಂದಿಡುತ್ತವೆ. ಸರಿ-ತಪ್ಪುಗಳ ತೀರ್ಮಾನವನ್ನು ಜನರಿಗೇ ಬಿಡುತ್ತವೆ. ಹೀಗೆ ಮಾಡುವಲ್ಲಿ ನಾಡಿನ ಮುದ್ರಣ ಮಾಧ್ಯಮ, ಅದರಲ್ಲೂ ಕೆಲವು ಮಾತ್ರ ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿವೆ. ಪತ್ರಿಕೋದ್ಯಮದ ಘನತೆಗೆ ಧಕ್ಕೆಯಾಗದಂತೆ ನೋಡಿಕೊಂಡಿವೆ. ಆದರೆ, ಇದೇ ಮಾತುಗಳನ್ನು ಮಿಕ್ಕ ಮಾಧ್ಯಮಗಳಿಗೆ ಹೇಳಲಾಗುವುದಿಲ್ಲ. ಹಲವು ಮುದ್ರಣ ಮಾಧ್ಯಮಗಳು ಪ್ರಭಾವಿಗಳ ಪರವಾಗಿವೆ. ಜಾತಿಯ ಜಾಡ್ಯಕ್ಕೆ ಅಂಟಿಕೊಂಡಿವೆ. ಆಳುವ ಸರ್ಕಾರದ ಮರ್ಜಿ-ಮುಲಾಜುಗಳಿಗೆ ಒಳಗಾಗಿವೆ. ಪ್ರಶ್ನಿಸುವುದನ್ನು ಮರೆತು ಪುಸಲಾವಣೆಗೆ ನಿಂತಿವೆ. ಸಮಾಜಕ್ಕೆ ಸುಳ್ಳು ಸುದ್ದಿಗಳನ್ನು ಬಿತ್ತರಿಸುತ್ತಲೇ ಬೆಳೆದು ಬೆಟ್ಟವಾಗಿವೆ. ಅದರಲ್ಲೂ ದೃಶ್ಯಮಾಧ್ಯಮಗಳ ನಿರೂಪಣೆ, ಧೋರಣೆ ಪತ್ರಿಕೋದ್ಯಮದ ಪಾವಿತ್ರ್ಯತೆಗೇ ಧಕ್ಕೆ ತಂದು, ಸಾರ್ವಜನಿಕ ವಲಯದಲ್ಲಿ ತಿರಸ್ಕಾರಭಾವ ಮೂಡುವಂತೆ ಮಾಡಿವೆ.

ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ, ನಟ ದರ್ಶನ್-ಪವಿತ್ರಾ ಗೌಡ ಆರೋಪಿಗಳಾಗಿರುವ ರೇಣುಕಸ್ವಾಮಿ ಕೊಲೆ ಪ್ರಕರಣ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಪೋಕ್ಸೊ ಪ್ರಕರಣ- ಇತ್ತೀಚಿನ ದಿನಗಳಲ್ಲಿ ಭಾರಿ ಸದ್ದು ಮಾಡಿದ ಸುದ್ದಿಗಳು.

ಏಪ್ರಿಲ್ 23ನೇ ತಾರೀಖು ಪ್ರಜ್ವಲ್ ರೇವಣ್ಣ ಪೆನ್ ಡ್ರೈವ್ ಪ್ರಕರಣ ಬಹಿರಂಗವಾಯಿತು. ಆದರೆ, ಬ್ರೇಕಿಂಗ್ ಸುದ್ದಿಗೆ ಬಾಯ್ದೆರೆದು ಕೂತ ಟಿವಿ ಚಾನಲ್‌ಗಳಾವುವೂ ಈ ಪೆನ್ ಡ್ರೈವ್ ಸುದ್ದಿ ಮಾಡಲಿಲ್ಲ. ಸಾಮಾಜಿಕ ಜಾಲತಾಣಗಳ ಮೂಲಕ ಕೆಲ ಯೂ ಟ್ಯೂಬರ್‌ಗಳ ಕಡೆಯಿಂದ ಸುದ್ದಿ ಹರಡಿತು. ಒಂದೇ ಒಂದು ದೃಶ್ಯಮಾಧ್ಯಮ, ಅದೂ ಕೂಡ ಹೆಣ್ಣಿನ ಘನತೆಯನ್ನು ಮಣ್ಣು ಮಾಡಿ ಸುದ್ದಿ ಬಿತ್ತರಿಸಿತು. ಆನಂತರ ಹೊಳೆನರಸೀಪುರದಲ್ಲಿ ಸಂತ್ರಸ್ತೆಯಿಂದ ದೂರು ದಾಖಲಾಯಿತು. ಪ್ರಕರಣ ಪೊಲೀಸ್ ಠಾಣೆಯ ಮೆಟ್ಟಿಲೇರಿದಾಗ, ಸಾಮಾಜಿಕ ಜಾಲತಾಣ ಸದ್ದು ಮಾಡಿದಾಗ, ಸುದ್ದಿ ಮಾಡಲೇಬೇಕಾದ ಅನಿವಾರ್ಯತೆ ಎದುರಾದಾಗ- ದೃಶ್ಯಮಾಧ್ಯಮಗಳು ಅಖಾಡಕ್ಕೆ ಇಳಿದವು. ಆದರೂ ವಿಷಯವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಬದಲಿಗೆ, ಪ್ರಕರಣದ ಮೂಲ ಸ್ವರೂಪವನ್ನೇ ಬದಲಿಸಿಬಿಟ್ಟವು. ಅನವಶ್ಯಕ ಚರ್ಚೆಗೆ ಇಳಿದು ರಾಜಕೀಯ ಕೆಸರೆರಚಾಟಕ್ಕೆ ಮಹತ್ವ ಕೊಟ್ಟವು. ಸಂತ್ರಸ್ತ ಮಹಿಳೆಯರನ್ನು ಅವಮಾನಿಸಿ, ಅಪರಾಧದ ಮೂಲವನ್ನೇ ಮರೆಮಾಚಿಬಿಟ್ಟವು. ಇನ್ನು ದರ್ಶನ್ ಪ್ರಕರಣದಲ್ಲಿ ಆತ ಕೊಲೆ ಕೇಸಿನಲ್ಲಿ ಭಾಗಿಯಾಗಿದ್ದರೆ, ಶಿಕ್ಷೆಯಾಗಲಿ. ದುರಹಂಕಾರಿಯಾಗಿದ್ದರೆ ಅಭಿಮಾನಿಗಳೇ ಹದ್ದುಬಸ್ತಿನಲ್ಲಿಡಲಿ. ಆದರೆ, ದರ್ಶನ್ ಪ್ರಕರಣದಲ್ಲಿ ದೃಶ್ಯಮಾಧ್ಯಮಗಳ ವರ್ತನೆ, ಆತನ ಮೇಲೆ ಯುದ್ಧ ಸಾರಿದಂತಿದೆ. ಎರಡು ವರ್ಷಗಳ ಹಿಂದೆ ನಟ ದರ್ಶನ್ ದೃಶ್ಯ ಮಾಧ್ಯಮಗಳ ರೀತಿ-ನೀತಿ ಕುರಿತು ಕಟುವಾಗಿ ಟೀಕಿಸಿದ್ದ. ಆ ಸಿಟ್ಟು ಈಗ ಸೇಡಿನ ರೂಪ ತಾಳಿದೆ. ಹಳ್ಳಕ್ಕೆ ಬಿದ್ದ ತೋಳಕ್ಕೆ ಆಳಿಗೊಂದು ಕಲ್ಲು ಹಾಕಲಾಗುತ್ತಿದೆ. ಬಡಪಾಯಿ ರೇಣುಕಸ್ವಾಮಿಯ ಹತ್ಯೆಗಿಂತ ದರ್ಶನ್ ಮೇಲಿನ ದ್ವೇಷವೇ ಮುಖ್ಯವಾಗಿ ಟಿವಿ ಚಾನಲ್‌ಗಳ ಅಬ್ಬರ ಅತಿರೇಕಕ್ಕೆ ಹೋಗುತ್ತಿದೆ.

ಒಂದು ಚಾನಲ್‌ನ ಒಬ್ಬ ಆಂಕರ್, 'ಇಷ್ಟೆಲ್ಲ ಆದಮೇಲೂ ಆ ನಟನ ಚಿತ್ರಗಳನ್ನು ಜನ ನೋಡ್ತರೆ ಅಂದರೆ, ಈ ಸಮಾಜಕ್ಕೆ ಏನೋ ಆಗಿದೆ' ಎಂಬ ಸಂದೇಶ ರವಾನಿಸುತ್ತಾರೆ. ಅದೇ ಮಾತುಗಳು ಆತನಿಗೂ ಅನ್ವಯಿಸುವುದಿಲ್ಲವೇ 'ಇಷ್ಟೆಲ್ಲ ಸುಳ್ಳು ಸುದ್ದಿಗಳನ್ನು ಬಿತ್ತರಿಸಿದರೂ, ದ್ವೇಷ ಬಿತ್ತಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸಿದರೂ, ಜನ ಇನ್ನೂ ಆ ಚಾನಲ್ ನೋಡ್ತರೆ ಅಂದರೆ, ಈ ಸಮಾಜಕ್ಕೆ ಏನೋ ಆಗಿದೆ' ಎಂದು ಹೇಳಬಹುದಲ್ಲವೇ ದರ್ಶನ್ ವಿರುದ್ಧದ ದೃಶ್ಯ ಮಾಧ್ಯಮಗಳ ಸಂಘಟಿತ ದಾಳಿ, ಪ್ರತೀಕಾರ ಮನೋ ಭಾವ ಏನನ್ನು ಹೇಳುತ್ತದೆ ಏತನ್ಮಧ್ಯೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಪೋಕ್ಸೋ ಪ್ರಕರಣ ಎದ್ದು ನಿಂತಿದೆ. ಈ ಪ್ರಕರಣದಲ್ಲಂತೂ ಸುದ್ದಿ ಮಾಧ್ಯಮಗಳು, ದೂರು ದಾರ ಮಹಿಳೆಯ ನಡತೆ ಸರಿ ಇಲ್ಲ, ಗಣ್ಯರ ವಿರುದ್ಧ ಆಕೆ 53 ದೂರು ನೀಡಿದ್ದಾಳೆ, ಆಕೆಯ ಪ್ರವೃತ್ತಿ, ದೂರುಗಳು ಅ ಪ್ರಾಮಾಣಿಕತೆಯಿಂದ ಕೂಡಿವೆ ಎಂಬ ತೀರ್ಮಾನಕ್ಕೆ ಬಂದುಬಿಟ್ಟಿವೆ. ಯಡಿಯೂರಪ್ಪನವರಿಗೆ ವಯಸ್ಸಾಗಿದೆ ಎನ್ನುವುದನ್ನು ಮುಂದೆ ಮಾಡಿ, ಪ್ರಕರಣದ ಗಂಭೀರತೆಯನ್ನು ಮರೆಮಾಚುತ್ತಿವೆ. ಪ್ರಕರಣವನ್ನು ಮುಚ್ಚಿಹಾಕಲು ಹಣ ಕೊಟ್ಟಿದ್ದು, ಬೆದರಿಕೆ ಒಡ್ಡಿದ್ದು, ಸಾಕ್ಷ್ಯ ನಾಶ ಮಾಡಿದ್ದರ ಬಗೆಗಿನ ಪ್ರಶ್ನೆ ಎತ್ತುವುದನ್ನು ಪ್ರಜ್ಞಾಪೂರ್ವಕವಾಗಿ ಹಿನ್ನೆಲೆಗೆ ಸರಿಸಿವೆ. ಈ ಪ್ರಕರಣದಲ್ಲಿ ರಾಜ್ಯ ಹೈಕೋರ್ಟ್, ಯಡಿಯೂರಪ್ಪನವರನ್ನು ಬಂಧಿಸುವುದು ಸದ್ಯಕ್ಕೆ ಬೇಡ, ವಿಚಾರಣೆಗೆ ಹಾಜರಾಗುತ್ತಾರೆ ಎಂದಿದೆ. ಆತುರಕ್ಕೆ ಬಿದ್ದ ದೃಶ್ಯ ಮಾಧ್ಯಮಗಳು, ಬಿಗ್ ರಿಲೀಫ್, ಜಾಮೀನು ಮಂಜೂರು ಎಂದು ಬ್ರೇಕಿಂಗ್ ನ್ಯೂಸ್ ಬಿತ್ತರಿಸಿಬಿಟ್ಟವು. ಅಷ್ಟೇ ಅಲ್ಲ, ಯಡಿಯೂರಪ್ಪನವರ ಮಗ, ಹಿತೈಷಿಗಳು, ಪಕ್ಷದ ನಾಯಕರ ಮೂತಿಗೆ ಮೈಕ್ ಹಿಡಿದು, ಯಡಿಯೂರಪ್ಪನವರನ್ನು ಹಸು ಎಂಬಂತೆ ಚಿತ್ರಿಸಿಟ್ಟವು. ಬದಲಿಗೆ ಪ್ರಾಸಿಕ್ಯೂಷನ್ ಪರ ವಕೀಲರಾದ ಶಶಿಕಿರಣ್ ಶೆಟ್ಟಿ, ಜಗದೀಶ್, ಬಾಲನ್‌ರ ಅಭಿಪ್ರಾಯ ಕೇಳಲಿಲ್ಲ. ಅಷ್ಟೇ ಏಕೆ, ಸಂತ್ರಸ್ತೆಯ ಅಣ್ಣನ ಅನಿಸಿಕೆಯನ್ನೂ ದಾಖಲಿಸಲಿಲ್ಲ. ಇದು ಮಾಧ್ಯಮಗಳು ಮಾಡುವ ಕೆಲಸವೇ ಇವರು ಯಾರ ಪರ ಈ 'ಮಾನವಂತ' ಮಾಧ್ಯಮಗಳನ್ನು ಜನ ತಿರಸ್ಕರಿಸುವ ತುರ್ತಿದೆ. ಇಲ್ಲದಿದ್ದರೆ, ಇವತ್ತು ಜನರ ಚಿಂತನಾಕ್ರಮವನ್ನು ಕೊಲ್ಲುತ್ತಿರುವವರು, ನಾಳೆ ಜನರನ್ನೇ ಕೊಂದರೂ ಆಶ್ಚರ್ಯವಿಲ್ಲ.

• ಹಿಂದಿನ ಸಂಚಿಕೆಯಿಂದ

''ನೀನು ಈ ಭೂಮಿಗೆ ಒಡೆಯನಾಗಿದ್ದ ಕಾಲವೊಂದಿದ್ದಿತು. ಆ ಶಕುನಿಯ ಮಾತನ್ನು ಕೇಳಿ ಜನ್ಮಸಿದ್ಧ ಹಕ್ಕಾಗಿದ್ದ ನಮ್ಮ ಭೂಮಿಯಿಂದ ನಮ್ಮನ್ನು ವಂಚಿಸಿದೆ. ವನವಾಸ ಅಜ್ಞಾತವಾಸಗಳನ್ನು ಮುಗಿಸಿ ಬಂದು ನಮ್ಮ ರಾಜ್ಯವನ್ನು ನಮಗೆ ಕೊಡು ಎಂದು ಮೃದುವಾಗಿ ಕೇಳಿದಾಗ ನಿನಗೆ ಈ ಔದಾರ್ಯವಿರಲಿಲ್ಲ. ಸಂಧಿಯ ಪ್ರಸ್ತಾಪದೊಡನೆ ಕೃಷ್ಣನನ್ನು ಕಳುಹಿಸಿದಾಗ ಸೂಜಿಯ ಮೊನೆಯಷ್ಟು ಭೂಮಿಯನ್ನೂ ಕೊಡುವುದಿಲ್ಲವೆಂದೆ. ಈಗ ಇದ್ದಕ್ಕಿದ್ದಂತೆ, ಅದು ಹೇಗೆ ಉದಾರಿಯಾಗಿಬಿಟ್ಟೆ ನಿನ್ನ ಮನಸ್ಸಿನ ಸ್ತಿಮಿತ ಕಳೆದುಹೋಗಿದೆಯೆಂದು ಕಾಣುತ್ತದೆ. ಇಲ್ಲವಾದರೆ ಇಡೀ ಪ್ರಪಂಚದ ಸಾರ್ವಭೌಮನಾದ ದುರ್ಯೋಧನ, ಐದು ಹಳ್ಳಿಗಳನ್ನೂ ಕೊಡುವುದಿಲ್ಲವೆಂದವನು, ಹೇಗೆತಾನೆ ಶತ್ರುವಿಗೆ ತನ್ನ ಇಡೀ ರಾಜ್ಯವನ್ನು ಕೊಟ್ಟುಬಿಡಲು ಮುಂದಾಗುತ್ತಾನೆ? ಈಗ ನಿನ್ನ ಬಳಿ ರಾಜ್ಯವೆಲ್ಲದೆ ಹಾಗೆ ಕೊಟ್ಟುಬಿಡುವುದಕ್ಕೆ ಎಷ್ಟೋ ವರ್ಷಗಳಿಂದ ಇರುವ ಈ ದ್ವೇಷ ತೀರುವುದಕ್ಕಾಗಿ ಈಗ ನೀನು ನನ್ನೊಡನೆ ಹೋರಾಡಬೇಕು. ಗೆದ್ದವರು ಏಕಮಾತ್ರ ಸಾಮ್ರಾಟರಾಗಬೇಕು. ಬೇರೆ ಮಾರ್ಗವೇ ಇಲ್ಲ. ಇಷ್ಟೆಲ್ಲ ಆದಮೇಲೆ ನಾನು ನಿನ್ನನ್ನು ಬದುಕಿರಲು ಬಿಡಲಾರೆ; ಬಾ ಯುದ್ಧಮಾಡು.

''ಮೊದಲಿನಿಂದಲೂ ನಿನಗೆ ನಮ್ಮನ್ನು ಕಂಡರಾಗದು. ನಮ್ಮನ್ನು ನಾಶಮಾಡಲು ವರ್ಷಗಟ್ಟಲೆ ಪ್ರಯತ್ನಪಟ್ಟೆ. ನಾವೀಗ ಯುದ್ಧದಲ್ಲಿಗೆದ್ದಿದ್ದೇವೆ. ನಮಗೀಗ ಬೇಕಾಗಿರುವುದು ನಿನ್ನ ಸಾವು. ಸ್ವರ್ಗಕ್ಕೆ ಹೋಗಲು ಯೋಗ್ಯತೆಯಿಲ್ಲದ ನಿನಗೆ ನಾನು ಅನುವುಮಾಡಿ ಕೊಡುತ್ತೇನೆ. ನೀರಿನಿಂದೆದ್ದು ಬಂದು ಯುದ್ಧಮಾಡುಎಂದನು. ಹೃದಯದೊಳಗಿನ ಭಾವೋದ್ರೇಕದಿಂದ ಯುಧಿಷ್ಠಿರನಿಗೆ ಏದುಸಿರು ಬರುತಿತ್ತು. ದುರ್ಯೋಧನನು ಇಂತಹ ಅಪಮಾನದ ಮಾತನ್ನು ಹಿಂದೆ ಯಾರಿಂದಲೂ ಕೇಳಿರಲಿಲ್ಲ. ಅವನ ಸ್ವಾಭಿಮಾನದ ಮನಸ್ಸಿಗೆ ಯುಧಿಷ್ಠಿರನ ಈ ಮಾತುಗಳಿಂದ ಬಹಳ ಘಾಸಿಯಾಯಿತು. ಅಸಹಾಯ ರೋಷದಿಂದ ಕೈಕೈಹೊಸೆಯತೊಡಗಿದ. ಸರೋವರದಿಂದ ಹೊರಗೆ ಬಂದು ಹೋರಾಡಲು ನಿರ್ಧರಿಸಿದ. ಅಗತ್ಯವಾಗಿದ್ದ ಒಂದು ರಾತ್ರಿಯ ವಿಶ್ರಾಂತಿಯೂ ಅವನಿಗೆ ಸಿಕ್ಕಿದಂತಾಯಿತು. ಸವಾಲನ್ನೆದುರಿಸಲೇ ಬೇಕು. ವಿಧಿಯಿಲ್ಲ.

ದುರ್ಯೋಧನ: ''ನೀವೆಲ್ಲ ಧರ್ಮವಂತರು; ಆದರೂ ಅಸಹಾಯನಾಗಿ, ಏಕಾಂಗಿಯಾಗಿ, ರಥವಿಲ್ಲದೆ, ಕವಚವಿಲ್ಲದೆ ಗಾಯಾಳುವಾಗಿರುವ ನನ್ನ ಜೊತೆಯಲ್ಲಿ ಎಲ್ಲರೂ ಹೋರಾಡಲು ಬಯಸುತ್ತಿರುವಿರಿ. ನಿಮ್ಮಲ್ಲಿ ಯಾರಿಗೂ ನಾನು ಭಯಪಡುವವನಲ್ಲ. ಈಗ ನಿಮ್ಮೆಲ್ಲರನ್ನೂ ನಾನು ಕೊಲ್ಲಬಲ್ಲೆ. ಆದರೆ ಅಷ್ಟೊಂದು ಜನ ಸೇರಿ ಆಯುಧರಹಿತನಾದ, ಕವಚರಹಿತನಾದ ಒಬ್ಬನನ್ನು ಕೊಲ್ಲಲು ಬಂದಿರುವಿರಲ್ಲ; ಅಧರ್ಮಿಗಳಾಗುವಿರಲ್ಲ ಎಂಬುದೇ ನನ್ನ ದುಃಖ. ನನ್ನ ಮೇಲಿನ ಕೋಪದಿಂದ, ಪರಲೋಕಕ್ಕೆ ಕರೆದೊಯ್ಯುವ ಏಕಮಾತ್ರ ಸಾಧನವಾದ ಧರ್ಮವನ್ನು ಬಿಟ್ಟುಬಿಡುವಿರಾ? ಅದೇನಿದ್ದರೂ, ನಿಮ್ಮ ತೀರ್ಮಾನ, ನನ್ನದಲ್ಲ. ನನಗೇನೂ ತೊಂದರೆಯಿಲ್ಲ. ನಾನು ಕುರುವಂಶಸಂಜಾತನಾದ ಕ್ಷತ್ರಿಯ. ನಾನು ರಾಧೇಯನನ್ನು ಕೂಡಿಕೊಳ್ಳಬೇಕೆಂದು ಕಾತರನಾಗಿರುವೆ. ಅವನೆಂತಹ ಮಹಾನ್ ಚೇತನ ಎಂಬುದನ್ನು ನೀವೆಂದಿಗೂ ಅರಿತುಕೊಳ್ಳಲಾರಿ; ಅಂತಹ ಯೋಗ್ಯತೆಯು ನಿಮಗಿಲ್ಲ. ನಿಮ್ಮನ್ನೆಲ್ಲ ಕೊಂದು, ಅನಂತರ ಸತ್ತು ರಾಧೇಯನನ್ನು ಹೋಗಿ ಸೇರುತ್ತೇನೆ. ಬರುತ್ತಿರುವೆ, ಸಾಯಲು ಸಿದ್ಧರಾಗಿ!

ಮುಂದುವರಿಯುವುದು...

ತಂದೆಯಂದಿರ ದಿನದ ವಿಶೇಷ 'ಅಪ್ಪ'

ವಿ.ಎಂ.ಎಸ್.ಗೋಪಿ
• ಉದಯವಾಹಿನಿ ವಿಶೇಷ

ಅಪ್ಪ ಎಂದರೆ ಬೆಳಕು

ಜೂನ್ 16 ರಂದು ವಿಶ್ವ ಅಪ್ಪಂದಿರ ದಿನ. ಅಪ್ಪ ಐ ಲವ್ ಯೂ ಅಪ್ಪ. ಫಾದರ್ಸ್ ಡೇ ದಿನದ ಅರ್ಥ, ತಂದೆಯ ಮಹತ್ವವನ್ನು ತಿಳಿದುಕೊಳ್ಳಬೇಕು. ಅಪ್ಪ ಅಮ್ಮ ದೇವರ ಸಮಾನ. ಅಪ್ಪ ಎಂದರೆ ಬೆಳಕು. ಅಪ್ಪನಿಂದಲೇ ಈ ಬದುಕು.. ಅಪ್ಪನ ಸ್ಥಾನವನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ. ತಂದೆಯ ಸ್ಥಾನ ಮತ್ತು ಅಪ್ಪ ಅಮ್ಮನ ಪ್ರೀತಿ ಅತ್ಯಮೂಲ್ಯವಾದದ್ದು. ನಮ್ಮನ್ನು ಕಣ್ಣಲ್ಲಿ ಕಣ್ಣಿಟ್ಟು ಸಾಕುವರು ಅಪ್ಪ. ಅಂತಹ ತಂದೆ ತಾಯಿಗೆ ನಾವು ಯಾವಗಲೂ ಗೌರವದಿಂದ ಕಾಣಬೇಕು.

ಅದು ನಮ್ಮ ಕರ್ತವ್ಯ ಕೂಡ. ಅಪ್ಪ ನೀ ದೇವರು ಈ ಜಗವೆಲ್ಲಾ ನೀನೆ ಅಪ್ಪ. ಅಪ್ಪ ಎಂಬ ಎರಡಕ್ಷರ ಪವಿತ್ರವಾದ ಸಂಕೇತ. ಹೌದು ಅಪ್ಪ ಅಮ್ಮ ದೇವರ ಸ್ವರೂಪ. ನಾವು ದೇವರನ್ನು ಎಷ್ಟು ಭಯ ಭಕ್ತಿಯಿಂದ ಗೌರವದಿಂದ ಪೂಜಿಸಿ ಆರಾದಿಸುತ್ತೇವೆಯೋ ಹಾಗೇಯೇ ಅಮ್ಮ ಅಪ್ಪನ ಭಯ ಭಕ್ತಿಯಿಂದ ಗೌರವದಿಂದ ನೋಡಿಕೊಳ್ಳಬೇಕು. ಅಪ್ಪ ಇಲ್ಲದ ಪ್ರಪಂಚವಿಲ್ಲ. ಎಲ್ಲಾ ಮಕ್ಕಳಿಗೂ ತಂದೆ ತಾಯಿಯ ಆಶೀರ್ವಾದ ಬೇಕು ಅವರಿಂದಲೇ ನಾವು. ತಾಯಿ ಮೊದಲ ಗುರು ಮನೆಯ ಮೊದಲ ಪಾಠ ಶಾಲೆ ತನ್ನ ಮಕ್ಕಳಿಗೆ ಮೊದಲನೆಯ ಶಿಕ್ಷಕಿ ತಾಯಿ. ಮಗು ತನ್ನ ಜೀವನದಲ್ಲಿ ಹೇಳುವ ಮೊದಲ ಪದವೂ ಅಮ್ಮ ಅಪ್ಪ ಎಲ್ಲಾ ಮಕ್ಕಳ ಪಾಲಿಗೆ ಅಪ್ಪನೇ ಮೊದಲ ಹೀರೋ. ಅಪ್ಪ ಮಗುವಿನ ತೋರು ಬೆರಳು ಹಿಡಿದು ತನ್ನ ಸುತ್ತ ಮುತ್ತ ಇಡೀ ಜಗತ್ತನೇ ತೋರಿಸುತ್ತಾರೆ. ಅಪ್ಪ ಅಂದರೆ ಜಗತ್ತು ಅಪ್ಪ ಅಂದರೆ ದೇವರು ಅಪ್ಪ ಅಂದರೆ ಶಕ್ತಿ ಅಪ್ಪ ಅಂದರೆ ಆಕಾಶ ಅಪ್ಪ ಅಂದರೆ ಸ್ನೇಹಿತ ಅಪ್ಪ ಅಂದರೆ ಪಪ್ರಂಚ ಅಪ್ಪ ಅಂದರೆ ಪ್ರೀತಿ ಅಪ್ಪ ಅಂದರೆ ಬೆಳಕು ಅಪ್ಪ ಅಂದರೆ ಸಂತೋಷ ಹೀಗೆ ಎಷ್ಟು ಅರ್ಥಗಳಿವೆ. ಅಪ್ಪ ಮಕ್ಕಳನ್ನು ಬೈಯುವುದಕ್ಕೆ ಮುಖ್ಯ ಕಾರಣ ಮಕ್ಕಳು ಯಾವ ತಪ್ಪೂ ಮಾಡದಿರಲಿ.

ಉದಯವಾಹಿನಿ ಚಿತ್ರ

ನಮಗೆ ಯಾವ ಕೆಡಕು ಆಗಬಾರದು ಅಂತ ಎಷ್ಟೇ ಬೈದ್ರೂ ಮನಸ್ಸಲಿ ಬೆಟ್ಟದಷ್ಟು ಪ್ರೀತಿ ಇರುತ್ತದೆ. ತನಗೆ ಎಷ್ಟೇ ಕಷ್ಟ ನೋವು ಬಂದ್ರು ತನ್ನ ಮಕ್ಕಳು ನಮ್ಮ ಕುಟುಂಬ ಖುಷಿಯಾಗಿ ಸಂತೋಷವಾಗಿ ಇರ ಬೇಕು ಎಂದು ಬಯಸುವರು ಅಪ್ಪ. ಮಕ್ಕಳು ಕೇಳಿ ದ್ದನ್ನೆಲ್ಲಾ ಕೊಡಿಸೋಕ್ ಆಗದೇ ಇದ್ರೂ ಕೈಲಾಗಿದ್ದನ್ನ ಕೊಡಿಸುವರು ಅಪ್ಪ. ಬೇಡಿದಷ್ಟು ಕೊಡದೇ ಹೋದ್ರು ಸಲ್ಪ ವಾದರು ಕೊಡಿಸುವರು ತನ್ನಿಂದ ಸಾಧಿಸೋಡಕ್ಕಾಗದೇ ಇರೋದನ್ನ ತನ್ನ ಮಕ್ಕಳಿಂದ ಮಾಡಿಸೋಡಕ್ಕೆ ಪ್ರಯತ್ನ ಮಾಡುವರು. ಎಷ್ಟೇ ಕಷ್ಟಗಳು ನೋವುಗಳು ಬಂದರು ತನ್ನಲ್ಲಿಟ್ಟುಕೊಂಡು ಮಕ್ಕಳನ್ನು ಪ್ರೀತಿ ಮಾಡುವರು ಅಪ್ಪ. ಅಪ್ಪ ಯಾವಗಲೂ ತನ್ನ ದುಃಖಗಳನ್ನು ಮರೆತು ಮಕ್ಕಳ ಜೀವನ ಸಂತೋಷದ ಬಗ್ಗೆ ಯೋಚಿಸುತ್ತಾರೆ.

ಮಕ್ಕಳು ಸಂತೋಷವಾಗಿರುವುದು ನೋಡಿ ಅವರು ಸಂತೋಷವಾಗಿರುತ್ತಾರೆ. ತಂದೆ ತಾಯಿಯ ಋಣವನ್ನು ನಾವು ಎಂದಿಗೂ ತೀರಿಸಲು ಸಾಧ್ಯವಿಲ್ಲ ಆದ್ದರಿಂದ ನಾವು ನಮ್ಮ ತಂದೆ ತಾಯಿಗೆ ಸಾಧ್ಯವಾದಷ್ಟು ಸೇವೆ ಸಲ್ಲಿಸಬೇಕು ನಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಲು ಅವರು ತಮ್ಮ ಜೀವನವನ್ನು ಮುಡಿಪಾಗಿಟ್ಟ ಜೀವನದ ಪ್ರತಿಯೊಂದು ಸಂತೋಷವನ್ನು ನಾವು ತಾಯಿ ತಂದೆಗೇ ನೀಡಬೇಕು. ಅಪ್ಪ ಐ ಲವ್ ಯೂ...!

ಗಡಿನಾಡ ಕನ್ನಡಕ್ಕೆ ಜೈ ಎನ್ನೋಣ

ಹೆಚ್.ಎಸ್. ಪ್ರತಿಮಾ
• ಉದಯವಾಹಿನಿ ವಿಶೇಷ

ಮನದ ಮಿಡಿತ ಹೆಚ್ಚಿಸಿ ಬೆಳಸೋ ಭಾಷೆ ಭಾವದಿ ಪ್ರೀತಿ ವಿಶ್ವಾಸದ ಆಸೆ ಎಲ್ಲಾ ಸೇರಿ ಉಳಿಸಬೇಕು ಚೆಂದವದುವೆ
ಕನ್ನಡಕ್ಕೆ ಯಾವುದಿದೆ ಸಾಟಿ ಏನುವೇ...
ಕರುನಾಡ ತಾಯ ತೇರ ಎಳೆಯೋಣ ಬನ್ನಿ
ಕನ್ನಡದ ಕಂಪ ಎಲ್ಲೆಡೆ ಪಸರಿಸೋಣ
ವೆನ್ನಿ ಗಡಿನಾಡ ಕನ್ನಡವ ಉಳಿಸೋಣವೆನ್ನಿ ಸಂಸ್ಕೃತಿಯ ಚಂದದ
ಭಾಷೆ ನಮ್ಮದು, ಜೈಎನ್ನಿ...
ಗಡಿನಾಡ ಕನ್ನಡಕ್ಕೆ ಜೈ ಎನ್ನೋಣ ಬನ್ನಿ ಬೇದ ಭಾವ ತೊರೆದು ಕ
ಸೋಣವೆನ್ನಿ ಚಂದದ ಮಾತಿನಲಿ
ಕನ್ನಡವ ಮಾತನಾಡುತಲಿ ಆಸೆ ಆಕಾಂಕ್ಷೆ
ತೋರುತ ಹೇಳುತಲಿ...
ತಾಯನ್ನ ನೆನೆಯುತ, ತಾಯಿನುಡಿಯ ನುಡಿಯುತಲಿ ವಿಜೃಂಭಿಸಿ ನಡೆಯೋಣ ಕನ್ನಡವ ಬೆಳೆಸೋಣ
ಎಲ್ಲಾ ಭಾಷೆಯಲ್ಲಿ ಕನ್ನಡಕ್ಕೆ ಕೈ ಮುಗಿಯೋಣ
ಸಂತಸದ ಬಾಳಿಗೆ ದಾರಿದೀಪವಾಗೋಣ...

3800ಕ್ಕೂ ಹೆಚ್ಚು ಫ್ಲೆಕ್ಸ್ ತೆರವು ; 48 ಎಫ್‌ಐಆರ್ ದಾಖಲು

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಅನಧಿಕೃತವಾಗಿ ಫ್ಲೆಕ್ಸ್/ಬ್ಯಾನರ್ ಅಳವಡಿಸುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಅದರಂತೆ ಇದುವರೆಗೆ ಪ

ಬೋಧಕರ ಹುದ್ದೆ ಭರ್ತಿಗೆ ನಿರ್ಲಕ್ಷ್ಯ : ಅಸಮಾಧಾನ

● ಪ್ರತಿ ವರ್ಷ ಪಿಯುಸಿ ವ್ಯಾಸಂಗಕ್ಕಾಗಿ ಸಿಂಧನೂರು ಹಾಗೂ ಮಾನ್ವಿ ಪಟ್ಟಣದ ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ಸ್ಥಿತಿ

• ಉದಯವಾಹಿನಿ ಮಾನ್ವಿ

ತಾಲ್ಲೂಕಿನ ಪೋತ್ನಾಳ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಆರಂಭವಾಗಿ ಏಳು ವರ್ಷಗಳು ಗತಿಸಿದರೂ ಪೂರ್ಣ ಪ್ರಮಾಣದಲ್ಲಿ ಬೋಧಕ, ಬೋಧಕೇತರ ಹುದ್ದೆಗಳ ಭರ್ತಿಗೆ ನಿರ್ಲಕ್ಷ್ಯ ವಹಿಸಿರುವುದು ಸ್ಥಳೀಯರಲ್ಲಿ ಅಸಮಾಧಾನ ಮೂಡಿಸಿದೆ. ಇದರಿಂದ ಪೋತ್ನಾಳ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಅನೇಕ ವಿದ್ಯಾರ್ಥಿಗಳು ಪ್ರತಿ ವರ್ಷ ಪಿಯುಸಿ ವ್ಯಾಸಂಗಕ್ಕಾಗಿ ಸಿಂಧನೂರು ಹಾಗೂ ಮಾನ್ವಿ ಪಟ್ಟಣದ ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ಸ್ಥಿತಿ ನಿರ್ಮಾಣವಾಗಿದೆ.

2017-18ರಲ್ಲಿ ಆಗಿನ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ವತಿಯಿಂದ ಕಾಲೇಜು ಆರಂಭಕ್ಕೆ ಸರ್ಕಾರ ಕ್ರಮ ಕೈಗೊಂಡಿತ್ತು.

ಉದಯವಾಹಿನಿ ಚಿತ್ರ

ಅನೈತಿಕ ಚಟುವಟಿಕೆಗಳ ತಾಣ

ಈ ಕಾಲೇಜಿಗೆ ಅಗತ್ಯವಿರುವ ಪ್ರಾಂಶುಪಾಲ ಸೇರಿದಂತೆ ಒಟ್ಟು 10 ಬೋಧಕ, ಬೋಧಕೇತರ ಹುದ್ದೆಗಳು ಮಂಜೂರಾಗಿಲ್ಲ. ಜಿಲ್ಲೆಯ ಸಜ್ಜಲಗುಡ್ಡ ಗ್ರಾಮದ ಸರ್ಕಾರಿ ಪಿಯು ಕಾಲೇಜಿನಲ್ಲಿ ವಿಜ್ಞಾನ ವಿಭಾಗ ರದ್ದಾದ ಕಾರಣ ಅಲ್ಲಿನ ಮೂರು ಮಂಜೂರಾದ ಹುದ್ದೆಗಳನ್ನು ಈ ಕಾಲೇಜಿಗೆ ವರ್ಗಾಯಿಸಲಾಗಿತ್ತು.

ಕಾಲೇಜಿನಲ್ಲಿ ಸಪ್ರಸ್ತುತ ಕಲಾ ಹಾಗೂ ವಾಣಿಜ್ಯ ವಿಭಾಗಗಳ ಸಂಯೋಜನೆ ಇದೆ. ಕಳೆದ ಶೈಕ್ಷಣಿಕ ವರ್ಷ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ 145 ವಿದ್ಯಾರ್ಥಿಗಳು, ವಾಣಿಜ್ಯ ವಿಭಾಗದಲ್ಲಿ 15 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಪ್ರಸಕ್ತ ವರ್ಷ ಪ್ರವೇಶಗಳು ಆರಂಭವಾಗಿವೆ.

ಇಂಗ್ಲಿಷ್, ಇತಿಹಾಸ ಹಾಗೂ ಸಮಾಜಶಾಸ್ತ್ರ ವಿಷಯಗಳಿಗೆ ಮಾತ್ರ ಕಾಯಂ ಉಪನ್ಯಾಸಕರು ಇದ್ದಾರೆ. ಸಮಾಜಶಾಸ್ತ್ರ ವಿಷಯದ ಉಪನ್ಯಾಸಕಿಗೆ ಪ್ರಭಾರ ಪ್ರಾಂಶುಪಾಲ ಹುದ್ದೆಯ ಜವಾಬ್ದಾರಿ ನೀಡಲಾಗಿದೆ. ಕನ್ನಡ, ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಮತ್ತು ವಾಣಿಜ್ಯ ವಿಭಾಗದ ಉಪನ್ಯಾಸಕ ಹುದ್ದೆಗಳು ಖಾಲಿ ಇದ್ದು ಅತಿಥಿ ಉಪನ್ಯಾಸಕರನ್ನು ಅವಲಂಬಿಸಲಾಗಿದೆ. ಬೋಧಕೇತರ ಸಿಬ್ಬಂದಿ ಇಲ್ಲ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಖಾಲಿ ಹುದ್ದೆಗಳ ಮಂಜೂರಿಗೆ ಸ್ಥಳೀಯರು ಮನವಿ ಮಾಡಿದ್ದಾರೆ.

> ಸರ್ಕಾರಿ ಪಿಯು ಕಾಲೇಜು ಪೋತ್ನಾಳ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳ ಕುರಿತು ಮೇಲಧಿಕಾರಿಗಳ ಗಮನಕ್ಕೆ ತರಲಾಗಿದೆ. ಎಚ್.ಶರ್ಫುದ್ದೀನ್ ಪೋತ್ನಾಳ ಅಧ್ಯಕ್ಷ ಸಿಐಟಿಯು ಸಂಘಟನೆ ಕಾಲೇಜಿನಲ್ಲಿ ಕಾಯಂ ಬೋಧಕ ಹುದ್ದೆಗಳ ಭರ್ತಿ ಸೇರಿದಂತೆ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು
> -ಚನ್ನಬಸಮ್ಮ, ಪ್ರಭಾರ ಪ್ರಾಂಶುಪಾಲೆ

ಕಾಂಪೌಂಡ್ ನಿರ್ಮಾಣ ನನೆಗುದಿಗೆ

ಪೊತ್ನಾಳ ಗ್ರಾಮದಲ್ಲಿ 1.35ಕೋಟಿ ವೆಚ್ಚದಲ್ಲಿ ಸುಸಜ್ಜಿತ ಪಿಯು ಕಾಲೇಜು ಕಟ್ಟಡ ನಿರ್ಮಿಸಲಾಗಿದೆ. ಆದರೆ ಕಟ್ಟಡಕ್ಕೆ ಕಾಂಪೌಂಡ್ ಇಲ್ಲದಿರುವ ಕಾರಣ ಸುರಕ್ಷತೆಗೆ ಧಕ್ಕೆಯಾಗಿದೆ. ಕಾಲೇಜಿನ ಆವರಣ ಸಂಜೆಯ ಸಮಯದಲ್ಲಿ ಮದ್ಯ ಸೇವನೆ ಸೇರಿದಂತೆ ಅನೈತಿಕ ಚಟುವಟಿಕೆಗಳ ತಾಣವಾಗಿ ಮಾರ್ಪಡುತ್ತದೆ. ಕಾಂಪೌಂಡ್ ನಿರ್ಮಾಣಕ್ಕೆ ಸ್ಥಳೀಯ ಗ್ರಾಮ ಪಂಚಾಯಿತಿ ಆಡಳಿತ 30ಲಕ್ಷ ಅನುದಾನ ಮಂಜೂರು ಮಾಡಿತ್ತು. ಆದರೆ, ಕಾಲೇಜಿಗೆ ಮೀಸಲಾದ ಜಾಗದ ವ್ಯಾಪ್ತಿ ಕುರಿತು ಆಕ್ಷೇಪಣೆ ವ್ಯಕ್ತವಾದ ಹಿನ್ನೆಲೆಯಲ್ಲಿ ನಿರ್ಮಾಣ ಕಾರ್ಯ ನನೆಗುದಿಗೆ ಬಿದ್ದಿದೆ. ಕಾಲೇಜಿನ ಜಾಗದ ಹದ್ದುಬಸ್ತು ಮಾಡಿಸುವ ಕುರಿತು ತಹಶೀಲ್ದಾರ್ ಅವರಿಗೆ ಪತ್ರ ಬರೆಯಲು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಸೂಚನೆ ನೀಡಿದ್ದಾಗಿ ಪ್ರಭಾರ ಪ್ರಾಂಶುಪಾಲೆ ಚನ್ನಬಸಮ್ಮ ತಿಳಿಸಿದ್ದಾರೆ.

ಬೀಜ ಮತ್ತು ಗೊಬ್ಬರಗಳಿಗೆ ಸರ್ಕಾರ ನಿಗದಿಪಡಿಸಿದ ಬೆಲೆ ತೆಗೆದುಕೊಳ್ಳಬೇಕು

• ಉದಯವಾಹಿನಿ ಜೇವರ್ಗಿ

ಜೇವರ್ಗಿ ಮತ್ತು ಯಡ್ರಾಮಿ ತಾಲ್ಲೂಕಿನಲ್ಲಿ ಜಿಲ್ಲಾ ಕೃಷಿ ಸಹಾಯಕ ನಿರ್ದೇಶಕರು ಹಾಗೂ ಜೇವರ್ಗಿ ಕೃಷಿ ನಿರ್ದೇಶಕರು ಪಟ್ಟಣದ ಕೃಷಿ ಬೀಜ ಮಾರುಕಟ್ಟೆಯಲ್ಲಿ ಅಂಗಡಿಗಳಿಗೆ ಭೇಟಿ ನೀಡಿ ಬಿಲ್ಲುಗಳ ಪರಿಶೀಲನೆ ನಡೆಸಿದರು. ಅನಧಿಕೃತಗಳ ಮಳಿಗೆಗಳ ಮೇಲೆ ದಾಳಿ ಮಾಡಿ ಬಿಲ್ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಹಣ ಪಡೆಯುತ್ತಿರುವ ಅಂಗಡಿಗಳ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ ತಾಲ್ಲೂಕ ಕೃಷಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ಯಾವುದೇ ರೀತಿ ರೈತರಿಗೆ ಸುಲಿಗೆ ನಿಂತ ಮಳಿಗೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚನೆ.

ಸಹಾಯಕ ಕೃಷಿ ನಿರ್ದೇಶಕರು ಜೇವರ್ಗಿ, ಸಹಾಯಕ ಕೃಷಿ ನಿರ್ದೇಶಕರು ವಿಷಯ ತಜ್ಞರು ಕಲಬುರಗಿ, ತಾಂತ್ರೀಕ ಅಧಿಕಾರಿ ಜೇವರಗಿ ಮತ್ತು ರೈತ ಸಂಪರ್ಕ ಕೇಂದ್ರ ಜೇವರ್ಗಿ ಮತ್ತು ನೆಲೋಗಿ ಮುಖ್ಯ ಸ್ಥರುಗಳೊಂದಿಗೆ ಜೇವರ್ಗಿಯ 03 ಮಾರಾಟ ಮಳಿಗೆಗಳಿಗೆ ಹಾಗೂ ಯಡ್ರಾಮಿಯ 02 ಮಾರಾಟ ಮಳಿಗೆಗಳಿಗೆ ದಿನಾಂಕ: 12-06-2024ರಂದು ಬುಧವಾರ ಅನಿರೀಕ್ಷಿತ ಬೇಟಿನೀಡಿ ಬಿತ್ತನೆ ಬೀಜ ಮತ್ತು

ಉದಯವಾಹಿನಿ ಚಿತ್ರ

ಜೇವರಗಿ ರವರಿಂದ ತಿಳುವಳಿಕೆ

ಅಲ್ಲದೆ ಯಾವುದೇ ಸಂಧರ್ಬದಲ್ಲಿ ಬೀಜ ಮತ್ತು ರಸಗೊಬ್ಬರಗಳನ್ನು ಎಂ.ಆರ್.ಪಿ (ಗರಿಷ್ಠ ಮಾರಾಟದರ) ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡದಿರಲು ಹಾಗೂ ಬೀಜ ಮತ್ತು ರಸಗೊಬ್ಬರ ಮಾರಾಟ ಕಾಯ್ದೆಗಳನ್ನು ಉಲ್ಲಂಘಸದಿರಲು ಸಹಾಯಕ ಕೃಷಿ ನಿರ್ದೇಶಕರು ಜೇವರಗಿ ರವರು ತಿಳುವಳಿಕೆ ನೀಡಿರುತ್ತಾರೆ.

ರಸಗೊಬ್ಬರಗಳ ದಾಸ್ತಾನು, ಮಾರಾಟ ವಿವರಗಳನ್ನು ಅಬ್ದುಲ್ ಮಾಜಿದ್ ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸಿದರು. ಅಲ್ಲದೆ ಜೇವರ್ಗಿಯ 03 ಮತ್ತು ಯಡ್ರಾಮಿಯ 02 ಮಾರಾಟ ಮಳಿಗೆಗಳ ಮಾಲಿಕರುಗಳಿಗೆ ಮಾರಾಟ ಬಿಲ್ಲುಗಳ ಮೇಲೆ ಖರಿದಿದಾರ ರೈತರ ಸಹಿ ಪಡೆದಿಲ್ಲ ಹಾಗೂ ಕೆಲವೊಂದು ಸಂಧರ್ಬದಲ್ಲಿ ಬೀಜ ಖರೀದಿದಾರರಿಗೆ ನಿಗಧಿಪಡಿಸಿದ ನಗದು/ಉದ್ರಿ ಬಿಲ್ಲು ನೀಡಿರುವದಿಲ್ಲವೆಂದು ಮಾರಾಟ ತಡೆ ಆದೇಶ ನೀಡಿರುತ್ತಾರೆ. ಜೇವರಗಿಯ ಮೇ॥ ಸಾಯಿ ಟ್ರೇಡರ್ಸ್‌ರವರ 216 ಹತ್ತಿ ಬೀಜ ಪ್ಯಾಕೆಟಗಳಿಗೆ ಮೇ॥ ಸೌದಾಗರ ಟ್ರೇಡರ್ಸ್ ಸೊನ್ನ ರವರ 158 ಹತ್ತಿ ಬೀಜದ ಪ್ಯಾಕೇಟಗಳಿಗೆ ಹಾಗೂ ಮೇ॥ ರೇವಣಸಿದ್ದೇಶ್ವರ ಆಗ್ರೋ ಕೇಂದ್ರ ಸೊನ್ನ ರವರ 5161 ಹತ್ತಿ ಬೀಜ ಪ್ಯಾಕೆಟಗಳು ಮತ್ತು ಯಡ್ರಾಮಿಯ ಮೇ॥ ಭಾಗ್ಯವಂತಿ ಆಗ್ರೋ ಎಜೆನ್ಸಿ ಯಡ್ರಾಮಿ ರವರ 2466 ಹತ್ತಿ ಬೀಜ ಪ್ಯಾಕೆಟಗಳು ಮತ್ತು ಮೇ॥ ಅಪ್ಪಾಜಿ ಆಗ್ರೋ ಎಜೆನ್ಸಿ ಯಡ್ರಾಮಿ ರವರ 227 ಹತ್ತಿ ಬೀಜ ಪ್ಯಾಕೆಟಗಳು ಹೀಗೆ ಒಟ್ಟು 8228 ಹತ್ತಿ ಬೀಜದ ಪ್ಯಾಕೆಟಗಳ ಬೆಲೆ ರೂ. 71.08 ಲಕ್ಷ ಗಳಿಗೆ ಮಾರಾಟ ತಡೆ ಆದೇಶ ನೋಟಿಸ್ ನೀಡಿದ್ದು, ಅವರುಗಳು ನೊಂದಣಿ ಧೃಢೀಕರಣ ಪತ್ರವಿಲ್ಲದೆ ಸದರಿ ಬೀಜಗಳನ್ನು ಮಾರಾಟ ಮಾಡುತಿದ್ದರಿಂದ ಮಾರಾಟ ತಡೆ ಆದೇಶ ನೀಡಲಾಗಿದೆ.

ಈ ಸಂದರ್ಭದಲ್ಲಿ ಅಬ್ದುಲ್ ಮಾಜಿದ್ ಸಹಾಯಕ ಕೃಷಿ ನಿರ್ದೇಶಕರು ಜೇವರ್ಗಿ ಹಾಗೂ ಪವನ್ ಕುಮಾರ್ ಕಟ್ಟಿಮನಿ ತಾಂತ್ರಿಕ ಕೃಷಿ ಅಧಿಕಾರಿ ಜೇವರ್ಗಿ, ದೇವಾನಂದ ಬನ್ನಟ್ಟಿ, ಸಿಬ್ಬಂದಿಗಳು

ಜಾಗೃತಿ ವಹಿಸಿ ಕುಡಿಯುವ ನೀರು ಸರಬರಾಜು ಮಾಡಿ

• ಉದಯವಾಹಿನಿ ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕಿನ ಎಲ್ಲಾ 38 ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿಗಳು ನೀರುಗಂಟಿಗಳಿಂದ ಪ್ರತಿ ಗ್ರಾಮದಲ್ಲಿ ಕುಡಿಯುವ ನೀರಿನ ಬಗ್ಗೆ ಜಾಗೃತಿ ವಹಿಸಿ ಸ್ವಚ್ಛತೆ ಮೂಲಕ ನೀರು ಸರಬರಾಜು ಮಾಡುವಂತೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಹನುಮಂತಪ್ಪ ಸೂಚನೆ ನೀಡಿದರು.

ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಚಿತ್ರದುರ್ಗ ತಾಲ್ಲೂಕು ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿ ಗ್ರೇಡ್-2, ಗ್ರೇಡ್-1, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಕರವಸೂಲಿಗಾರ ಮತ್ತು ನೀರುಗಂಟಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈಗಾಗಲೇ ಮುಂಗಾರು ಪ್ರಾರಂಭವಾಗಿರುವುದರಿಂದ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಟ್ಯಾಂಕ್‌ಗಳನ್ನು ಸ್ವಚ್ಛತೆ ಮಾಡುವುದು ಮತ್ತು ಪೈಪ್‌ಲೈನ್‌ಗಳ ದುರಸ್ಥಿ ಮಾಡುವುದು,

ಉದಯವಾಹಿನಿ ಚಿತ್ರ

ಚರಂಡಿಗಳನ್ನು ಕ್ಲೀನಿಂಗ್ ಮಾಡುವುದು ಸೇರಿದಂತೆ ಪ್ರತಿ ತಿಂಗಳಿಗೊಮ್ಮೆ ಕುಡಿಯುವ ನೀರಿಗೆ ಸಂಬಂಧಿಸಿದ ಎಲ್ಲಾ ಕಾರ್ಯಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳಬೇಕು ಎಂದು ತಾಕೀತು ಮಾಡಿದರು.

ಸಭೆಯಲ್ಲಿ ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರಾದ ಹೆಚ್.ಯರ್ರಿಸ್ವಾಮಿ, ರೂಪಾಕುಮಾರಿ, ಯೋಜನಾ ನಿರ್ದೇಶಕ ರಾಘವೇಂದ್ರ, ವ್ಯವಸ್ಥಾಪಕ ತಿಪ್ಪೇಸ್ವಾಮಿ ಸೇರಿದಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿ ಗ್ರೇಡ್-2, ಗ್ರೇಡ್-1, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಕರವಸೂಲಿಗಾರ ಮತ್ತು ನೀರುಗಂಟಿಗಳು ಇದ್ದರು.

ಗ್ಯಾರಂಟಿ ಯೋಜನೆಗಳನ್ನು ಪುನರ್ ಪರಿಶೀಲಿಸಿ

• ಉದಯವಾಹಿನಿ, ಚಿಂಚೋಳಿ

ಕಾಂಗ್ರೇಸ್ ಪಕ್ಷವು ವಿಧಾನಸಭಾ ಚುನಾವಣೆಯಲ್ಲಿ ಐದು ಗ್ಯಾರಂಟಿ ಯೋಜನೆ ಘೋಷಿಸಿ ಗ್ಯಾರಂಟಿ ಕಾರ್ಡ್ ಪ್ರತಿಯೊಂದು ಮನೆಗಳಿಗೆ ತಲುಪಿಸಿ ಸರ್ಕಾರ ರಚನೆ ಬಳಿಕ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ ಮೇಲೆ ಜನರು ಸದುಪಯೋಗ ಪಡೆದು ಲೋಕಸಭಾ ಚುನಾವಣೆಯಲ್ಲಿ ತಿಂಗಳಿಗೆ 8500 ಘೋಷಿಸಿದರು.

ಕಾಂಗ್ರೇಸ್ ಪಕ್ಷಕ್ಕೆ ರಾಷ್ಟ್ರದಲ್ಲಿ ರಾಜ್ಯದಲ್ಲಿ ಬಹುಮತ ಬರದೆ ವಿಫಲವಾಗಿದ್ದು, ರಾಜ್ಯ ಸರ್ಕಾರವು ನಿರುದ್ಯೋಗ ಸಮಸ್ಯೆ ಪರಿಹರಿಸಲು ಉದ್ಯೋಗ ಸೃಷ್ಟಿ ಮಾಡುವುದು ಚಿಂತನೆ ಮಾಡಬೇಕು ಎಂದು ಸಮಾಜ ಸೇವಕ ರಮೇಶ ಯಾಕಾಪೂರ ಒತ್ತಾಯಿಸಿದರು.

ಮುಖ್ಯಮಂತ್ರಿಗಳಿಗೆ ಪತ್ರ ಬರೆದ ಅವರು, ಕಾಂಗ್ರೇಸ್ ನೀಡಿದ ಗ್ಯಾರಂಟಿ ಯೋಜನೆಗಳು ಬಿಪಿಎಲ್ ಕಾರ್ಡ್ ಹೊಂದಿದವರಿಗೆ ನೀಡುವುದು ಸೂಕ್ತವಾಗಿದೆ.

ಶ್ರೀಮಂತರಿಗೆ ಮತ್ತು ಬಡವರಿಗೆ ಎಲ್ಲೋರಿಗೂ ಉಚಿತವಾಗಿ ಗ್ಯಾರಂಟಿ ಯೋಜನೆಗಳು ನೀಡುತ್ತಾ ಹೋದರೆ ಸರ್ಕಾರ ಖಜಾನೆ ಖಾಲಿಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ಇಲ್ಲಾದಿದ್ದರೆ ರಾಜ್ಯದ ಶಾಲಾಕಟ್ಟಡ, ರಸ್ತೆ ನಿರ್ಮಾಣ, ಆಸ್ಪತ್ರೆ ನಿರ್ಮಾಣದಂತಹ ಅಭಿವೃದ್ಧಿ ಕಾರ್ಯಗಳು ಮತ್ತು ಜನರ ಮೂಲಭೂತ ಸೌಕರ್ಯ ಅಭಿವೃದ್ಧಿ ಹೇಗೆ ಸಾಧ್ಯ ಎಂದು ಪ್ರೇಶ್ನೇಸಿ, ಗ್ಯಾರಂಟಿ ಯೋಜನೆಗಳು ಪುನರ್ ಪರಿಶೀಲಿಸಬೇಕು.

ರಾಜ್ಯದಲ್ಲಿ ಆಸ್ಪತ್ರೆ, ಶಾಲಾಕಾಲೇಜುಗಳಲ್ಲಿ, ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳು ಬಾಕಿಯಿದ್ದು ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ ಸರ್ಕಾರ ಮುತು ವರ್ಜಿ ವಹಿಸಿ ಖಾಲಿಯಿರುವ ಹುದ್ದೆಗಳು ಭರ್ತಿ ಮಾಡಬೇಕು, ನಿವೃತ್ತಿ ಹೊಂದಿದವರಿಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಯುವಕರಲ್ಲಿ ಬಹಳಷ್ಟು ಜನರು ನಿರುದ್ಯೋಗ ಸಮಸ್ಯೆ ಕಾಡುತ್ತಿದೆ ಕಾರಣ ಗುತ್ತಿಗೆ ಆಧಾರದ ನೇಮಕಾತಿ ಕೈಬಿಡಬೇಕು ಎಂದು ಪತ್ರದ ಮೂಲಕ ಒತ್ತಾಯಿಸಿದರು.

ಡೆಂಗ್ಯೂ ಜ್ವರ ಎಚ್ಚರಿಕೆ, ಸ್ವಚ್ಛತೆ ಕಾಪಾಡಿ : ತಹಶೀಲ್ದಾರ್ ಎಚ್. ದೇಸಾಯಿ

• ಉದಯವಾಹಿನಿ ಸಿಂಧನೂರು

ಡೆಂಗ್ಯೂ ಜ್ವರ ಬಾರದಂತೆ ಎಚ್ಚರಿಕೆ ಮೂಲಕ ನಮ್ಮ ಮನೆ ಸುತ್ತಮುತ್ತ ಯಲ್ಲಿ ನೀರು ನಿಲ್ಲದಂತೆ ಸ್ವಚ್ಛತೆಯನ್ನು ಕಾಪಾಡಬೇಕು ಎಂದು ತಾಲ್ಲೂಕು ತಹಶೀಲ್ದಾರ್ ಅರುಣ್ ಕುಮಾರ್ ಎಚ್ ದೇಸಾಯಿಯವರ ಹೇಳಿದರು. ತಾಲ್ಲೂಕು ತಹಶೀಲ್ದಾರ್ ಕಛೇರಿಯಲ್ಲಿ ನಡೆದ ತಾಲ್ಲೂಕು ಟಾಸ್ಕ್ ಫೋರ್ಸ್ ಸಭೆ ಕಮಿಟಿಯ ಸಭೆ ನಡೆಸಲಾಯಿತು.

ಈ ಕಮಿಟಿಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಡೆಂಗ್ಯೂ ಜ್ವರ ಬಾರದಂತೆ ನಮ್ಮ ಮನೆಯ ಸುತ್ತ ಮುತ್ತಲಿನ ಖಾಲಿ ಇರುವ ಸ್ಥಳಗಳು ಮತ್ತು ಚರಂಡಿಯಲ್ಲಿ ನೀರು ನಿಲ್ಲದಂತೆ ಸ್ವಚ್ಛತೆಯನ್ನು ನಿರ್ವಹಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಅಧಿಕಾರಿಗಳು ಮಾಡಬೇಕೆಂದರು. ಪ್ರಸ್ತುತ ಮಳೆಗಾಲ ಆರಂಭವಾಗಿದ್ದು ಈ ಸ್ವಚ್ಛವಾದ ನೀರಿನಲ್ಲಿ ಈ ಸೊಳ್ಳೆ ಲಾರ್ವಾ ಉತ್ಪತ್ತಿ ಮಾಡುತ್ತದೆ. ಈಡಿಸ್ ಸೊಳ್ಳೆ ಗಳು ಮೂಲಕ ಡೆಂಗ್ಯೂ ಮಹಾಮಾರಿ ಅತ್ಯಂತ ಅಪಾಯ ಕಾರಿಯಾಗಿದ್ದ ಈ ರೋಗಕ್ಕೆ ತುತ್ತಾಗುವ

ಉದಯವಾಹಿನಿ ಚಿತ್ರ

ಸಾಧ್ಯತೆ ಇರುತ್ತದೆ ಅದಕ್ಕೆ ನಿರ್ದಿಷ್ಟ ಚಿಕಿತ್ಸೆ ಇರುವುದಿಲ್ಲ. ಅಂತ ರೋಗ ಲಕ್ಷಣಗಳು ಕಂಡು ಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಮತ್ತು ನಗರದ ಸಾರ್ವಜನಿಕ ಆಸ್ಪತ್ರೆಗೆ ಹೋಗಿ ರಕ್ತ ಪರೀಕ್ಷೆ ಮಾಡಿಕೊಳ್ಳುವುದರ ಮೂಲಕ ಅಪಾಯವನ್ನು ತಪ್ಪಿಸಿಕೊಳ್ಳ ಬಹುದು ಎಂದರು. ಡೆಂಗ್ಯೂ ಮಹಾಮಾರಿ ಲಕ್ಷಣಗಳು ಕಂಡು ಬರುವುದು ನಿಂತು ನೀರಿನಿಂದಾಗಿ ಪ್ರತಿಯೊಬ್ಬರೂ ನಿರ್ಲಕ್ಷ್ಯ ಧೋರಣೆ ತೊರೆದೆ ಎಚ್ಚರದಿಂದ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಸ್ವಚ್ಛವಾಗಿ ಇರಬೇಕೆಂದರು ತಿಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸರ್ಕಾರಿ ಆಸ್ಪತ್ರೆಯ ಮೇಲ್ವಿಚಾರಕ ಎಸ್ ಎಫ್ ಹಣಗಿ ಡೆಂಗ್ಯೂ ಜ್ವರ ರೋಗಗಳು ಲಕ್ಷಣಗಳು ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ನಗರ ಸಭೆ ಪೌರಾಯುಕ್ತರು ಮಂಜುನಾಥ್ ಗುಂಡೂರು. ತಾಲ್ಲೂಕು ಆರೋಗ್ಯಾಧಿಕಾರಿ ತಾಲ್ಲೂಕು ಪಂಚಾಯತ್ ಎ.ಡಿ.ಅಮರ್ ಗುಂಡಪ್ಪ, ಸಿಡಿಪಿಓ ಲಿಂಗನಗೌಡ ಅಶೋಕ್ ಸಿಡಿಪಿಒ. ಆರೋಗ್ಯ ಕ್ಷೇತ್ರ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ವಲಯ ಅರಣ್ಯಾಧಿಕಾರಿ ರುದ್ರಮುನಿ. ಇತರರು ಇದ್ದರು.

> ನಗರ ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಆರೋಗ್ಯ ಇಲಾಖೆ ಸಿಬ್ಬಂದಿಗಳು ಜೊತೆಗೆ ಪ್ರತಿ ಹಳ್ಳಿಗಳಲ್ಲಿ ಮನೆ ಮನೆಗೆ ತೆರಳಿ ಮನೆ ಸುತ್ತಮುತ್ತ ನೀರು ನಿಲ್ಲದಂತೆ ಸ್ವಚ್ಛತೆಯನ್ನು ಕಾಪಾಡಿ ಕೊಂಡಾಗ ಯಾವುದೇ ರೋಗ ಮತ್ತು ಡೆಂಗ್ಯೂ ಮಹಾಮಾರಿ ಲಕ್ಷಣಗಳು ಬರುವುದಿಲ್ಲ. ಎಂಬ ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ಪ್ರಚಾರಾಂದೋಲನ ಆರೋಗ್ಯ ಇಲಾಖೆ ಅಧಿಕಾರಿಗಳು ಮಾಡಬೇಕು -ಎಚ್ ದೇಸಾಯಿ

ತ್ಯಾಗ ಬಲಿದಾನದ ಸಂಕೇತವೇ ಬಕ್ರೀದ್ ಹಬ್ಬ, ಶಾಂತಿ ಶೌಹಾರ್ದ

ದಿನ ಭವಿಷ್ಯ

ರಾಹುಕಾಲ	ಸಾಯಂಕಾಲ	04:30 ರಿಂದ 06:00
ಗುಳಿಕ ಕಾಲ	ಮಧ್ಯಾಹ್ನ	03:00 ರಿಂದ 04:30
ಯಮಗಂಡ ಕಾಲ	ಮಧ್ಯಾಹ್ನ	12:00 ರಿಂದ 01:30

ಮೇಷ – ಕೆಲಸದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ಸ್ವಲ್ಪ ಉದ್ವೇಗ ತರಬಹುದು. ಯಾವುದೇ ದೀರ್ಘಕಾಲೀನ ಹೂಡಿಕೆಗಳನ್ನು ತಪ್ಪಿಸಿ ಮತ್ತು ನಿಮ್ಮ ಸ್ನೇಹಿತರ ಜೊತೆ ಕೆಲವು ಆಹ್ಲಾದಕರ ಕ್ಷಣಗಳನ್ನು ಕಳೆಯಲು ಪ್ರಯತ್ನಿಸಿ.

ವೃಷಭ – ಇಂದು ನೀವು ಪ್ರಮುಖ ನಿರ್ಧಾರ ಕೈಗೊಳ್ಳಬೇಕು. ಇದು ನಿಮ್ಮನ್ನು ಒತ್ತಡ ಹಾಗೂ ಉದ್ವೇಗಕ್ಕೆ ಒಳಪಡಿಸುತ್ತದೆ. ವೆಚ್ಚದ ಏರಿದರೂ ಆದಾಯದಲ್ಲಿನ ಹೆಚ್ಚಳ ನಿಮ್ಮ ಖರ್ಚುಗಳನ್ನು ನೋಡಿಕೊಳ್ಳುತ್ತದೆ.

ಮಿಥುನ – ಮನರಂಜನೆ ಮತ್ತು ಮೋಜಿನ ಒಂದು ದಿನ. ನಿಮ್ಮ ತಾಯಿಯ ದುಂದುಗಾರಿಕೆಯನ್ನು ನೋಡಿ ನೀವು ಚಿಂತಿತರಾಗಬಹುದು ಮತ್ತು ಆದ್ದರಿಂದ ನೀವು ಅವರ ಕೋಪದ ಬೇಟೆಯಾಗಬಹುದು.

ಕರ್ಕಾಟಕ – ಕುತ್ತಿಗೆ / ಬೆನ್ನಿನಲ್ಲಿ ನಿರಂತರ ನೋವಿನಿಂದ ಬಳಲುವ ಸಾಧ್ಯತೆಯಿದೆ. ವಿಶೇಷವಾಗಿ ಇದರ ಜೊತೆ ಸಾಮಾನ್ಯ ದೌರ್ಬಲ್ಯ ವಿದ್ದಾಗ ಇದನ್ನು ನಿರ್ಲಕ್ಷಿಸದಿರಿ. ಇಂದು ವಿಶ್ರಾಂತಿ ಬಹಳ ಪ್ರಮುಖವಾಗಿರುತ್ತದೆ.

ಸಿಂಹ – ಧ್ಯಾನ ಮತ್ತು ಆತ್ಮ ಸಾಕ್ಷಾತ್ಕಾರ ಪ್ರಯೋಜನಕಾರಿಯಾಗಬಹುದು. ವಿವಾಹಿತರು ಇಂದು ತಮ್ಮ ಮಕ್ಕಳ ಅಧ್ಯಯನದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

ಕನ್ಯಾ – ನೀವಿದರಿಂದ ಏನೂ ಗಳಿಸುವುದಿಲ್ಲ. ನಿಮ್ಮ ಅಭ್ಯಾಸವನ್ನು ಬದಲಾಯಿಸಿಕೊಳ್ಳುವುದೊಳ್ಳೆಯದು. ನೀವು ಇನ್ನು ಮುಂದೆ ನಿಮ್ಮ ಕಾಮಪ್ರಚೋದಕ ಕಲ್ಪನೆಗಳ ಬಗ್ಗೆ ಕನಸು ಕಾಣಬೇಕಾಗಿಲ್ಲ, ಅವು ಇಂದು ನಿಜವಾಗಬಹುದು.

ತುಲಾ – ನಿಮ್ಮ ಸಂಗಾತಿಯ ಆಹ್ಲಾದಕರ ಮನಸ್ಥಿತಿ ನಿಮ್ಮ ದಿನವನ್ನು ಉಜ್ವಲವಾಗಿಸಬಹುದು. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ.

ವೃಶ್ಚಿಕ – ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ.

ಧನಸ್ಸು – ನಿಮ್ಮ ಮನೆಯ ವಾತಾವರಣವನ್ನು ಬದಲಾಯಿಸುವ ಮೊದಲು ಅದಕ್ಕೆ ಎಲ್ಲರ ಅನುಮೋದನೆಯಿದೆಯೆಂದು ಖಾತ್ರಿಪಡಿಸಿಕೊಳ್ಳಿ. ಮನ್ಮಥನು ನಿಮ್ಮ ಜೀವನದಲ್ಲಿ ಪ್ರೀತಿಯ ಮಳೆ ಸುರಿಸುತ್ತ ನಿಮ್ಮೆಡೆಗೆ ನುಗ್ಗುತ್ತಿದ್ದಾನೆ.

ಮಕರ – ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು.

ಕುಂಭ – ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ.

ಮೀನ – ನಿಮ್ಮ ದಾರಿಯಲ್ಲಿ ಯಾರೇ ಬಂದರೂ ಆಕರ್ಷಕರೂ ಆಗಿರಿ – ನಿಮ್ಮ ಇಂದ್ರಜಾಲದಂಥ ಆಕರ್ಷಣೆಯ ಹಿಂದಿನ ರಹಸ್ಯ ಕಲವರಿಗೆ ಮಾತ್ರವೇ ತಿಳಿದಿದೆ. ನಿಮ್ಮ ಅರ್ಧಾಂಗಿಯ ಜೊತೆ ಪ್ರಣಯಕ್ಕೆ ಉತ್ತಮವಾದ ದಿನ.

ರಾಜ್ಯ ಸರ್ಕಾರದ 'ಶಕ್ತಿ' ಯೋಜನೆಗೆ ವರ್ಷ: 86 ಕೋಟಿ ವಹಿವಾಟು

● ಚಿತ್ರದುರ್ಗ ಉಪ ವಿಭಾಗದ ಅಡಿ ಬರುವ 4 ಘಟಕಗಳ ವ್ಯಾಪ್ತಿಯಲ್ಲಿ 2.21 ಕೋಟಿ ಮಹಿಳೆಯರು ಉಚಿತ ಪ್ರಯಾಣ

• ಉದಯವಾಹಿನಿ ಚಿತ್ರದುರ್ಗ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 'ಶಕ್ತಿ' ಯೋಜನೆ ಜಾರಿಯಾಗಿ ವರ್ಷ ಕಳೆದಿದ್ದು ಜಿಲ್ಲೆಯಾದ್ಯಂತ ಮಹಿಳೆಯರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಾರಿಗೆ ಸಂಸ್ಥೆ ಚಿತ್ರದುರ್ಗ ಉಪ ವಿಭಾಗದ ಅಡಿ ಬರುವ 4 ಘಟಕಗಳ ವ್ಯಾಪ್ತಿಯಲ್ಲಿ 2.21 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಿದ್ದು 85.71 ಕೋಟಿ ಮೌಲ್ಯದ ಟಿಕೆಟ್ ಪಡೆದಿದ್ದಾರೆ.

ಚಿತ್ರದುರ್ಗ ಉಪ ವಿಭಾಗಕ್ಕೆ ತುಮಕೂರು ಜಿಲ್ಲೆಯ ಪಾವಗಡ ಘಟಕವೂ ಸೇರಿದ್ದು, 320 ಮಾರ್ಗಗಳಲ್ಲಿ ಒಟ್ಟು 353 ಬಸ್‌ಗಳು ಓಡಾಡುತ್ತವೆ. ಶಕ್ತಿ ಯೋಜನೆ ಜಾರಿಗೊಂಡ ನಂತರ ಮಹಿಳಾ ಪ್ರಯಾಣಿಕರ ಸಂಖ್ಯೆಯಲ್ಲಿ ನಿರಂತರ ಏರಿಕೆಯಾಗಿದೆ. ಜೊತೆಗೆ ಮಹಿಳೆಯರ ಜೊತೆ ಪುರುಷರ ಓಡಾಟವೂ ಹೆಚ್ಚಾಗಿದ್ದು ವಿಭಾಗಕ್ಕೆ ಬರುವ ಲಾಭದ ಪ್ರಮಾಣ ದ್ವಿಗುಣಗೊಂಡಿದೆ. ಆರಂಭದಲ್ಲಿ ಇದ್ದ ಜನಜಂಗುಳಿ, ಗೊಂದಲ, ಗದ್ದಲ ಈಗ ಇಲ್ಲ. ಉತ್ಸಾಹದಿಂದ ಮಹಿಳೆಯರು ಪ್ರಯಾಣ ಮಾಡುತ್ತಿದ್ದು ಸಾರಿಗೆ ಸಂಸ್ಥೆಗೆ ಶಕ್ತಿ ನೀಡಿದಂತಾಗಿದೆ. 2023ರ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೇಸ್ ಪಕ್ಷ ಘೋಷಣೆ ಮಾಡಿದ್ದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಶಕ್ತಿ ಯೋಜನೆಯೂ ಒಂದಾಗಿತ್ತು. ಕಾಂಗ್ರೇಸ್ ಅಧಿಕಾರಕ್ಕೆ ಬಂದ ಮೊದಲ ದಿನವೇ ಮುಖ್ಯಮಂತ್ರಿ ಶಕ್ತಿ ಯೋಜನೆ ಜಾರಿಗೆ ಅಧಿಸೂಚನೆ ಹೊರಡಿಸಿದ್ದರು. ಸರ್ಕಾರ ಅಧಿಕಾರಕ್ಕೆ ಬಂದು ವರ್ಷ ಪೂರ್ಣಗೊಳಿಸಿದ್ದು ಶಕ್ತಿ ಯೋಜನೆಗೂ ವರ್ಷ ತುಂಬಿದೆ. ಅಂತರರಾಜ್ಯ ಬಸ್‌ಗಳನ್ನು ಹೊರತುಪಡಿಸಿ ರಾಜ್ಯದೊಳಗೆ ಓಡಾಡುವ ಸಾಮಾನ್ಯ ಬಸ್‌ಗಳು, ವೇಗದೂತ, ಸ್ಥಳೀಯ ಬಸ್‌ಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡುತ್ತಿದ್ದಾರೆ. ತಮ್ಮ ಗುರುತಿನ ಚೀಟಿ ತೋರಿಸಿ ಉಚಿತ ಪ್ರಯಾಣದ ಟಿಕೆಟ್ ಪಡೆಯುತ್ತಿದ್ದಾರೆ.

> ಪ್ರಯಾಣಿಕರಿಗೆ ತೊದರೆಯಾಗದಂತೆ ಎಲ್ಲಾ ಮಾರ್ಗಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಏನೇ ತೊಂದರೆ ಉಂಟಾದರೂ ಅದನ್ನು ತಕ್ಷಣ ಪರಿಹರಿಸಲಾಗುತ್ತಿದೆ ಗೀತಾ ಕಟ್ಟಡ ಕಾರ್ಮಿಕರು ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಶಕ್ತಿ ಬಂದಂತಾಗಿದೆ
> –ಸಿ.ಇ. ಶ್ರೀನಿವಾಸಮೂರ್ತಿ, ವಿಭಾಗೀಯ ವ್ಯವಸ್ಥಾಪಕ

ಉದಯವಾಹಿನಿ ಚಿತ್ರ

ಲಾಭದ ಪ್ರಮಾಣ ದ್ವಿಗುಣ

ಶಕ್ತಿ ಯೋಜನೆ ಜಾರಿ ನಂತರ ಪ್ರತಿದಿನ 60,000 ಮಹಿಳೆಯರು ಬಸ್‌ಗಳಲ್ಲಿ ಓಡಾಡುತ್ತಿದ್ದು, 25 ಲಕ್ಷ ಆದಾಯ ಸೃಷ್ಟಿಯಾಗುತ್ತಿದೆ. ಚಿತ್ರದುರ್ಗ ಘಟಕದಲ್ಲಿ ಅತೀ ಹೆಚ್ಚು ಮಹಿಳೆಯರು ಓಡಾಡಿದ್ದು, ಇಲ್ಲಿಯೇ ಹೆಚ್ಚು ಆದಾಯ ಬಂದಿದೆ. ವರ್ಷದಲ್ಲಿ 1.03 ಕೋಟಿ ಮಹಿಳೆಯರು ಓಡಾಡಿದ್ದು 42.42 ಕೋಟಿಯಷ್ಟು ಆದಾಯ ಸೃಷ್ಟಿಯಾಗಿದೆ. ಪಾವಗಡ ಘಟಕದಲ್ಲಿ ಕಡಿಮೆ ಪ್ರಯಾಣಿಕರು ಓಡಾಡಿದ್ದು ಕಡಿಮೆ ಮೊತ್ತದ ಟಿಕೆಟ್ ನೀಡಲಾಗಿದೆ. ಇಲ್ಲಿ 24.25 ಲಕ್ಷ ಮಹಿಳೆಯರು ಪ್ರಯಾಣ ಮಾಡಿದ್ದು 9.20 ಕೋಟಿ ಮೌಲ್ಯದ ಟಿಕೆಟ್ ವಿತರಣೆ ಮಾಡಲಾಗಿದೆ.

ಸಿಬ್ಬಂದಿ ಮೊಗದಲ್ಲೂ ಸಂತಸ: ಶಕ್ತಿ ಯೋಜನೆ ಜಾರಿಯಾದ ನಂತರ ಸಾರಿಗೆ ಸಂಸ್ಥೆ ಸಿಬ್ಬಂದಿಯಲ್ಲೂ ಸಂತಸ ಭಾವ ಮೂಡಿದೆ. ಮೊದಲು ಬಸ್‌ಗೆ ನಿಗದಿತ ಸಂಖ್ಯೆ ಪ್ರಯಾಣಿಕರು ಬರಬೇಕು, ಇಂತಿಷ್ಟು ಟಿಕೆಟ್ ವಿತರಣೆ ಮಾಡಬೇಕು ಎಂದೆಲ್ಲಾ ಗುರಿ ನಿಗದಿಯಾಗಿತ್ತು. ಆದರೆ ಈಗ ಪ್ರಯಾಣಿಕರ ಸಂಖ್ಯೆ ಹಾಗೂ ಟಿಕೆಟ್ ಗುರಿ ತಲುಪುವ ಬಗ್ಗೆ ನಿರ್ವಾಹಕರಿಗೆ ಯಾವುದೇ ತಲೆ ಬಿಸಿ ಇಲ್ಲ. ತುಂಬಿದ ಬಸ್‌ಗಳಲ್ಲಿ ಪ್ರಯಾಣಿಕರು ಓಡಾಡುತ್ತಿದ್ದು ಟಿಕೆಟ್ ವಿತರಣೆ ನಿರಾತಂಕವಾಗಿ ನಡೆಯುತ್ತಿದೆ, ನಿರ್ವಾಹಕರಲ್ಲಿ ಸಂತಸದ ಭಾವ ಕಂಡುಬರುತ್ತಿದೆ.

ಹಣವಿಲ್ಲದೇ ಮನೆಯಲ್ಲೇ ಇದ್ದವರು ಈಗ ಬಸ್‌ಗಳಲ್ಲಿ ಓಡಾಡುತ್ತಿದ್ದಾರೆ. ದೇವರ ದರ್ಶನ ಪಡೆಯುತ್ತಿದ್ದಾರೆ, ಶಕ್ತಿ ಯೋಜನೆ ಜಾರಿಯಾದ ನಂತರ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಪ್ರಯಾಣಿಸಲು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು ಸರಿಯಾದ ಸಮಯಕ್ಕೆ ಶಾಲಾ ಕಾಲೇಜುಗಳಿಗೆ ತಲುಪಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ವಿದ್ಯಾರ್ಥಿಗಳಿಗಾಗಿ ಹೆಚ್ಚುವರಿ ಬಸ್ ಓಡಿಸಬೇಕು ಎಂದು ವಿದ್ಯಾರ್ಥಿಗಳು ಪಾಲಕರು ಒತ್ತಾಯಿಸಿದ್ದಾರೆ.

'ಬಸ್‌ಗಳಲ್ಲಿ ಮಹಿಳೆಯರೇ ತುಂಬಿರುವ ಕಾರಣ ವಿದ್ಯಾರ್ಥಿಗಳು ಬಸ್ ಹತ್ತಲು ಸಾಧ್ಯವಾಗುತ್ತಿಲ್ಲ. ಈಗಾಗಲೇ ಈ ಬಗ್ಗೆ ಹಲವೆಡೆ ಪ್ರತಿಭಟನೆಗಳು ನಡೆದಿವೆ. ಅಧಿಕಾರಿಗಳು ಬೆಳಿಗ್ಗೆ ಹಾಗೂ ಸಂಜೆ ವಿದ್ಯಾರ್ಥಿಗಳಿಗಾಗಿ ಹೆಚ್ಚು ಬಸ್ ಬಿಡಬೇಕು' ಎಂದು ಪೋಷಕರೊಬ್ಬರು ಆಗ್ರಹಿಸಿದರು. ವಿದ್ಯಾರ್ಥಿಗಳಿಗಾಗಿ ಹೆಚ್ಚುವರಿ ಬಸ್ ಓಡಿಸಿ.

ಖಾಲಿ ಓಡಿಸಬೇಕಾದ ಅನಿವಾರ್ಯತೆ ಇಲ್ಲ

ಈಗ ನಮಗೆ ಬಸ್‌ಗಳನ್ನು ಖಾಲಿ ಓಡಿಸಬೇಕಾದ ಅನಿವಾರ್ಯತೆ ಇಲ್ಲ. ನಿಲ್ದಾಣಕ್ಕೆ ಬಸ್ ಹಾಕಿದ ಕೆಲವೇ ನಿಮಿಷಗಳಲ್ಲಿ ಗಾಡಿ ತುಂಬಿ ಹೋಗುತ್ತಿದೆ. ಪ್ರಯಾಣಿಕರಿಗೆ ಕಾಯುವ, ನಿಲ್ದಾಣಗಳಲ್ಲಿ ಕೂಗಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಅವಶ್ಯಕತೆ ಒಂದು ವರ್ಷದಿಂದ ಬಂದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರ ಒಂದಲ್ಲಾ ಒಂದು ದಿನ ಟಿಕೆಟ್ ಹಣ ತುಂಬಿಕೊಡಲೇಬೇಕು. ಹೀಗಾಗಿ ನಮ್ಮ ನಿಗಮ ಈಗ ಲಾಭದಲ್ಲಿದೆ, ನಮಗೂ ಇದರಿಂದ ಅನುಕೂಲವಾಗಲಿದೆ' ಎಂದು ನಿರ್ವಾಹಕರೊಬ್ಬರು ಸಂತಸ ವ್ಯಕ್ತಪಡಿಸಿದರು.

ಪರಿಸರ ಸಂರಕ್ಷಣೆ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು: ಅಪರ ಜಿಲ್ಲಾಧಿಕಾರಿ

• ಉದಯವಾಹಿನಿ ಚಿತ್ರದುರ್ಗ

ವಿದ್ಯಾರ್ಥಿಗಳು ಅಧ್ಯಯನದ ಜತೆಗೆ ಪರಿಸರ ಕಾಳಜಿ ವಹಿಸಬೇಕು. ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬ ನಾಗರೀಕರೂ ಕೈಜೋಡಿಸಬೇಕು. ಅಂದಾಗ ಮಾತ್ರ ಭವಿಷ್ಯದಲ್ಲಿ ಪರಿಸರ ಸಮತೋಲನೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಹೇಳಿದರು. ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಸಮೀಪದ ಕ್ರೀಡಾಭವನದಲ್ಲಿ ಶನಿವಾರ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಚಿತ್ರಕಲೆ ಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಚಿತ್ರಕಲೆ ಸ್ಪರ್ಧೆ: 8ನೇ ತರಗತಿಯಲ್ಲಿ ಡಾನ್ ಬಾಸ್ಕೋ ಶಾಲೆಯ ರಿದಾ ಷರೀಪ್ (ಪ್ರಥಮ), ವಿದ್ಯಾ ವಿಕಾಸ ಶಾಲೆಯ ಹರ್ಷಿತ್ ಎನ್ ಬೇದ್ರೆ (ದ್ವಿತೀಯ), ಎಸ್‌ಜೆಎಂ ಸಿಬಿಎಸ್‌ಇ ಶಾಲೆಯ ಸಿ.ಅನ್ವಿತ (ತೃತೀಯ) ವಾಸವಿ ವಿದ್ಯಾ ಸಂಸ್ಥೆಯ ಎಸ್.ವಿನೀತ್ ಚಂದ್ರ (ನಾಲ್ಕನೇ) ಬಹುಮಾನ ಪಡೆದರು. 9ನೇ ತರಗತಿಯಲ್ಲಿ ವಿದ್ಯಾ ವಿಕಾಸ ವಿದ್ಯಾ ಸಂಸ್ಥೆಯ ಎಸ್.ಕೆ.ಸಂಪ್ರತಾ (ಪ್ರಥಮ), ಕೆ.ಕೆ.ನ್ಯಾಷನಲ್ ಶಾಲೆಯ ಎ.ಪವನ್ (ದ್ವಿತೀಯ) ಅನುಪಮ ಇಂಟರ್ ನ್ಯಾಷನಲ್ ಶಾಲೆಯ ಎಂ.ದೇವರಾಜ್ (ತೃತೀಯ) ಎಸ್‌ಜೆಎಂ ಆಂಗ್ಲ ಮಾಧ್ಯಮ ಶಾಲೆಯ ಟಿ.ತೃಪ್ತಿ (ನಾಲ್ಕನೇ) ಬಹುಮಾನ ಪಡೆದರು. 10ನೇ ತರಗತಿಯಲ್ಲಿ ಎಸ್‌ಜೆಎಂ ಸಿಬಿಎಸ್‌ಇ ಶಾಲೆಯ ಸಿ.ಜೀವಿತಾ (ಪ್ರಥಮ), ಸಿ.ಭಾರತಿ (ದ್ವಿತೀಯ), ವಿದ್ಯಾ ವಿಕಾಸ ವಿದ್ಯಾ ಸಂಸ್ಥೆಯ ರಾಮ್ ಚರಣ್ (ತೃತೀಯ) ಜ್ಞಾನ ಭಾರತಿ ಶಾಲೆಯ ಎಂ ಶೋಭಾ (ನಾಲ್ಕನೇ) ಬಹುಮಾನ ಪಡೆದರು.

ಪ್ರಬಂಧ ಸ್ಪರ್ಧೆ: 8ನೇ ತರಗತಿಯಲ್ಲಿ ಎಸ್‌ಜೆಎಂ ಆಂಗ್ಲ ಮಾಧ್ಯಮ ಶಾಲೆಯ ಟಿ.ಮೌಲ್ಯಶ್ರೀ (ಪ್ರಥಮ), ಶ್ರೀ ವಾಸವಿ ಕನ್ನಡ ಮಾಧ್ಯಮ ಶಾಲೆಯ ಆರ್. ಬೃಂದಾ (ದ್ವಿತೀಯ), ಕೆ.ಕೆ.ನ್ಯಾಷನಲ್ ಶಾಲೆಯ ಎಂ.ಶುಭಶ್ರೀ (ತೃತೀಯ) ವಿದ್ಯಾ ವಿಕಾಸ ವಿದ್ಯಾ ಸಂಸ್ಥೆಯ ಬಿ.ವಿ.ಬಿಂದು (ನಾಲ್ಕನೇ) ಬಹುಮಾನ ಪಡೆದರು.

9ನೇ ತರಗತಿಯಲ್ಲಿ ಸಂಪಿಗೆ ಸಿದ್ದೇಶ್ವರ ಶಾಲೆಯ ಯಶಸ್ವಿನಿ (ಪ್ರಥಮ) ಕೆ.ಕೆ.ನ್ಯಾಷನಲ್ ಶಾಲೆಯ ಮದಿಹ ಫಾತಿಮಾ (ದ್ವಿತಿಯ) ಎಸ್‌ಜೆಎಂ ಸಿಬಿಎಸ್‌ಇ ಶಾಲೆಯ ಸಿ.ಎಸ್.ಹಿತಾಶ್ರೀ (ತೃತೀಯ) ಅನುಮಪ ಇಂಟರ್ ನ್ಯಾಷನಲ್ ಶಾಲೆಯ ಸಿ.ರುಕ್ಮಿಣಿ (ನಾಲ್ಕನೇ) ಬಹುಮಾನ ಪಡೆದರು. 10ನೇ ತರಗತಿಯಲ್ಲಿ ವಿದ್ಯಾ ವಿಕಾಸ ವಿದ್ಯಾ ಸಂಸ್ಥೆಯ ವಿ.ಜಾನವಿ (ಪ್ರಥಮ) ಎಸ್‌ಜೆಎಂ ಸಿಬಿಎಸ್‌ಇ ಶಾಲೆಯ ಎ.ಎಂ.ಸುಖಿತಾ (ದ್ವಿತೀಯ) ಕೆ.ಕೆ.ನ್ಯಾಷನಲ್ ಶಾಲೆಯ ಎ.ಉಮೇಸ್ನಾ (ತೃತೀಯ) ಬೃಹನ್ಮಠ ಶಾಲೆಯ ಪಿ.ಸಿ.ಬಿಂದು (ನಾಲ್ಕನೇ) ಬಹುಮಾನ ಪಡೆದರು.

ಉದಯವಾಹಿನಿ ಚಿತ್ರ

> ಪರಿಸರ ಸಂರಕ್ಷಣೆ ಕಾರ್ಯಕ್ಕೆ ವಿದ್ಯಾರ್ಥಿಗಳು ಜಾಗೃತರಾಗುವುದರ ಜತೆಗೆ ತಮ್ಮ ಕುಟುಂಬ ಹಾಗೂ ನೆರೆಹೊರೆಯವನ್ನೂ ಜಾಗೃತ ಮಾಡಬೇಕು. ಕೇವಲ ಪಠ್ಯಕ್ಕೆ ಮಾತ್ರ ಸೀಮಿತವಾಗದೇ, ಅಂಕಪಟ್ಟಿ ಹೊರತಾಗಿ ನಮ್ಮ ಜೀವನ ರೂಪಿಸಿಕೊಳ್ಳುವ ಕೌಶಲ್ಯ ಭರಿತ ಶಿಕ್ಷಣ ಪಡೆಯುವಂತಾಗಬೇಕು. ಮನೆಯಿಂದಲೇ ಪರಿಸರ ಜಾಗೃತಿ ಮೂಡಬೇಕು. ನಮ್ಮ ಮನೆ, ನಮ್ಮ ಮನಸ್ಸು ಸ್ವಚ್ಛವಾಗಿದ್ದರೆ ಪರಿಸರವೂ ಸ್ವಚ್ಛವಾಗಿರಲಿದೆ –ಬಿ.ಟಿ.ಕುಮಾರಸ್ವಾಮಿ

ಪೌರವಿಹಾರ ಸಂಸ್ಥೆಯಲ್ಲಿ ಅವ್ಯವಹಾರ ನಡೆದಿಲ್ಲ

• ಉದಯವಾಹಿನಿ ಶಿಕಾರಿಪುರ

ಪೌರವಿಹಾರ ಸಂಸ್ಥೆಯಲ್ಲಿ ತಮ್ಮ ಆಡಳಿತ ಮಂಡಳಿ ಅವಧಿಯಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಪೌರವಿಹಾರ ಸಂಸ್ಥೆ ಮಾಜಿ ಕಾರ್ಯದರ್ಶಿ ಎಚ್.ಎಸ್. ರವೀಂದ್ರ ಸ್ಪಷ್ಟನೆ ನೀಡಿದರು. ಪೌರವಿಹಾರ ಸಂಸ್ಥೆಯು 70 ವರ್ಷಗಳ ಇತಿಹಾಸವಿದ್ದು, ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆದಿದೆ. ರಾಜಕೀಯ ಉದ್ದೇಶದಿಂದ ಈ ಸಂಸ್ಥೆಯಲ್ಲಿ ಅವ್ಯವಹಾರ ನಡೆದಿದೆ ಎಂದು ಸುದ್ದಿಗೋಷ್ಠಿ ಮೂಲಕ ಮಾಜಿ ಅಧ್ಯಕ್ಷರು ಹಾಗೂ ಹಿರಿಯ ಸದಸ್ಯರು ಆರೋಪ ಮಾಡಿರುವುದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ' ಎಂದು ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಳೆದ ಏ. 18ರಂದು ಸರ್ವ ಸದಸ್ಯರ ವಾರ್ಷಿಕ ಸಭೆ ಕರೆಯಲಾಗಿತ್ತು. 216 ಸದಸ್ಯರಿಗೆ ಆಡಿಟ್ ವರದಿ ಹೊಂದಿದ ಆಹ್ವಾನ ಪತ್ರಿಕೆ ತಲುಪಿಸಿ ಸಹಿ ಪಡೆಯಲಾಗಿತ್ತು. ಲೋಕಸಭೆ ಚುನಾವಣೆ ನೀತಿ ಸಂಹಿತೆ ಇದ್ದ ಕಾರಣ ತಹಶೀಲ್ದಾರ್ ಅವರು ಸರ್ವ ಸದಸ್ಯರ ಸಭೆ ಮುಂದೂಡುವಂತೆ ಆದೇಶಿಸಿದ್ದರಿಂದ ಸರ್ವ ಸದಸ್ಯರ ಸಭೆ ಮುಂದೂಡಲಾಗಿತ್ತು ಎಂದರು.

ನಾನು ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದ್ದೇನೆ. ನನ್ನ ಹೆಸರನ್ನು ಹಾಳು ಮಾಡಲು ಹಾಗೂ ತೇಜೋವಧೆ ಮಾಡಲು ನನ್ನ ಎದುರಾಳಿಯ ಚಿಕ್ಕಪ್ಪ ಹಾಗೂ ಸಂಸ್ಥೆಯ ಹಿರಿಯ ಸದಸ್ಯರೊಬ್ಬರು ಮುಂದಾಗಿದ್ದಾರೆ ಎಂದು ಆರೋಪಿಸಿದರು. ಪೌರವಿಹಾರ ಸಂಸ್ಥೆ ಮಾಜಿ ಅಧ್ಯಕ್ಷ ಏಕೇಶ್ವರಪ್ಪ, ಉಪಾಧ್ಯಕ್ಷ ಶ್ರೀಧರ ಕರ್ಕಿ, ಮಾಜಿ ಉಪಾಧ್ಯಕ್ಷ ಕರಿಬಸಪ್ಪ, ಮಾಜಿ ನಿರ್ದೇಶಕ ಹರಿಹರ ಸಿದ್ದಲಿಂಗೇಶ್ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರ, ನಿವೃತ್ತ ಶಿಕ್ಷಕರ ಸನ್ಮಾನ ಕಾರ್ಯಕ್ರಮ

• ಉದಯವಾಹಿನಿ ಸಿರುಗುಪ್ಪ

ತಾಲ್ಲೂಕಿನ ಬೂದುಗುಪ್ಪ ಗ್ರಾಮದಲ್ಲಿ ಶ್ರೀ ಬ

ಇಂದಿರಾ ಗಾಂಧಿ ಭಾರತದ ಮಾತೆ: ಸುರೇಶ್ ಗೋಪಿ ಬಣ್ಣನೆ

● ಕೆ. ಕರುಣಾಕರನ್ ಮತ್ತು ಇಕೆ ನಾಯನಾರ್ ತಮ್ಮ ರಾಜಕೀಯ ಗುರುಗಳು ಎಂದು ಹೇಳಿದ ಕೇಂದ್ರ ಸಚಿವ

- ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರನ್ನು ಭಾರತ ಮಾತೆ ಎಂದು ಬಣ್ಣಿಸಿದ ಸುರೇಶ್ ಗೋಪಿ
- ಕೆ ಕರುಣಾಕರನ್ ಮತ್ತು ಇಕೆ ನಾಯನಾರ್ ತಮ್ಮ ರಾಜಕೀಯ ಗುರುಗಳು ಎಂದು ಹೇಳಿದ ಕೇಂದ್ರ ಸಚಿವ
- ಕೇರಳದಲ್ಲಿ ಕಾಂಗ್ರೇಸ್ ಪಕ್ಷದ ಪಿತಾಮಹ ಕರುಣಾಕರನ್ ಎಂದು ರಾಜ್ಯ ಬಿಜೆಪಿ ಮೊದಲ ಸಂಸದನ ಹೇಳಿಕೆ

ತ್ರಿಶ್ಶೂರ್: ಕೇರಳದಿಂದ ಮೊಟ್ಟಮೊದಲ ಬಾರಿಗೆ ಲೋಕಸಭೆಗೆ ಆಯ್ಕೆಯಾದ ಬಿಜೆಪಿ ಅಭ್ಯರ್ಥಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಮಲಯಾಳಂ ಚಿತ್ರರಂಗದ ನಟ ಸುರೇಶ್ ಗೋಪಿ ಅವರು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರನ್ನು 'ಭಾರತ ಮಾತೆ' ಎಂದು ಬಣ್ಣಿಸಿದ್ದಾರೆ. ಹಾಗೆಯೇ ಕೇರಳದ ಮಾಜಿ ಮುಖ್ಯಮಂತ್ರಿ ಕೆ ಕರುಣಾಕರನ್ ಅವರನ್ನು 'ದಿಟ್ಟ ಆಡಳಿತಗಾರ' ಎಂದೂ ಪ್ರಶಂಸಿಸಿದ್ದಾರೆ.

ಮೊದಲ ಅವಧಿಯಲ್ಲಿಯೇ ಕೇಂದ್ರದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವ ಅವಕಾಶ ಪಡೆದ ಸುರೇಶ್ ಗೋಪಿ ಅವರು, ಬಿಜೆಪಿಯ ಸೈದ್ಧಾಂತಿಕ ವಿರೋಧಿ ಪಕ್ಷಗಳ ನಾಯಕರನ್ನು ಹೊಗಳಿರುವುದು ಕುತೂಹಲ ಮೂಡಿಸಿದೆ. ಅಷ್ಟೇ ಅಲ್ಲದೆ ಅವರು, ಮಾಜಿ ಸಿಎಂ ಕರುಣಾಕರನ್ ಹಾಗೂ ಹಿರಿಯ ಮಾರ್ಕ್ಸ್‌ವಾದಿ ಇಕೆ ನಾಯನಾರ್ ಅವರನ್ನು ತಮ್ಮ 'ರಾಜಕೀಯ ಗುರುಗಳು' ಎಂದು ಕರೆದುಕೊಂಡಿದ್ದಾರೆ. ಪುಂಕುನ್ನಮ್‌ನಲ್ಲಿರುವ ಮಾಜಿ ಕಾಂಗ್ರೇಸ್ ನಾಯಕ ಕರುಣಾಕರನ್ ಅವರ 'ಮುರಳಿ ಮಂದಿರಂ' ಸ್ಮಾರಕಕ್ಕೆ ಭೇಟಿ ನೀಡಿದ ಬಳಿಕ ಸುರೇಶ್ ಗೋಪಿ ಸುದ್ದಿಗಾರರ ಜತೆ ಮಾತನಾಡಿದರು. ಆಸಕ್ತಿಕರ ಸಂಗತಿಯೆಂದರೆ, ಸುರೇಶ್ ಗೋಪಿ ಅವರು ಇತ್ತೀಚೆಗೆ ನಡೆದ ಲೋಕಸಭೆ ಚುನಾವಣೆಯಲ್ಲಿ ಕೆ. ಕರುಣಾಕರನ್ ಅವರ ಮಗ ಹಾಗೂ ಕಾಂಗ್ರೇಸ್ ನಾಯಕ ಕೆ. ಮುರಳೀಧರನ್ ಅವರನ್ನು ಸೋಲಿಸಿದ್ದರು. ಮುರಳೀಧರನ್ ಅವರು ಮೂರನೇ ಸ್ಥಾನ ಪಡೆದಿದ್ದರು. ಸಿಪಿಐನ ವಿಎಸ್ ಸುನೀಲ್ ಕುಮಾರ್ ಅವರು ಎರಡನೇ ಸ್ಥಾನ ಪಡೆದಿದ್ದರು. ಕರುಣಾಕರನ್ ಅವರ ಸ್ಮಾರಕಕ್ಕೆ ಭೇಟಿ ನೀಡಿರುವುದಕ್ಕೆ ಯಾವುದೇ ರಾಜಕೀಯ ಅರ್ಥ ಕಲ್ಪಿಸದಂತೆ ಅವರು ಮಾಧ್ಯಮದವರಿಗೆ ಮನವಿ ಮಾಡಿದರು. ತಮ್ಮ ಗುರುವಿಗೆ ವಂದನೆ ಸಲ್ಲಿಸಲು ಇಲ್ಲಿಗೆ ಬಂದಿರುವುದಾಗಿ ತಿಳಿಸಿದರು.



2019ರಲ್ಲಿ ಕೂಡ ಮುರಳಿ ಮಂದಿರಂಗೆ ಭೇಟಿ ನೀಡಲು ಬಯಸಿದ್ದು, ಆದರೆ ಆಗ ಕರುಣಾಕರನ್ ಅವರ ಮಗಳು ಪದ್ಮಜಾ ವೇಣುಗೋಪಾಲ್ ಅವರು ರಾಜಕೀಯ ಕಾರಣಕ್ಕೆ ತಮಗೆ ಅಡ್ಡಿ ಪಡಿಸಿದ್ದರು ಎಂದು ಸುರೇಶ್ ಗೋಪಿ ಹೇಳಿದರು. ಪದ್ಮಜಾ ಅವರು ಲೋಕಸಭೆ ಚುನಾವಣೆಗೂ ಮುನ್ನ ಬಿಜೆಪಿ ಸೇರ್ಪಡೆಯಾಗಿದ್ದರು. ನಂತರ ಅವರು ನಗರದಲ್ಲಿನ ಲೋರ್ಡೆ ಮಾತಾ ಚರ್ಚ್‌ಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ತಮ್ಮ ಮಗಳ ಮದುವೆ ಸಂದರ್ಭದಲ್ಲಿ ಸೇಂಟ್ ಮೇರಿಗೆ ಸುರೇಶ್ ಗೋಪಿ ಅವರ ಕುಟುಂಬವು ಚಿನ್ನದ ಕಿರೀಟವನ್ನು ಉಡುಗೊರೆಯಾಗಿ ನೀಡಿದ್ದು, ರಾಜಕೀಯ ಟೀಕೆಗೆ ಗುರಿಯಾಗಿತ್ತು. ಇದು ಚಿನ್ನದ ಕಿರೀಟವಲ್ಲ, ಬದಲಾಗಿ ತಾಮ್ರದ್ದು ಎಂದು ಎದುರಾಳಿ ಪಕ್ಷಗಳು ಆರೋಪಿಸಿದ್ದವು.

ಇಂದಿರಾ ಗಾಂಧಿ ಭಾರತ ಮಾತೆ

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರನ್ನು ತಾವು 'ಭಾರತ ಮಾತೆ'ಯಂತೆ ಕಂಡಿದ್ದು, ಕರುಣಾಕರನ್ ಅವರನ್ನು ರಾಜ್ಯ ಕಾಂಗ್ರೇಸ್‌ನ ಪಿತಾಮಹ ಎಂದು ವರ್ಣಿಸಿದರು. ಕೇರಳದಲ್ಲಿ ಕಾಂಗ್ರೇಸ್‌ನ ಪಿತಾಮಹ ಎಂದು ಕರುಣಾಕರನ್ ಅವರನ್ನು ಕರೆಯುವುದು, ದೇಶದ ಅತಿ ಹಳೆಯ ಪಕ್ಷವನ್ನು ದಕ್ಷಿಣದ ರಾಜ್ಯದಲ್ಲಿ ಸ್ಥಾಪಿಸಿದವರು ಅಥವಾ ಸಹ ಸ್ಥಾಪಕರನ್ನು ಅಗೌರವಿಸಿದಂತೆ ಆಗುವುದಿಲ್ಲ ಎಂದು ಹೇಳಿದರು. ಕರುಣಾಕರನ್ ಅವರ ಆಡಳಿತಾತ್ಮಕ ಸಾಮರ್ಥ್ಯಗಳನ್ನು ಶ್ಲಾಘಿಸಿದ ಅವರು, ತಮ್ಮ ಪೀಳಿಗೆಯ ದಿಟ್ಟ ಆಡಳಿತಗಾರ ಎಂದರು.

ನಾಯನಾರ್ ಕುಟುಂಬದ ಜೊತೆ ಮರು ಬೆಸುಗೆ

ನಾಯನಾರ್ ಮತ್ತು ಅವರ ಪತ್ನಿ ಶಾರದಾ ಟೀಚರ್ ಅವರಂತೆ, ಕರುಣಾಕರನ್ ಹಾಗೂ ಅವರ ಪತ್ನಿ ಕಲ್ಯಾಣಿಕುಟ್ಟಿ ಅಮ್ಮಾ ಅವರ ಜತೆಗೂ ತಮಗೆ ಆಪ್ತ ಸಂಬಂಧವಿತ್ತು ಎಂದು ವಿವರಿಸಿದರು. ಕಣ್ಣೂರಿನಲ್ಲಿರುವ ನಾಯನಾರ್ ಅವರ ಮನೆಗೆ ಜೂನ್ 12ರಂದು ಭೇಟಿ ನೀಡಿದ್ದ ಸುರೇಶ್ ಗೋಪಿ, ಕುಟುಂಬದ ಸದಸ್ಯರ ಜತೆಗಿನ ಸಂಬಂಧಕ್ಕೆ ಮರು ಬೆಸುಗೆ ಹಾಕಿದ್ದರು.

ಭಾರತದಲ್ಲಿ ಬಂಧಿಸಿರುವ ಶ್ರೀಲಂಕಾ ಪ್ರಜೆಗಳು ಉಗ್ರರಲ್ಲ

ಕೊಲಂಬೊ: ಕಳೆದ ತಿಂಗಳು ಭಾರತದಲ್ಲಿ ಬಂಧಿತರಾದ ನಾಲ್ವರು ಶ್ರೀಲಂಕಾ ಪ್ರಜೆಗಳು ಐಸಿಸ್ ಜೊತೆ ನಂಟು ಹೊಂದಿದ್ದಾರೆ ಎಂಬ ಹೇಳಿಕೆಗೆ ಯಾವುದೇ ಪುರಾವೆಗಳಿಲ್ಲ ಎಂದು ಶ್ರೀಲಂಕಾ ವಿದೇಶಾಂಗ ಸಚಿವ ಅಲಿ ಸಬ್ರಿ ಹೇಳಿದ್ದಾರೆ.

ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ಐಸಿಸ್ ಜೊತೆ ಸಂಪರ್ಕ ಹೊಂದಿದ್ದ ನಾಲ್ವರು ಶ್ರೀಲಂಕಾದವರನ್ನು ಬಂಧಿಸಿರುವುದಾಗಿ ಗುಜರಾತ್ ಭಯೋತ್ಪಾದನಾ ನಿಗ್ರಹ ದಳ ಹೇಳಿಕೊಂಡಿತ್ತು. ನಾಲ್ವರು ಮೇ 19 ರಂದು ಕೊಲಂಬೊದಿಂದ ಚೆನ್ನೈಗೆ ಇಂಡಿಗೋ ವಿಮಾನವನ್ನು ಏರಿದ್ದರು ಎಂದು ಹೇಳಲಾಗಿತ್ತು.

ಮೇ 31 ರಂದು, ಶ್ರೀಲಂಕಾ ಪೊಲೀಸರ ಅಪರಾಧ ತನಿಖಾ ವಿಭಾಗವು ಕೊಲಂಬೊದಲ್ಲಿ ಪುಷ್ಪರಾಜ ಒಸಾನ್ (46) ಎಂಬಾತನನ್ನು ಬಂಧಿಸಿತ್ತು, ಅವರು ಭಾರತದಲ್ಲಿ ಬಂಧಿಸಲ್ಪಟ್ಟ ನಾಲ್ವರ ಶಂಕಿತ ಹ್ಯಾಂಡ್ಲರ್ ಎಂದು ಕರೆದಿದ್ದರು.

ಆದರೆ, ಭಾರತದಲ್ಲಿ ಬಂಧಿತರಾಗಿರುವ ಯಾವುದೇ ಶ್ರೀಲಂಕಾ ಪ್ರಜೆಗಳಿಗೆ ಭಯೋತ್ಪಾದಕ ಸಂಘಟನೆಯೊಂದಿಗೆ ಯಾವುದೇ ಸಂಬಂಧವಿಲ್ಲ ಎಂದು ಸಚಿವ ಸಬ್ರಿ ತಿಳಿಸಿದ್ದಾರೆ. ಭಾರತದಲ್ಲಿ ಬಂಧಿತರಾಗಿರುವ ನಾಲ್ವರು ಶ್ರೀಲಂಕನ್ನರು ಐಸಿಸ್‌ನೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂಬ ಸಮರ್ಥನೆಗೆ ಯಾವುದೇ ಪುರಾವೆಗಳಿಲ್ಲ. ನಾಲ್ವರು ಮಾದಕವಸ್ತು ಕಳ್ಳಸಾಗಣೆಯೊಂದಿಗೆ ಸಂಬಂಧ ಹೊಂದಿದ್ದಾರೆ ಎಂದು ನಂಬಲಾಗಿದೆ ಮತ್ತು ಭಯೋತ್ಪಾದನೆ ಅಲ್ಲ ಎಂದು ಸಬ್ರಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಒಸಾನ್ ಬಂಧನದ ನಂತರ, ಇದುವರೆಗಿನ ತನಿಖೆಗಳ ಕುರಿತು ಪ್ರತಿಕ್ರಿಯಿಸಿದ ಪೊಲೀಸ್ ವಕ್ತಾರ ನಿಹಾಲ್ ಥಲ್ದುವಾ, ನಾಲ್ವರು ಐಸಿಸ್‌ಗೆ ಸಂಪರ್ಕ ಹೊಂದಿದ್ದಾರೆ ಎಂಬುದನ್ನು ಪರಿಶೀಲಿಸಲು ಪೊಲೀಸರಿಗೆ ಸಾಧ್ಯವಾಗಲಿಲ್ಲ ಎಂದು ಹೇಳಿದ್ದಾರೆ.

ಭಾರತ-ಜಪಾನ್ ಬಾಂಧವ್ಯ ದೃಢವಾಗಿದೆ: ಪ್ರಧಾನಿ ಮೋದಿ

ಬಾರಿ: ವಿವಿಧ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಬಾಂಧವ್ಯವನ್ನು ಮುಂದುವರೆಸುವ ಆಶಯ, ಶಾಂತಿಯುತ, ಸುರಕ್ಷಿತ ಮತ್ತು ಸಮೃದ್ಧ ಇಂಡೋ-ಪೆಸಿಫಿಕ್‌ಗಾಗಿ ಭಾರತ ಮತ್ತು ಜಪಾನ್ ನಡುವಿನ ಬಲವಾದ ಬಾಂಧವ್ಯವು ಮುಖ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇಟಲಿಯಲ್ಲಿ ತಮ ಜಪಾನ್ ಪಿಎಂ ಫ್ಯೂಮಿಯೊ ಕಿಶಿಡಾ ಅವರನ್ನು ಭೇಟಿಯಾದಾಗ ಹೇಳಿದರು.

ಮೂರು ದಿನಗಳ ಜಿ7 ಶಂಗಸಭೆಯ ಎರಡನೇ ದಿನದಂದು ಔಟ್‌ರೀಚ್ ಅಧಿವೇಶನದಲ್ಲಿ ಕತಕ ಬುದ್ಧಿಮತ್ತೆ, ಶಕ್ತಿ ವಿಷಯದ ಕುರಿತು ಬಹುಪಕ್ಷೀಯ ಸಭೆಯನ್ನು ಉದ್ದೇಶಿಸಿ ಮಾತನಾಡಿದ ನಂತರ ನಂತರ ಅವರು ಕಿಶಿಡಾ ಅವರನ್ನು ಭೇಟಿಯಾದರು.

ಈ ಪ್ರದೇಶದಲ್ಲಿ ಚೀನಾದ ಆಕ್ರಮಣಕಾರಿ ನಡವಳಿಕೆ ಮತ್ತು ಅದರ ಪ್ರಭಾವವನ್ನು ವಿಸ್ತರಿಸುವ ಪ್ರಯತ್ನಗಳ ನಡುವೆ ಅವರ ಕಾಮೆಂಟ್‌ಗಳು ಬಂದವು. ನಮ ರಾಷ್ಟ್ರಗಳು ರಕ್ಷಣೆ, ತಂತ್ರಜ್ಞಾನ, ಆರೋವಾಹಕಗಳು, ಶುದ್ಧ ಶಕ್ತಿ ಮತ್ತು ಡಿಜಿಟಲ್ ತಂತ್ರಜ್ಞಾನದಲ್ಲಿ ಒಟ್ಟಾಗಿ ಕೆಲಸ ಮಾಡಲು ಎದುರು ನೋಡುತ್ತಿವೆ. ಮೂಲಸೌಕರ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳಲ್ಲಿ ಸಂಬಂಧಗಳನ್ನು ಮುಂದುವರಿಸಲು ನಾವು ಬಯಸುತ್ತೇವೆ ಎಂದು ಅವರು ಹೇಳಿದರು.

ಭಾರತ ಮತ್ತು ಜಪಾನ್ ನಡುವಿನ ಬಲವಾದ ಬಾಂಧವ್ಯವು ಶಾಂತಿಯುತ, ಸುರಕ್ಷಿತ ಮತ್ತು ಸಮೃದ್ಧ ಇಂಡೋ-ಪೆಸಿಫಿಕ್‌ಗೆ ಮುಖ್ಯವಾಗಿದೆ ಎಂದು ಮೋದಿ ಕಿಶಿದಾ ಅವರೊಂದಿಗಿನ ಮಾತುಕತೆಯ ನಂತರ ಸಾಮಾಜಿಕ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಭೆಯ ರೀಡೌಟ್‌ನಲ್ಲಿ, ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಪ್ರಧಾನ ಮಂತ್ರಿ ಅವರು ಮರುಚುನಾವಣೆಯ ಅಭಿನಂದನಾ ಶುಭಾಶಯಗಳಿಗಾಗಿ ಜಪಾನಿನ ಪ್ರತಿರೂಪಕ್ಕೆ ಧನ್ಯವಾದ ಅರ್ಪಿಸಿದರು ಮತ್ತು ಅವರ ಮೂರನೇ ಅವಧಿಯಲ್ಲಿ ದ್ವಿಪಕ್ಷೀಯ ಸಂಬಂಧಗಳು ಆದ್ಯತೆಯನ್ನು ಪಡೆಯುವುದನ್ನು ಮುಂದುವರಿಸುತ್ತೇವೆ ಎಂದು ದಢಪಡಿಸಿದರು.

ಭಾರತ-ಜಪಾನ್ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಸಹಭಾಗಿತ್ವವು 10 ನೇ ವರ್ಷದಲ್ಲಿದೆ ಎಂದು ಉಭಯ ನಾಯಕರು ಗಮನಿಸಿದರು ಮತ್ತು ಸಂಬಂಧದಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು.

ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್‌ಗೆ ಒಪ್ಪಿಗೆ

ಬಾರಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಇಟಲಿಯ ಸಹವರ್ತಿ ಜಾರ್ಜಿಯಾ ಮೆಲೋನಿ ಅವರು ದ್ವಿಪಕ್ಷೀಯ ಕಾರ್ಯತಂತ್ರದ ಪಾಲುದಾರಿಕೆಯ ಪ್ರಗತಿಯನ್ನು ಪರಿಶೀಲಿಸಿದ್ದಾರೆ ಮತ್ತು ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್ ಸೇರಿದಂತೆ ಜಾಗತಿಕ ವೇದಿಕೆಗಳು ಮತ್ತು ಬಹುಪಕ್ಷೀಯ ಉಪಕ್ರಮಗಳಲ್ಲಿ ಸಹಕಾರವನ್ನು ಬಲಪಡಿಸಲು ಒಪ್ಪಿಕೊಂಡಿದ್ದಾರೆ.

ದಕ್ಷಿಣ ಇಟಲಿಯ ಅಪುಲಿಯಾಕ್ಕೆ ಪ್ರಧಾನಿ ಮೋದಿಯವರ ದಿನದ ಭೇಟಿಯ ಕೊನೆಯಲ್ಲಿ ಉಭಯ ನಾಯಕರು ಭೇಟಿಯಾದರು, ಈ ಸಂದರ್ಭದಲ್ಲಿ ಅವರು ಜಿ 7 ಶಂಗಸಭೆಯಲ್ಲಿ ಭಾಗವಹಿಸಲು ಇಟಾಲಿಯನ್ ಪ್ರಧಾನಿಗೆ ಆಹ್ವಾನಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಮುಕ್ತ ಮತ್ತು ಮುಕ್ತ ಇಂಡೋ-ಪೆಸಿಫಿಕ್‌ಗಾಗಿ ತಮ ಹಂಚಿಕೆಯ ದಷ್ಟಿಕೋನವನ್ನು ಪೂರೈಸಲು ನಾಯಕರು ಬದ್ಧರಾಗಿದ್ದಾರೆ ಮತ್ತು ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್ ಕುರಿತು ಚರ್ಚಿಸಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸಭೆಯ ವಾಚನಗೋಷ್ಠಿಯಲ್ಲಿ ತಿಳಿಸಿದೆ. ಅವರು ಪ್ರಮುಖ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗ್ಗೆ ಚರ್ಚಿಸಿದರು ಮತ್ತು ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್ ಸೇರಿದಂತೆ ಜಾಗತಿಕ ವೇದಿಕೆಗಳು ಮತ್ತು ಬಹುಪಕ್ಷೀಯ ಉಪಕ್ರಮಗಳಲ್ಲಿ ಸಹಕಾರವನ್ನು ಬಲಪಡಿಸಲು ಒಪ್ಪಿಕೊಂಡರು ಎಂದು ಅದು ಹೇಳಿದೆ. ಒಂದು ಮಾರ್ಗ-ಮುರಿಯುವ ಉಪಕ್ರಮವಾಗಿ, ಸೌದಿ ಅರೇಬಿಯಾ, ಭಾರತ, ಯುನೈಟೆಡ್ ಸ್ಟೇಟ್ಸ್ ಮತ್ತು ಯುರೋಪ್ ನಡುವೆ ಏಷ್ಯಾ, ಮಧ್ಯ ಪ್ರಾಚ್ಯ ಮತ್ತು ಪಶ್ಚಿಮದ ನಡುವೆ ಏಕೀಕರಣವನ್ನು ಖಚಿತಪಡಿಸಿಕೊಳ್ಳಲು ವಿಶಾಲವಾದ ರಸ್ತೆ, ರೈಲುಮಾರ್ಗ ಮತ್ತು ಹಡಗು ಜಾಲವನ್ನು ಕಲ್ಪಿಸುತ್ತದೆ. ಪಾರದರ್ಶಕತೆಯ ಕೊರತೆ ಮತ್ತು ರಾಷ್ಟ್ರಗಳ ಸಾರ್ವಭೌಮತ್ವವನ್ನು ಕಡೆಗಣಿಸುವ ಬಗ್ಗೆ ಹೆಚ್ಚುತ್ತಿರುವ ಟೀಕೆಗಳನ್ನು ಎದುರಿಸುತ್ತಿರುವ ಚೀನಾದ ಬೆಲ್ಟ್ ಅಂಡ್ ರೋಡ್ ಇನಿಶಿಯೇಟಿವ್ ಮುಖಾಂತರ ಕಾರ್ಯತಂತ್ರದ ಪ್ರಭಾವವನ್ನು ಪಡೆಯಲು ಸಮಾನ ಮನಸ್ಕ ರಾಷ್ಟ್ರಗಳ ಉಪಕ್ರಮವಾಗಿ ಐಎಂಇಸಿ ಅನ್ನು ನೋಡಲಾಗುತ್ತದೆ.

ಇಂಡೋ-ಪೆಸಿಫಿಕ್ ಮಹಾಸಾಗರ ಉಪಕ್ರಮದ ಚೌಕಟ್ಟಿನಡಿಯಲ್ಲಿ ಮುಕ್ತ ಮತ್ತು ಮುಕ್ತ ಇಂಡೋ-ಪೆಸಿಫಿಕ್‌ಗಾಗಿ ತಮ ಹಂಚಿಕೆಯ ದಷ್ಟಿಯನ್ನು ಪೂರೈಸಲು ಜಂಟಿ ಚಟುವಟಿಕೆಗಳನ್ನು ಇಬ್ಬರೂ ನಾಯಕರು ಎದುರು ನೋಡುತ್ತಿದ್ದಾರೆ ಎಂದು ಈ ಪ್ರದೇಶದಲ್ಲಿ ಚೀನಾದ ಆಕ್ರಮಣಕಾರಿ ಕ್ರಮಗಳ ನಡುವೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

ಬಿಆರ್‌ಐ ಎಂಬುದು ಚೀನಾವನ್ನು ಆಗ್ನೇಯ ಏಷ್ಯಾ, ಮಧ್ಯ ಏಷ್ಯಾ, ರಷ್ಯಾ ಮತ್ತು ಯುರೋಪ್‌ನೊಂದಿಗೆ ಸಂಪರ್ಕಿಸುವ ಒಂದು ಮೆಗಾ ಸಂಪರ್ಕ ಯೋಜನೆಯಾಗಿದೆ. ಕಳೆದ ವರ್ಷ ದೆಹಲಿಯಲ್ಲಿ ನಡೆದ ಜಿ20 ಶಂಗಸಭೆಯ ಸಂದರ್ಭದಲ್ಲಿ ಐಎಂಇಸಿ ಉಪಕ್ರಮವನ್ನು ದೃಢಪಡಿಸಲಾಯಿತು.

ಇಕ್ಬಾಲ್‌ಗೆ ಸೇರಿದ 4440 ಕೋಟಿ ಮೌಲ್ಯದ ಆಸ್ತಿ ಇಡಿ ವಶ

ನವದೆಹಲಿ: ಉತ್ತರ ಪ್ರದೇಶದ ಮಾಜಿ ಬಿಎಸ್‌ಪಿ ಎಂಎಲ್‌ಸಿ ಮೊಹಮದ್ ಇಕ್ಬಾಲ್ ಮತ್ತು ಅವರ ಕುಟುಂಬದ ವಿರುದ್ಧ ಅಕ್ರಮ ಹಣ ವರ್ಗಾವಣೆ ತನಿಖೆಯ ಭಾಗವಾಗಿ 4,440 ಕೋಟಿ ಮೌಲ್ಯದ ಸಹರಾನ್‌ಪುರದಲ್ಲಿ ವಿಶ್ವವಿದ್ಯಾಲಯದ ಕಟ್ಟಡ ಮತ್ತು ಭೂಮಿಯನ್ನು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ.

121 ಎಕರೆ ವಿಸ್ತೀರ್ಣದ ಭೂಮಿ ಮತ್ತು ಗ್ಲೋಕಲ್ ಯೂನಿವರ್ಸಿಟಿಯ ಕಟ್ಟಡವನ್ನು ಮನಿ ಲಾಂಡರಿಂಗ್ ತಡೆ ಕಾಯ್ದೆ ಅಡಿಯಲ್ಲಿ ಫೆಡರಲ್ ತನಿಖಾ ಸಂಸ್ಥೆಯು ತಾತ್ಕಾಲಿಕ ಲಗತ್ತಿಸುವ ಆದೇಶವನ್ನು ಹೊರಡಿಸಿದ ನಂತರ ಫ್ರೀಜ್ ಮಾಡಲಾಗಿದೆ. ಈ ಆಸ್ತಿಗಳನ್ನು ಅಬ್ದುಲ್ ವಹೀದ್ ಎಜುಕೇಶನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ಹೆಸರಿನಲ್ಲಿ ನೋಂದಾಯಿಸಲಾಗಿದೆ, ಇದನ್ನು ಮೊಹಮದ್ ಇಕ್ಬಾಲ್ ಮತ್ತು ಅವರ ಕುಟುಂಬ ಸದಸ್ಯರು ನಿಯಂತ್ರಿಸುತ್ತಾರೆ, ನಿರ್ವಹಿಸುತ್ತಾರೆ ಮತ್ತು ನಡೆಸುತ್ತಾರೆ ಎಂದು ಜಾರಿ ನಿರ್ದೇಶನಾಲಯ ಹೇಳಿಕೆಯಲ್ಲಿ ತಿಳಿಸಿದೆ. ಇಕ್ಬಾಲ್ ಟ್ರಸ್ಟ್ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧದ ಕ್ರಮವು ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದೆ ಎಂದು ಅದು ಹೇಳಿದೆ. ಇಡಿ ಪ್ರಕಾರ, ಮಾಜಿ ಎಂಎಲ್‌ಸಿ ಪರಾರಿಯಾಗಿದ್ದಾರೆ ಮತ್ತು ಅವರು ದುಬೈನಲ್ಲಿದ್ದಾರೆ ಎಂದು ನಂಬಲಾಗಿದೆ.



ಅಕ್ರಮ ಗಣಿಗಾರಿಕೆ ಪ್ರಕರಣ

ಮನಿ ಲಾಂಡರಿಂಗ್ ಪ್ರಕರಣವು ಉತ್ತರ ಪ್ರದೇಶದ ಸಹರಾನ್‌ಪುರ ಜಿಲ್ಲೆಯಲ್ಲಿ ಮರಳು ಗಣಿಗಾರಿಕೆ ಗುತ್ತಿಗೆಯನ್ನು ಅಕ್ರಮವಾಗಿ ನವೀಕರಿಸಲಾಗಿದೆ ಮತ್ತು ಹಲವಾರು ಗಣಿ ಗುತ್ತಿಗೆದಾರರು, ಕೆಲವು ಸರ್ಕಾರಿ ಅಧಿಕಾರಿಗಳು ಮತ್ತು ಅಪರಿಚಿತ ವ್ಯಕ್ತಿಗಳ ವಿರುದ್ಧ ತನಿಖೆ ನಡೆಸಲು ದೆಹಲಿಯಲ್ಲಿ ಸಿಬಿಐ ಎಫ್‌ಐಆರ್ ದಾಖಲಿಸಿದೆ. ಎಲ್ಲಾ ಗಣಿಗಾರಿಕೆ ಸಂಸ್ಥೆಗಳು ಮೊಹಮದ್ ಇಕ್ಬಾಲ್ ಗುಂಪಿನ ಒಡೆತನದಲ್ಲಿತ್ತು ಮತ್ತು ನಿರ್ವಹಿಸುತ್ತಿದ್ದವು.

ಈ ಸಂಸ್ಥೆಗಳು ಸಹರಾನ್‌ಪುರ ಮತ್ತು ಪಕ್ಕದ ಪ್ರದೇಶಗಳಲ್ಲಿ ಅತಿರೇಕದ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿಕೊಂಡಿವೆ. ಯಾವುದೇ ವ್ಯವಹಾರ ಸಂಬಂಧಗಳಿಲ್ಲದೆ ಮೊಹಮದ್ ಇಕ್ಬಾಲ್ ಅವರ ಗಣಿಗಾರಿಕೆ ಸಂಸ್ಥೆಗಳು ಮತ್ತು ಗುಂಪು ಕಂಪನಿಗಳ ನಡುವೆ ಕೋಟ್ಯಂತರ ರೂಪಾಯಿಗಳ ಹೆಚ್ಚಿನ ಮೌಲ್ಯದ ವಹಿವಾಟು ಕಂಡುಬಂದಿದೆ ಎಂದು ಇಡಿ ತಿಳಿಸಿದೆ.

ಡ್ರೋನ್ ಮೂಲಕ ಸಾಗಿಸುತ್ತಿದ್ದ 12 ಕೆಜಿ ಹೆರಾಯಿನ್ ವಶ

ಜೈಪುರ: ಪಾಕಿಸ್ತಾನದಿಂದ ಡ್ರೋನ್‌ಗಳನ್ನು ಬಳಸಿ ರಾಜಸ್ಥಾನದ ಅನುಪ್‌ಗಢ್ ಜಿಲ್ಲೆಗೆ ಅಕ್ರಮವಾಗಿ ಸಾಗಿಸುತ್ತಿದ್ದ 12 ಕೆಜಿ ಹೆರಾಯಿನ್ ಅನ್ನು ಭದ್ರತಾ ಪಡೆಗಳು ವಶಪಡಿಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ

ಬೆಂಗಳೂರಿನಲ್ಲಿ ಭಾರತ- ಆಫ್ರಿಕಾ ನಡುವೆ ಏಕದಿನ ಸರಣಿ ಆರಂಭ

ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಮಹಿಳೆಯರ ಟಿ20 ವಿಶ್ವಕಪ್

ಪ್ರಸ್ತುತ ಅಮೆರಿಕ ಹಾಗೂ ವೆಸ್ಟ್ ಇಂಡೀಸ್ ಆತಿಥ್ಯದಲ್ಲಿ ಪುರುಷರ ಟಿ20 ವಿಶ್ವಕಪ್ ನಡೆಯುತ್ತಿದೆ. ಇದಾದ ಬಳಿಕ ಕೆಲವೇ ತಿಂಗಳ ಅಂತರದಲ್ಲಿ ಅಂದರೆ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಮಹಿಳೆಯರ ಟಿ20 ವಿಶ್ವಕಪ್ ಬಾಂಗ್ಲಾದೇಶದಲ್ಲಿ ನಡೆಯಲಿದೆ. ಈ ಮಿನಿ ವಿಶ್ವಸಮರಕ್ಕೂ ಮುನ್ನ ತಂಡದ ಸಿದ್ಧತೆಯನ್ನು ಪೂರ್ಣಗೊಳಿಸುವ ಸಲುವಾಗಿ ಭಾರತ ಮಹಿಳಾ ತಂಡ, ದಕ್ಷಿಣ ಆಫ್ರಿಕಾ ಮಹಿಳಾ ತಂಡದ ವಿರುದ್ಧ ಮೂರು ಮಾದರಿಗಳ ಸರಣಿಯನ್ನು ಆಡಲಿದೆ. ಈ ಸರಣಿಗಾಗಿ ಈಗಾಗಲೇ ದಕ್ಷಿಣ ಆಫ್ರಿಕಾ ತಂಡ ಭಾರತ ಪ್ರವಾಸ ಕೈಗೊಂಡಿದೆ. ಈ ಪ್ರವಾಸವು ಇಂದಿನಿಂದ ಪ್ರಾರಂಭವಾಗಲಿದೆ.

ಇಂದಿನಿಂದ ಸರಣಿ ಆರಂಭ

ಭಾರತ ಮಹಿಳಾ ತಂಡ ಮತ್ತು ದಕ್ಷಿಣ ಆಫ್ರಿಕಾ ಮಹಿಳಾ ತಂಡಗಳ ನಡುವೆ ಮೊದಲು ಏಕದಿನ ಸರಣಿ ನಡೆಯಲ್ಲಿದೆ. ಈ ಸರಣಿಯ ಮೊದಲ ಪಂದ್ಯ ಬೆಂಗಳೂರಿನಲ್ಲಿ ನಡೆಯಲಿದ್ದು, ಟೆಸ್ಟ್ ಮತ್ತು ಟಿ20 ಪಂದ್ಯಗಳು ಚೆನ್ನೈನಲ್ಲಿ ನಡೆಯಲಿವೆ.

ಎರಡು ತಂಡಗಳ ನಡುವಿನ ಏಕದಿನ ಪಂದ್ಯಗಳು ಐಸಿಸಿ ಮಹಿಳಾ ಚಾಂಪಿಯನ್‌ಶಿಪ್ 2022-2025 ರ ಭಾಗವಾಗಿವೆ. ಮೊದಲ ಏಕದಿನ ಪಂದ್ಯ ಇಂದು ಎರಡನೇ ಏಕದಿನ ಪಂದ್ಯ ಜೂನ್ 23 ರಂದು ಮತ್ತು ಮೂರನೇ ಏಕದಿನ ಪಂದ್ಯ ಜೂನ್ 23 ರಂದು ನಡೆಯಲಿದೆ.

ಏಕದಿನ ಪಂದ್ಯಗಳು ಮಧ್ಯಾಹ್ನ 1.30ಕ್ಕೆ ಆರಂಭವಾಗಲಿವೆ. ಇದಾದ ಬಳಿಕ ಜೂನ್ 28ರಿಂದ ಜುಲೈ 1ರವರೆಗೆ ಚೆನ್ನೈನಲ್ಲಿ ಏಕೈಕ ಟೆಸ್ಟ್ ಪಂದ್ಯ ನಡೆಯಲಿದೆ. ಆ ಬಳಿಕ ನಡೆಯಲಿರುವ ಟಿ20 ಸರಣಿಯ ಪಂದ್ಯಗಳಯ ರಾತ್ರಿ 7 ಗಂಟೆಗೆ ಆರಂಭವಾಗಲಿದೆ.

ಏಕದಿನ ಸರಣಿ		
ಜೂನ್ 16	ಮೊದಲನೇ ಪಂದ್ಯ	ಮಧ್ಯಾಹ್ನ 1.30
ಜೂನ್ 19	ಎರಡನೇ ಪಂದ್ಯ	ಮಧ್ಯಾಹ್ನ 1.30
ಜೂನ್ 23	ಮೂರನೇ ಪಂದ್ಯ	ಮಧ್ಯಾಹ್ನ 1.30

ಏಕೈಕ ಟೆಸ್ಟ್ ಪಂದ್ಯ		
ಜೂನ್ 28 ರಿಂದ	ಜುಲೈ 1 ರವರೆಗೆ	ಚೆನ್ನೈ

ಟಿ20 ಸರಣಿ		
ಜುಲೈ 5	ಮೊದಲ ಟಿ20	ಸಂಜೆ 7 ರಿಂದ
ಜುಲೈ 7	2ನೇ ಟಿ20	ಸಂಜೆ 7 ರಿಂದ
ಜುಲೈ 9	3ನೇ ಟಿ20	ಸಂಜೆ 7 ರಿಂದ

ಭಾರತ ಮಹಿಳಾ ತಂಡ

ಏಕದಿನ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಶಫಾಲಿ ವರ್ಮಾ, ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿಕೆಟ್ ಕೀಪರ್), ಉಮಾ ಛೆಟ್ರಿ (ವಿಕೆಟ್ ಕೀಪರ್), ದಯಾಲನ್ ಹೇಮಲತಾ, ರಾಧಾ ಯಾದವ್, ಆಶಾ ಶೋಭಾನಾ, ಶ್ರೇಯಾಂಕ ಪಾಟೀಲ್, ಸೈಕಾ ಇಶಾಕ್, ಪೂಜಾ ವಸ್ತ್ರಾಕರ್, ರೇಣುಕಾ ಸಿಂಗ್ ಠಾಕೂರ್, ಅರುಂಧತಿ ರೆಡ್ಡಿ, ಪ್ರಿಯಾ ಪುನಿಯಾ.

ಟೆಸ್ಟ್ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಶಫಾಲಿ ವರ್ಮಾ, ಶುಭಾ ಸತೀಶ್, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿಕೆಟ್ ಕೀಪರ್), ಉಮಾ ಛೆಟ್ರಿ (ವಿಕೆಟ್ ಕೀಪರ್), ದೀಪ್ತಿ ಶರ್ಮಾ, ಸ್ನೇಹ ರಾಣಾ, ಸೈಕಾ ಇಶಾಕ್, ರಾಜೇಶ್ವರಿ ಗಾಯಕ್‌ವಾಡ್, ಪೂಜಾ ವಸ್ತ್ರಾಕರ್, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್ ಠಾಕೂರ್, ಮೇಘನಾ ಸಿಂಗ್, ಪ್ರಿಯಾ ಪುನಿಯಾ.

ಟಿ20 ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಶಫಾಲಿ ವರ್ಮಾ, ದಯಾಲನ್ ಹೇಮಲತಾ, ಉಮಾ ಛೆಟ್ರಿ (ವಿಕೆಟ್‌ಕೀಪರ್), ರಿಚಾ ಘೋಷ್ (ವಿಕೆಟ್‌ಕೀಪರ್), ಜೆಮಿಮಾ ರಾಡ್ರಿಗಸ್, ಸಜ್ನಾ ಸಜೀವನ್, ದೀಪ್ತಿ ಯಾದವ್, ಶ್ರೇಯಾಂಕಾ ಪಾಟೀಲ್, ಅಮಂಜೋತ್ ಕೌರ್, ಆಶಾ ಶೋಭನಾ, ಪೂಜಾ ವಸ್ತ್ರಾಕರ್, ರೇಣುಕಾ ಸಿಂಗ್ ಠಾಕೂರ್, ಅರುಂಧತಿ ರೆಡ್ಡಿ.

24 ಎಸೆತಗಳಲ್ಲಿ ಹೊಸ ಇತಿಹಾಸ ನಿರ್ಮಿಸಿದ ಸೌಧಿ

ಸೌಧಿ ಕರಾರುವಾಕ್ ದಾಳಿ

ಟಿ20 ವಿಶ್ವಕಪ್‌ನ 32ನೇ ಪಂದ್ಯದಲ್ಲಿ ನ್ಯೂಝಿಲೆಂಡ್ ವೇಗಿ ಟಿಮ್ ಸೌಧಿ ಹೊಸ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಅದು ಕೂಡ 4 ಓವರ್‌ಗಳ ಮೂಲಕ ಎಂಬುದು ವಿಶೇಷ. ಉಗಾಂಡ ವಿರುದ್ಧದ ಈ ಪಂದ್ಯದಲ್ಲಿ ಟಾಸ್ ಗೆದ್ದ ನ್ಯೂಝಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಬೌಲಿಂಗ್ ಆಯ್ದುಕೊಂಡಿದ್ದರು.

ಅದರಂತೆ ಮೊದಲು ಬ್ಯಾಟ್ ಮಾಡಿದ ಉಗಾಂಡ ತಂಡವು ಬಲಗೈ ವೇಗಿ ಟಿಮ್ ಸೌಧಿ ಎಸೆತಗಳನ್ನು ಗುರುತಿಸುವಲ್ಲಿ ತಡಕಾಡಿದರು. ಅತ್ತ ಬ್ಯಾಟರ್‌ಗಳು ಪರದಾಡುತ್ತಿದ್ದರೆ, ಇತ್ತ ಸೌಧಿ ಕರಾರುವಾಕ್ ದಾಳಿ ಸಂಘಟಿಸಿದರು. ಪರಿಣಾಮ ಉಗಾಂಡ ತಂಡವು 18.4 ಓವರ್‌ಗಳಲ್ಲಿ ಕೇವಲ 40 ರನ್‌ಗಳಿಗೆ ಆಲೌಟ್ ಆಯಿತು.

ಈ ವೇಳೆ 4 ಓವರ್‌ಗಳನ್ನು ಎಸೆದಿದ್ದ ಟಿಮ್ ಸೌಧಿ ನೀಡಿದ್ದು ಕೇವಲ 4 ರನ್‌ಗಳು ಮಾತ್ರ ಎಂದರೆ ನಂಬಲೇಬೇಕು. ಅಲ್ಲದೆ ಒಂದು ಮೇಡನ್‌ನೊಂದಿಗೆ 3 ವಿಕೆಟ್‌ಗಳನ್ನು ಕೂಡ ಕಬಳಿಸಿದರು. ಇದರೊಂದಿಗೆ ಟಿ20 ವಿಶ್ವಕಪ್‌ನಲ್ಲಿ 4 ಓವರ್‌ಗಳಲ್ಲಿ ಅತೀ ಕಡಿಮೆ ರನ್ ನೀಡಿದ ಬೌಲರ್ ಎಂಬ ವಿಶ್ವ ದಾಖಲೆ ಟಿಮ್ ಸೌಧಿ ಪಾಲಾಯಿತು.

ಇದಕ್ಕೂ ಮುನ್ನ ಈ ದಾಖಲೆ ಉಗಾಂಡ ತಂಡದ ಹಿರಿಯ ಸ್ಪಿನ್ನರ್ ಫ್ರಾಂಕ್ ನ್ಸುಬುಗಾ ಹೆಸರಿನಲ್ಲಿತ್ತು. ಟಿ20 ವಿಶ್ವಕಪ್ 2024ರಲ್ಲಿ ಪಪುವಾ ನ್ಯೂ ಗಿನಿಯಾ ವಿರುದ್ಧದ ಪಂದ್ಯದಲ್ಲಿ ನ್ಸುಬುಗಾ 4 ಓವರ್‌ಗಳಲ್ಲಿ 4 ರನ್ ನೀಡಿ 2 ವಿಕೆಟ್ ಕಬಳಿಸಿ ಈ ವಿಶ್ವ ದಾಖಲೆ ನಿರ್ಮಿಸಿದ್ದರು.

ಇದೀಗ ಉಗಾಂಡ ವಿರುದ್ಧ 4 ಓವರ್‌ಗಳಲ್ಲಿ ಕೇವಲ 4 ರನ್ ನೀಡಿ 3 ವಿಕೆಟ್ ಕಬಳಿಸುವ ಮೂಲಕ ಟಿಮ್ ಸೌಧಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಈ ಮೂಲಕ ಟಿ20 ವಿಶ್ವಕಪ್‌ನಲ್ಲಿ 4 ಓವರ್‌ಗಳಲ್ಲಿ ಅತೀ ಕಡಿಮೆ ರನ್ ನೀಡಿ ಅತ್ಯಧಿಕ ವಿಕೆಟ್ ಕಬಳಿಸಿದ ಬೌಲರ್ ಎಂಬ ವಿಶ್ವ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಇನ್ನು ಈ ಪಂದ್ಯದಲ್ಲಿ ಉಗಾಂಡ ತಂಡ ನೀಡಿದ 41 ರನ್‌ಗಳ ಟಾರ್ಗೆಟ್ ಅನ್ನು ನ್ಯೂಝಿಲೆಂಡ್ ತಂಡವು 5.2 ಓವರ್‌ಗಳಲ್ಲಿ ಚೇಸ್ ಮಾಡಿ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನ ಹೊರತಾಗಿಯೂ ನ್ಯೂಝಿಲೆಂಡ್ ತಂಡಕ್ಕೆ ಸೂಪರ್-8 ಹಂತಕ್ಕೇರಲು ಸಾಧ್ಯವಾಗುವುದಿಲ್ಲ. ಏಕೆಂದರೆ ಗ್ರೂಪ್-ಸಿ ಯಿಂದ ವೆಸ್ಟ್ ಇಂಡೀಸ್ ಮತ್ತು ಅಫ್ಘಾನಿಸ್ತಾನ್ ತಂಡಗಳು ಈಗಾಗಲೇ ದ್ವಿತೀಯ ಸುತ್ತಿಗೆ ಅರ್ಹತೆ ಪಡೆದುಕೊಂಡಿದೆ.

ಟೀಂ ಇಂಡಿಯಾದ ಇಬ್ಬರು ಭಾರತಕ್ಕೆ ವಾಪಸ್..!

ಅಮೆರಿಕದಲ್ಲಿ ನಡೆಯಬೇಕಿದ್ದ ಟಿ20 ವಿಶ್ವಕಪ್‌ನ ಗುಂಪು ಹಂತದ ಭಾಗಶಃ ಪಂದ್ಯಗಳು ಈಗಾಗಲೇ ಮುಗಿದಿವೆ. ಇನ್ನು ಕೆಲವೇ ಪಂದ್ಯಗಳು ಬಾಕಿ ಉಳಿದಿವೆ. ಮುಂದಿನ ಹಂತ ಅಂದರೆ ಸೂಪರ್ 8 ಸುತ್ತಿನ ಎಲ್ಲಾ ಪಂದ್ಯಗಳಿಗೆ ವೆಸ್ಟ್ ಇಂಡೀಸ್ ಆತಿಥ್ಯವಹಿಸುತ್ತಿದೆ. ಹೀಗಾಗಿ ಈ ಸುತ್ತಿಗೆ ಅರ್ಹತೆ ಪಡೆದಿರುವ ತಂಡಗಳು ಅಲ್ಲಿಗೆ ಪ್ರಯಾಣ ಬೆಳೆಸಬೇಕಾಗಿದೆ.

ರೋಹಿತ್ ಶರ್ಮಾ ನೇತೃತ್ವದ ಭಾರತ ತಂಡ ಕೂಡ ಸೂಪರ್ 8 ಸುತ್ತು ತಲುಪಿದೆ. ಆದರೆ ಟೀಂ ಇಂಡಿಯಾ ತನ್ನ ಕೊನೆಯ ಗುಂಪು ಹಂತದ ಪಂದ್ಯವನ್ನು ಜೂನ್ 15 ರಂದು ಕೆನಡಾ ವಿರುದ್ಧ ಆಡಲಿದೆ. ಇದಾದ ಬಳಿಕ ಸೂಪರ್-8 ಸುತ್ತಿನಲ್ಲಿ ಆಸ್ಟ್ರೇಲಿಯಾ ವಿರುದ್ಧ ಅಭಿಯಾನ ಆರಂಭಿಸಲಿದೆ. ಜೂನ್ 24 ರಂದು ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳು ಮುಖಾಮುಖಿಯಾಗಲಿವೆ.

ಆದರೆ ಅದಕ್ಕೂ ಮುನ್ನ ಟೀಂ ಇಂಡಿಯಾ ಪಾಳಯದಿಂದ ದೊಡ್ಡ ಸುದ್ದಿಯೊಂದು ಹೊರಬಿದ್ದಿದ್ದು, ತಂಡದ ಆಟಗಾರರಾದ ಶುಭ್‌ಮನ್ ಗಿಲ್ ಮತ್ತು ಅವೇಶ್ ಖಾನ್ ಅವರು ಟಿ20 ವಿಶ್ವಕಪ್ ನಡುವೆ ಭಾರತಕ್ಕೆ ಮರಳಬೇಕಾಗಬಹುದು ಎಂದು ಹೇಳಲಾಗುತ್ತಿದೆ.

ಆದಾಗ್ಯೂ, ಈ ಇಬ್ಬರೂ ಆಟಗಾರರು ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದಿಲ್ಲ. ಬದಲಿಗೆ ಈ ಇಬ್ಬರನ್ನು ಮೀಸಲು ಆಟಗಾರರನ್ನಾಗಿ ಆಯ್ಕೆ ಮಾಡಲಾಗಿದೆ. ಮಾಧ್ಯಮ ವರದಿಗಳ ಪ್ರಕಾರ, ಶುಭಮನ್ ಗಿಲ್ ಮತ್ತು ಅವೇಶ್ ಖಾನ್ ಅವರ ವೀಸಾಗಳಿಗೆ ಅಮೆರಿಕದವರೆಗೆ ಮಾತ್ರ ಅನುಮತಿ ನೀಡಲಾಗಿತ್ತು. ಈಗಾಗಲೇ ಭಾರತ ತಂಡ ಅಮೆರಿಕದಲ್ಲಿ ತನ್ನ ಮೊದಲ ಮೂರು ಪಂದ್ಯಗಳನ್ನು ಆಡಿದೆ. ಈಗ ಟೀಂ ಇಂಡಿಯಾ ವೆಸ್ಟ್ ಇಂಡೀಸ್ ನೆಲದಲ್ಲಿ ಆಡಬೇಕಿದೆ. ಆದ್ದರಿಂದ, ವೀಸಾ ಸಂಬಂಧಿತ ಕಾರಣಗಳಿಂದ ಶುಭ್‌ಮನ್ ಗಿಲ್ ಮತ್ತು ಅವೇಶ್ ಖಾನ್ ಭಾರತಕ್ಕೆ ಮರಳಬೇಕಾಗಬಹುದು. ಏಕೆಂದರೆ ಇಬ್ಬರಿಗೂ ವೆಸ್ಟ್ ಇಂಡೀಸ್‌ವರೆಗೆ ವೀಸಾ ನೀಡಲಾಗಿಲ್ಲ ಎಂದು ಹೇಳಲಾಗುತ್ತಿದೆ. ಭಾರತ ತಂಡವ ಟಿ20 ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದೆ. ಟೀಂ ಇಂಡಿಯಾ ತನ್ನ ಮೊದಲ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಸೋಲಿಸಿತ್ತು. ಇದಾದ ಬಳಿಕ ಪಾಕಿಸ್ತಾನವನ್ನು ಹೀನಾಯವಾಗಿ ಸೋಲುಣಿಸಿತು. ಹಾಗೆಯೇ ತನ್ನ ಮೂರನೇ ಪಂದ್ಯದಲ್ಲಿ ಭಾರತವು ಆತಿಥೇಯ ಅಮೆರಿಕವನ್ನು ಸಹ ಸೋಲಿಸಿತು. ಈ ಮೂಲಕ ಸತತ 3 ಗೆಲುವಿನಿಂದ ಭಾರತ ತಂಡ ಸೂಪರ್-8 ಸುತ್ತು ತಲುಪಿದೆ.

ವಿಶ್ವಕಪ್‌ನಿಂದ ಪಾಕ್ ಔಟ್

2024ರ ಟಿ20 ವಿಶ್ವಕಪ್‌ನಿಂದ ಪಾಕಿಸ್ತಾನ ತಂಡ ಹೊರಬಿದ್ದ ಬಳಿಕ ತಮ್ಮದೇ ದೇಶದ ಕ್ರಿಕೆಟ್ ಅಭಿಮಾನಿಗಳು ಹಾಗೂ ಹಿರಿಯ ಕ್ರಿಕೆಟಿಗರು ವ್ಯಾಪಕ ಟೀಕೆ ವ್ಯಕ್ತಪಡಿಸಿದ್ದಾರೆ. ಅದರಲ್ಲೂ ಬಾಬರ್ ಆಜಂ ಮೊಹಮ್ಮದ್ ರಿಜ್ವಾನ್ ಸೇರಿದಂತೆ ಹಿರಿಯ ಕ್ರಿಕೆಟಿಗರನ್ನು ರಾಷ್ಟ್ರೀಯ ತಂಡದಿಂದಲೇ ಕಿತ್ತೊಗೆಯುವಂತೆ ಆಗ್ರಹಗಳು ಕೇಳಿಬರುತ್ತಿವೆ.

ಪಾಕ್‌ನ ಖಾಸಗಿ ವಾಹಿನಿಯೊಂದರ ಚರ್ಚಾ ಕಾರ್ಯಕ್ರಮದಲ್ಲಿ ಮಾತನಾಡಿದ ಪಾಕ್ ಕ್ರಿಕೆಟಿಗ, ಅಹ್ಮದ್ ಶೆಹಜಾದ್ ಹಿರಿಯ ಆಟಗಾರರ ವಿರುದ್ಧ ತೀವ್ರ ಅಸಮಾಧಾನ ಹೊರಹಾಕಿದ್ದಾರೆ.

ಪಾಕ್ ತಂಡದಲ್ಲಿರುವ ನಾಯಕ ಬಾಬರ್ ಆಜಂ, ಮೊಹಮ್ಮದ್ ರಿಜ್ವಾನ್, ಶಾಹೀನ್ ಶಾ ಅಫ್ರಿದಿ ಸೇರಿದಂತೆ ಹಿರಿಯ ಕ್ರಿಕೆಟಿಗರನ್ನು ತಂಡದಿಂದ ಕಿತ್ತೊಗೆಯಬೇಕು ಎಂದು ಪಾಕ್ ಕ್ರಿಕೆಟ್ ಮಂಡಳಿಗೆ ಒತ್ತಾಯಿಸಿದ್ದಾರೆ. ಬಾಬರ್ ಕ್ರಿಕೆಟ್ ತಂಡದಲ್ಲಿ ಗುಂಪುಗಾರಿಕೆ ಮಾಡುತ್ತಿದ್ದಾರೆ, ತನ್ನ ಸ್ನೇಹಿತರನ್ನ ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ. ಬಾಬರ್, ರಿಜ್ವಾನ್, ಅಫ್ರಿದಿ, ಫಖರ್ ಜಮಾನ್, ಹ್ಯಾರಿಸ್ ರೌಫ್ ಪಾಕಿಸ್ತಾನಕ್ಕಾಗಿ ಕಳೆದ 4-5 ವರ್ಷಗಳಿಂದ ನಿಯಮಿತವಾಗಿ ಆಡುತ್ತಿದ್ದಾರೆ. ಅವರ ಪ್ರದರ್ಶನ ಸುಧಾರಿಸಿಕೊಳ್ಳಲು ಸಾಕಷ್ಟು ಸಮಯ ನೀಡಲಾಗಿದೆ. ಆದರೂ ತಂಡದಲ್ಲಿ ಗುಂಪುಗಾರಿಕೆಯಿಂದ ಒಬ್ಬರನ್ನೊಬ್ಬರು ಸಮರ್ಥಿಸಿಕೊಳ್ಳುತ್ತಿದ್ದಾರೆ. ನಮ್ಮ ತಪ್ಪುಗಳಿಂದ ನಾವು ಕಲಿಯುತ್ತಿದ್ದೇವೆ ಅಂತ ಪ್ರತಿಬಾರಿಯೂ ಹೇಳ್ತಿದ್ದಾರೆ. ಕೆನಡಾ ವಿರುದ್ಧ ಸಹ ಕಡಿಮೆ ಎನ್‌ರೇಟ್‌ನಿಂದ ಗೆದ್ದು ನೀವು ಏನನ್ನು ಕಲಿಯುತ್ತಿದ್ದೀರಿ ನಿಮ್ಮ ನಾಯಕತ್ವದಿಂದ ಪಾಕಿಸ್ತಾನದ ಕ್ರಿಕೆಟ್ ಹಾಳಾಗಿದೆ. ಬಾಬರ್ ಕೇವಲ ಸೋಷಿಯಲ್ ಮೀಡಿಯಾ ಸ್ಟಾರ್‌ಗಳಾಗಿದ್ದಾರೆ. ಬಾಬರ್ ವಿರುದ್ಧ ಪಿಸಿಬಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಶೆಹಜಾದ್ ಒತ್ತಾಯಿಸಿದ್ದಾರೆ.

ಸನ್ನಿ ಲಿಯೋನ್ ಬೇಕೇಬೇಕೆಂದು ವಿದ್ಯಾರ್ಥಿಗಳ ಪಟ್ಟು; ಕೇರಳ ವಿವಿಗೆ ಇಕ್ಕಟ್ಟು!

ಇತ್ತೀಚೆಗೆ ನಡೆದ ಕಾಲ್ತುಳಿತದ ಹಿನ್ನೆಲೆಯಲ್ಲಿ ಕೇರಳ ಸರ್ಕಾರವು ಹೊರಗಿನ ಡಿಜೆ ಪಾರ್ಟಿಗಳು ಮತ್ತು ಕಾಲೇಜು ಕ್ಯಾಂಪಸ್‌ಗಳಲ್ಲಿ ರಾತ್ರಿ ಸಂಗೀತ ಕಾರ್ಯಕ್ರಮಗಳನ್ನು ನಿಷೇಧಿಸಿತ್ತು.

ಆದರೂ ಬಾಲಿವುಡ್ ನಟಿ ಸನ್ನಿ ಲಿಯೋನ್ ಅವರ ನೃತ್ಯ ಕಾರ್ಯಕ್ರಮಕ್ಕೆ ಕೇರಳ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ತಯಾರಿ ನಡೆಸಿದ್ದರು. ಈ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯ ಅನುಮತಿ ನಿರಾಕರಿಸಿದೆ.

ಕೇರಳ ರಾಜಧಾನಿ ತಿರುವನಂತಪುರಂನ ಕಾರ್ಯವಟ್ಟಂನ ಯೂನಿವರ್ಸಿಟಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಬಾಲಿವುಡ್ ನಟಿ ಸನ್ನಿ ಲಿಯೋನ್ ಅವರ ನೃತ್ಯ ಪ್ರದರ್ಶನ ಜುಲೈ 5ರಂದು ಆಯೋಜಿಸಲಾಗಿತ್ತು. ಆದರೆ ಅದಕ್ಕೂ ಮುನ್ನ ಕೇರಳ ವಿಶ್ವವಿದ್ಯಾಲಯ ಈ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸಿದೆ. ಕೇರಳ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಮೋಹನನ್ ಕುನ್ನುಮ್ಮಾಲ್ ಅವರು ಈ ಕಾರ್ಯಕ್ರಮವನ್ನು ನಿಷೇಧಿಸಿ ಆದೇಶ ಹೊರಡಿಸಿದ್ದಾರೆ.

ಕಾರ್ಯಕ್ರಮದ ಪಟ್ಟಿಯಲ್ಲಿ ವಿಶ್ವವಿದ್ಯಾನಿಲಯವು ಮಿಸ್ ಲಿಯೋನ್ ಅವರ ಪ್ರದರ್ಶನವನ್ನು ಸೇರಿಸದಂತೆ ನೋಡಿಕೊಳ್ಳಲು ರಿಜಿಸ್ಟ್ರಾರ್‌ಗೆ ಸೂಚನೆ ನೀಡಿದ್ದಾರೆ. ಕ್ಯಾಂಪಸ್ ಒಳಗೆ ಅಥವಾ ಹೊರಗೆ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲು ಒಕ್ಕೂಟಕ್ಕೆ ಅನುಮತಿ ನೀಡುವುದಿಲ್ಲ ಎಂದು ತಿಳಿಸಿದ್ದಾರೆ. ಕಾರ್ಯಕ್ರಮವನ್ನು ನಡೆಸಲು ವಿಶ್ವವಿದ್ಯಾಲಯದ ಅಧಿಕಾರಿಗಳಿಂದ ಪೂರ್ವಾನುಮತಿ ಪಡೆಯುವಲ್ಲಿ ಕಾಲೇಜು ಒಕ್ಕೂಟವೂ ವಿಫಲವಾಗಿದೆ ಎನ್ನಲಾಗಿದೆ.

ಓರಿ ಮತ್ತು ಉರ್ಫಿ ಮದುವೆ ಆಗ್ತಾರಾ

ಓರಿ ಹೇಳಿಕೊಂಡಿರುವ ಪ್ರಕಾರ, ಶ್ರೀಮಂತ ಜನರೇ ಓರಿಯನ್ನು ಪಾರ್ಟಿ ಕರೆಯುತ್ತಾರೆ ಮತ್ತು ತಮ್ಮ ಹೆಂಡತಿ, ಮಕ್ಕಳೊಂದಿಗೆ ಫೋಟೋಗೆ ಪೋಸು ನೀಡುವಂತೆ ಕೇಳಿಕೊಳ್ಳುತ್ತಾರೆ. ಹೀಗೆ ನಾನು ಫೋಟೋ ತೆಗೆಸಿಕೊಳ್ಳಲು ಮತ್ತು ಅವುಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳಲು ಹಣ ಪಡೆದುಕೊಳ್ಳುತ್ತೇನೆ. ಈ ಫೋಟೋಗಳಿಗಾಗಿ ಒಂದು ರಾತ್ರಿಯನ್ನು ಕನಿಷ್ಠ 20 ರಿಂದ 30 ಲಕ್ಷ ರೂಪಾಯಿ ಗಳಿಸುತ್ತೇನೆ ಎಂದು ಹೇಳಿಕೊಂಡಿದ್ದರು.

ಬಿಗ್ ಬಾಸ್ ಮನೆ ಸೇರಿದ್ದ ಓರ್ಹಾನ್ ಅವತ್ರಮಣಿ ಅಲಿಯಾಸ್ ಓರಿ, ಸೆಲಿಬ್ರೆಟಿ ಪಾರ್ಟಿಗಳಿಗೆ ಹೋಗಿ ಅಲ್ಲಿನ ನಟ, ನಟಿಯರ ಎದೆಯ ಮೇಲೆ ಕೈಯಿಟ್ಟು ಫೋಟೋ ತೆಗೆಸಿಕೊಳ್ಳುವುದರಲ್ಲೇ ಫೇಮಸ್. ಇದೀಗ ಉರ್ಫಿ ಹಾಗೂ ಓರಿ ಒಟ್ಟಾಗಿ ಕಾಣಿಸಿಕೊಂಡಿದ್ದಾರೆ. ಜತೆಗೆ ಉರ್ಫಿ ಅವರು ಓರಿ ಕೆನ್ನೆಗೆ ಮುತ್ತು ಕೊಟ್ಟಿದ್ದಾರೆ. ಮದುವೆ ಬಗ್ಗೆ ಮಾತನಾಡಿ, ತಮ್ಮ ಸಂಬಂಧದ ಬಗ್ಗೆ ಮತ್ತಷ್ಟು ಅನುಮಾನ ಹುಟ್ಟಿಸಿದ್ದಾರೆ. ಇದೀಗ ಓರಿ ಹಾಗೂ ಉರ್ಫಿ ಫೋಟೊಗಳು ವೈರಲ್ ಆಗಿವೆ. ಡಿನ್ನರ್‌ಗೆ ಉರ್ಫಿ ಹಸಿರು ಉಡುಗೆಯಲ್ಲಿ ಕಂಡು ಬಂದರೆ, ಓರಿ ಮರೂನ್ ಟಿ-ಶರ್ಟ್, ಮ್ಯಾಚಿಂಗ್ ಪ್ಯಾಂಟ್ ಮತ್ತು ಸ್ನೀಕರ್ಸ್‌ನಲ್ಲಿ ಕಾಣಿಸಿಕೊಂಡರು. ಪಾಪರಾಜಿಗಳಿಗೆ ಉರ್ಫಿ ಮತ್ತು ಓರಿ ಕ್ಯಾಮೆರಾಗೆ ಪೋಸ್ ನೀಡಿದ್ದಾರೆ. ಮದುವೆ ಬಗ್ಗೆ ಮಾತನಾಡಿ, ತಮ್ಮ ಸಂಬಂಧದ ಬಗ್ಗೆ ಮತ್ತಷ್ಟು ಅನುಮ